# ಯೇಸುವಿನ ಮನುಷ್ಯ ಜೀವನ-ಹಕ್ಕುಗಳು

## THE HUMAN LIFE-RIGHTS OF JESUS

-ಏಳನೆಯ ದೂತನ ಲೇಖನಗಳು

# ಯೇಸುವಿನ ಮನುಷ್ಯ ಜೀವನ-ಹಕ್ಕುಗಳು

## THE HUMAN LIFE-RIGHTS OF JESUS

ಯೇಸು ಕ್ರಿಸ್ತನ ಮಾನವ ಜೀವನ ಹಕ್ಕುಗಳ ಬಗ್ಗೆ ಪಾಸ್ಟರ್ ರಸ್ಸೆಲ್
ಬರಹಗಳ ಸಂಕಲನ

A compilation of the writings of Pastor Russell on The Human Life-**Rights of Jesus Christ**

*Published by:*

**The Bangalore Bible Students**

**Vivek Nagar, Bangalore.**

**www.foodfornewcreature.com**

| No. | CONTENTS | PAGE |
|---|---|---|
| 1. | R4637 । ಯೇಸು ಮನುಷ್ಯ ಜೀವನದ ಹಕ್ಕನ್ನು ಕಳೆದುಕೊಳ್ಳಲಿಲ್ಲ | 1 |
| 2. | R5085 । ಕ್ರಿಸ್ತನ ತ್ಯಾಗಬಲಿ | 4 |
| 3. | R5621 । ನಮ್ಮ ಕರ್ತನ ಮನುಷ್ಯ ಜೀವನ ಹಕ್ಕುಗಳನ್ನು ಹೊರಿಸುವದು ಮತ್ತು ಅನ್ವಯಿಸುವದು | 11 |
| 4. | R5341 । ರಕ್ತವು ಪ್ರಾಣಾಧಾರವಾಗಿದೆ | 21 |
| 5. | R4461 । ನಮ್ಮ ಪಾಶ್ಚಾತ್ಯ ಸಮಾವೇಶ ಪ್ರವಾಸ | 23 |
| 6. | R4905 । ನಮ್ಮ ಕರ್ತನ ಮನುಷ್ಯ ಜೀವನದ ಹಕ್ಕುಗಳ ಬಗ್ಗೆ ಪ್ರಶ್ನೆಗಳು | 24 |
| 7. | R4587 । ನಮ್ಮ ಈಸ್ಟರ್ ಪಾಠ | 28 |
| 8. | R4642 । ಜೀವ ನೀಡಲಾಗಿದೆ, ಪಾವತಿಸಲಾಗಿಲ್ಲ | 28 |
| 9. | ಪಾಸ್ಟರ್ ರಸ್ಸೆಲ್ ಹೇಳಿದ್ದೇನು? | 29 |

**R4637**

# ಯೇಸು ಮನುಷ್ಯ ಜೀವನದ ಹಕ್ಕನ್ನು ಕಳೆದುಕೊಳ್ಳಲಿಲ್ಲ

## (JESUS DID NOT FORFEIT EARTHLY LIFE)

(ಪಾಪ ಮಾಡಿ) ಕಳೆದುಕೊಂಡಂತಹ ಜೀವವು ತ್ಯಾಗಬಲಿಯ ಜೀವವಾಗಿರಲು ಸಾಧ್ಯವಿಲ್ಲ. ನಮ್ಮ ಕರ್ತನು (ಪಾಪ ಮಾಡಿ) ಜೀವವನ್ನು ಕಳೆದುಕೊಂಡಿದ್ದರೆ, ಅದು ತ್ಯಾಗಬಲಿಯ ಜೀವನವಾಗುತ್ತಿರಲಿಲ್ಲ. (ಮುಟ್ಟುಗೋಲು ಹೊಂದಿಕೊಂಡು) ಕಳೆದುಕೊಂಡಂತಹ ಜೀವವು ಅಂದರೆ ಅದು ಯಾವುದೋ ನ್ಯಾಯವಾದ ಕಾರಣಕ್ಕಾಗಿ ಆ ಜೀವವನ್ನು ತೆಗೆಯಲಾಗಿದೆ; ಆದರೆ ಯೇಸುವಿನ ಜೀವವನ್ನು ಯಾವುದೇ ಕಾರಣವಿಲ್ಲದೆ ತೆಗೆದುಕೊಳ್ಳಲಾಯಿತು. ಆತನು ಬಾಧೆಪಟ್ಟನು. ಆತನು ಹೇಗೆ ಬಾಧೆಪಟ್ಟನು ಮತ್ತು ಏಕೆ ಬಾಧೆಪಟ್ಟನು ಎಂಬುದರ ಕುರಿತು ಸತ್ಯವೇದದಲ್ಲಿ ನಮಗೆ ಸ್ಪಷ್ಟವಾಗಿ ತಿಳಿಸಿದೆ- “ಆತನು ತನ್ನನ್ನು ತಾನು ನಿಷ್ಕಳಂಕವಾಗಿ ಯಾವ ದೋಷವಿಲ್ಲದೆಯೂ ದೇವರಿಗೆ ಸಮರ್ಪಿಸಿದನು”. ಅಂದರೆ, ಆತನು ದೇವರ ಚಿತ್ತವನ್ನು ನೆರವೇರಿಸಲು ಉದ್ದೇಶಿಸಿದನು; ಆತನು ದೇವರ ಚಿತ್ತಕ್ಕೆ ತಲೆಬಾಗಿದನು; ಆತನು ತನ್ನ ಇಡೀ ಜೀವನವನ್ನು ದೇವರ ಚಿತ್ತವನ್ನು ನೆರವೇರಿಸಲು ಅರ್ಪಿಸಿದನು. ಕ್ರಿಸ್ತನ ನಿಷ್ಠೆ ಮತ್ತು ವಿಧೇಯತೆಯನ್ನು ಪೂರ್ಣವಾಗಿ ಪರೀಕ್ಷಿಸಲು, ದೇವರು ಆತನು “ಮರಣದವರೆಗೆ, ಶಿಲುಬೆಯ ಮರಣಕ್ಕೂ” ವಿಧೇಯನಾಗಿ ತನ್ನನ್ನು ಒಪ್ಪಿಸಿಕೊಡಬೇಕೆಂದು ಬಯಸಿದನು. ಆತನ ಜೀವವನ್ನು ದೇವರು ಅಥವಾ ಮನುಷ್ಯರು ಆತನಿಂದ ತೆಗೆದುಕೊಳ್ಳಲಿಲ್ಲ; ಆತನು ಸ್ವತಃ ಹೇಳಿದಂತೆ, ದೈವಿಕ ಏರ್ಪಾಡಿನ ಪ್ರಕಾರ ಆತನು ದೈವಿಕ ಸಹಾಯಕ್ಕಾಗಿ ಕರೆ ನೀಡಬಹುದಿತ್ತು ಮತ್ತು ಹನ್ನೆರಡು ಗಣಗಳಿಗಿಂತ (Legions) ಹೆಚ್ಚಾದ ದೂತರು ಆತನ ಜೀವವನ್ನು ರಕ್ಷಿಸಬಹುದಿತ್ತು: “ಯಾವ ಮನುಷ್ಯನಾದರೂ ನನ್ನ ಪ್ರಾಣವನ್ನು ನನ್ನಿಂದ ತೆಗೆಯುವುದಿಲ್ಲ; ಆದರೆ ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ.” ಹಾಗಾದರೆ, ಯೇಸುವಿನ ತ್ಯಾಗಬಲಿಯ ವಿಷಯದಲ್ಲಿ ಹೇಳುವದಾದರೆ, ಯಾವ ಮನುಷ್ಯನು ಆತನ ಜೀವವನ್ನು ತೆಗೆದುಕೊಂಡದ್ದೂ ಇಲ್ಲ, ದೇವರು ಅದನ್ನು ಬೇಡಿದ್ದೂ ಇಲ್ಲ, ಅದಕ್ಕೆ ಬದಲಾಗಿ ದೇವರು ಆತನಿಗೆ ತನ್ನ ನಿಷ್ಠೆಯನ್ನು ಪ್ರದರ್ಶಿಸುವ ಅವಕಾಶವನ್ನು ಕೊಟ್ಟನು. ಇದರಲ್ಲಿ ಒಂದು ತ್ಯಾಗಬಲಿ ಒಳಗೊಂಡಿತ್ತು, ಅಂದರೆ ದೇವರು ಏನು ಮಾಡಬೇಕೆಂದು ಬಯಸುತ್ತಾನೋ ಅದನ್ನು ನೆರವೇರಿಸುವ ಸ್ಥಾನದಲ್ಲಿ ಇರಿಸಲಾಯಿತು, ಅಂದರೆ ಆತನ ಎಲ್ಲಾ ಲೌಕಿಕ ಹಕ್ಕುಗಳು ಮತ್ತು ಸವಲತ್ತುಗಳನ್ನು ತ್ಯಜಿಸುವುದಾಗಿತ್ತು. ಯೇಸು ತನ್ನ ಮರಣದ ಸಮಯಕ್ಕೆ ಬಂದಾಗ, “ನಾನು ಇದನ್ನು ಅಂತಹ ಉದ್ದೇಶಕ್ಕಾಗಿ ಮತ್ತು ಅಂತಹ ವಿಷಯಕ್ಕಾಗಿ ಮಾಡುತ್ತೇನೆ ಮತ್ತು ಅಂತಹ ಉದ್ದೇಶಕ್ಕೆ ನನ್ನ ವಿಧೇಯತೆಯಲ್ಲಿ ಯಾವ ಅರ್ಹತೆ (ಮೌಲ್ಯ) ಇದೆಯೋ ಅದನ್ನು ನಾನು ಅನ್ವಯಿಸುತ್ತೇನೆ” ಎಂದು ಹೇಳುತ್ತಾ, ಆತನು ಅಂತಹ ಯಾವುದನ್ನೂ ಮಾಡಲಿಲ್ಲ. ಅಂತಹ ಯಾವುದೇ ವಿಷಯವನ್ನು ಆತನು ಮುಂದಾಗಿ ಅನ್ವಯಿಸಲಿಲ್ಲ. ಇಡೀ ಲೋಕದ ಮನುಕುಲದ ಪಾಪಗಳಿಗೆ ಕ್ರಿಸ್ತನ ಮರಣವನ್ನು ಈಡುಬಲಿಯಾಗಿ ಅರ್ಪಿಸಲಾಯಿತು ಎಂದು ಮಾತನಾಡುವಾಗ; “ಆತನು ಎಲ್ಲರಿಗೋಸ್ಕರ ವಿಮೋಚನೆಯ ಕ್ರಯವಾಗಿ (ಈಡುಬಲಿಯಾಗಿ) ತನ್ನನ್ನು ತಾನೇ ಒಪ್ಪಿಸಿಕೊಟ್ಟನು,” ಎಂದು ಹೇಳುವಾಗ, ನಾವು ದೈವಿಕ ವ್ಯವಸ್ಥೆಯ ಇತರ ವೈಶಿಷ್ಟ್ಯಗಳನ್ನು ಪರಿಗಣಿಸುತ್ತಿದ್ದೇವೆ, ಅದರ ಮೂಲಕವಾಗಿ ಕರ್ತನಾದ ಯೇಸು ಆ ಈಡುಬಲಿಯನ್ನು ಈ ಲೋಕದ ಮನುಕುಲಕ್ಕೆ ಆ ತ್ಯಾಗಬಲಿಯ ಅರ್ಹತೆಯನ್ನು (ಮೌಲ್ಯವನ್ನು) ಅನ್ವಯಿಸಲು ಸಾಧ್ಯವಾಗುತ್ತದೆ. ಇದು ತಕ್ಕ ಕಾಲದಲ್ಲಿ ನೆರವೇರುತ್ತದೆ (1 ತಿಮೊಥೆಯನಿಗೆ 2:5,6). ಇದು ಯೇಸು ಮರಣ ಹೊಂದಿದಾಗ ನೆರವೇರಲಿಲ್ಲ, ಆದರೆ ನಂತರ ಅದನ್ನು ನೆರವೇರಿಸಲಾಗುವದು.

ನಮ್ಮ ಕರ್ತನು ಮರಣದವರೆಗೂ ತನ್ನ ವಿಧೇಯತೆಯನ್ನು ತೋರಿಸಿದ ನಂತರ, ತಂದೆಯು ಆತನಿಗೆ ತಿಳಿಸಿದ್ದಕ್ಕಿಂತ ಅಥವಾ ವಾಗ್ದಾನ ಮಾಡಿದ್ದಕ್ಕಿಂತ ಹೆಚ್ಚಾಗಿ ಪೂರೈಸಲು ಸಂತೋಷಪಟ್ಟನು. ಆದ್ದರಿಂದ ತಂದೆಯು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು - ಆತನು ಮೊದಲು ಮನುಷ್ಯನಾಗಿದ್ದ ಸ್ಥಿತಿಯಲ್ಲಿ ಎಬ್ಬಿಸಲಿಲ್ಲ - ಆದರೆ ದೈವಿಕ ಸ್ವಭಾವದ ಅದ್ಭುತ ಸ್ಥಿತಿಯಲ್ಲಿ

ಎಬ್ಬಿಸಲ್ಪಟ್ಟನು, ಅದು "ಸಕಲ ದೂತರು, ರಾಜ್ಯತ್ವ ಅಧಿಕಾರ, ಪ್ರಭುತ್ವಾದಿಗಳಿಗಿಂತ" ಮೇಲಾಗಿತ್ತು. ತಂದೆಯು ನಮ್ಮ ಕರ್ತನಾದ ಯೇಸುವನ್ನು ಈ ಭೂಮಿಯಲ್ಲಿನ ಮನುಷ್ಯ ಸ್ವಭಾವಕ್ಕೆ ಪುನಃ ಸ್ಥಾಪಿಸಬಹುದಾಗಿತ್ತು; ಆದರೆ ನಾವು ಅರ್ಥಮಾಡಿಕೊಂಡಂತೆ, ಹಾಗೆ ಮಾಡಿದ್ದರೆ, ಈ ವಿಶೇಷ ವಿಧೇಯತೆಗೆ ವಿಶೇಷ ಪ್ರತಿಫಲ ಸಿಗುತ್ತದೆ ಎಂಬ ದೇವರ ವಾಗ್ದಾನಕ್ಕೆ ಅನುಗುಣವಾಗಿ ಅದು ಇರುತ್ತಿರಲಿಲ್ಲ - "ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ" (ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ.)

## ಯೇಸುವಿಗೆ ಈ ಭೂಮಿಯ (ಮನುಷ್ಯ) ಸ್ವಭಾವದ ಹಕ್ಕಿತ್ತು
### (JESUS HAD THE RIGHT TO THE EARTHLY NATURE)

ಆದ್ದರಿಂದ, ನಮ್ಮ ಕರ್ತನಾದ ಯೇಸುವನ್ನು ತಂದೆಯು ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎಬ್ಬಿಸಿದಾಗ, ಆತನು ಈಗ ಹೊಂದಿರುವ ಈ ಮಹಿಮೆಯ (ದೈವಿಕ) ಸ್ವಭಾವವು ಭೂಮಿಯ (ಮನುಷ್ಯ) ಸ್ವಭಾವಕ್ಕಿಂತ ಬಹಳ ಉತ್ತಮವಾಗಿದೆ – ಇದರೊಂದಿಗೆ ಆತನಿಗೆ ಈ ಭೂಮಿಯ ಸ್ವಭಾವಕ್ಕೂ ಹಕ್ಕಿತ್ತು. ಆತನು ಖಂಡಿತವಾಗಿಯೂ ಉನ್ನತ ಸ್ಥಿತಿಯಾದ ದೈವಿಕ ಸ್ವಭಾವವನ್ನು ಈ ಭೂಮಿಯ (ಮನುಷ್ಯ) ಸ್ವಭಾವದ ಸ್ಥಿತಿಗೆ ಬದಲಾಯಿಸುವ ಬಗ್ಗೆ ಯೋಚಿಸುತ್ತಿರಲಿಲ್ಲ; ಮತ್ತು ವಿಶೇಷವಾಗಿ ಅಂತಹ ಬದಲಾವಣೆಯು ದೇವರ ಸಂಪೂರ್ಣ ಯೋಜನೆಯನ್ನು ನಿರಾಶೆಗೊಳಿಸುತ್ತದೆ. ಈ ವಿಷಯವನ್ನು ವಿವರಿಸುವುದಾದರೆ; ಒಂದು ವೇಳೆ ನಮ್ಮ ಕರ್ತನಾದ ಯೇಸು, ಸತ್ತವರೊಳಗಿಂದ ತಂದೆಯ ಮಹಿಮೆಗೆ, ದೈವಿಕ ಸ್ವಭಾವಕ್ಕೆ ಏರಿಸಲ್ಪಟ್ಟ ನಂತರ, "ತಂದೆಯೇ, ನನ್ನನ್ನು ಹೀಗೆ ಉನ್ನತ ಸ್ಥಾನಕ್ಕೆ ಏರಿಸುವಲ್ಲಿ ನನ್ನ ಕಡೆಗೆ ನಿಮ್ಮ ಕರುಣೆ ಮತ್ತು ಅನುಗ್ರಹವನ್ನು ತೋರಿಸಿದ್ದಕ್ಕಾಗಿ ನಾನು ನಿಜವಾಗಿಯೂ ಪ್ರಶಂಸಿಸುತ್ತೇನೆ; ಆದರೆ ಈಗ ನಾನು ಮನುಷ್ಯ ಸ್ವಭಾವವನ್ನು ಬಯಸುತ್ತೇನೆ" ಎಂದು ಹೇಳಿದ್ದರೆ, ಎಂದು ಭಾವಿಸೋಣ. ಆತನು ಅಂತಹ ಮಾತನ್ನು ಹೇಳಿದನೆಂದು ನಾವು ಊಹಿಸಬಹುದಾದರೆ, ನಾವು ಆತನನ್ನು ಹಾಗೆ ನೋಡಲು ಸಾಧ್ಯವಿಲ್ಲ. ಆದರೆ, ಆತನು ಮನುಷ್ಯ ಸ್ವಭಾವದ ಹಕ್ಕನ್ನು ಹೊಂದಿರುತ್ತಿದ್ದನು. ಏಕೆಂದರೆ ಆತನು ತನ್ನ ಮನುಷ್ಯ ಜೀವನದ ಹಕ್ಕನ್ನು ಎಂದಿಗೂ ಕಳೆದುಕೊಂಡಿಲ್ಲ- ಆತನು ದೇವರಿಗೆ ವಿಧೇಯನಾಗಿ ತನ್ನನ್ನು ತಾನು ಒಪ್ಪಿಸಿಕೊಟ್ಟನು; ಮತ್ತು ಯೇಸುವಿನ ಪುನರುತ್ಥಾನದಲ್ಲಿ ತಾನು ಮನುಷ್ಯ ಸ್ವಭಾವಕ್ಕೆ ಆಧ್ಯತೆ ನೀಡಿದ್ದರೆ, ಆತನು ಅದನ್ನು ಮತ್ತೆ ಪಡೆಯುವುದು ಸಂಪೂರ್ಣವಾಗಿ ಸರಿಯಾಗಿರುತ್ತಿತ್ತು. ಆದರೆ ಹಾಗೆ ಅದನ್ನು ಮರಳಿ ಪಡೆದುಕೊಂಡಿದ್ದರೆ, ಆತನು ಆರಂಭ ಮಾಡಿದ ಎಲ್ಲಾ ಕೆಲಸಗಳನ್ನು ರದ್ದುಗೊಳಿಸಿದಂತಾಗುತ್ತಿತ್ತು. ಅತ್ಯಧಿಕವಾಗಿ ಅಪೇಕ್ಷಿಸುವಂತಹ ಪರಲೋಕದ (ದೈವಿಕ) ಸ್ವಭಾವವನ್ನು ಬಿಟ್ಟುಕೊಟ್ಟಂತಾಗಿರುತ್ತಿತ್ತು, ಈ ವಿಷಯವನ್ನು ಕುರಿತು ಯೇಸು ತಾನೇ ಹೀಗೆಂದಿದ್ದಾನೆ, "ತಂದೆಯೇ ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು." ಈ ರೀತಿಯಾಗಿ ಯೇಸು ಈ ವಿಷಯದಲ್ಲಿ ತನ್ನದೇ ಆದ ಆದ್ಯತೆಯನ್ನು ವ್ಯಕ್ತಪಡಿಸುವುದು ಮಾತ್ರವಲ್ಲದೆ, ದೈವಿಕ ಯೋಜನೆ, ಕ್ರಮ ಮತ್ತು ವ್ಯವಸ್ಥೆಯನ್ನು ಸಹ ನಿರ್ಲಕ್ಷಿಸುತ್ತಿದ್ದನು, ಏಕೆಂದರೆ ದೇವರ ಚಿತ್ತವೇನೆಂದರೆ ಯೇಸು ಈ ಉನ್ನತ ಸ್ವಭಾವವನ್ನು ಹೊಂದಬೇಕು ಮತ್ತು ಇದರೊಂದಿಗೆ ಯೇಸುವಿಗೆ ಈ ಭೂಮಿಯ ಜೀವನ ಮತ್ತು ಭೂಮಿಯ ಸ್ವಭಾವದ ಹಕ್ಕನ್ನು ಹೊಂದಿರಬೇಕು, ಇದನ್ನು ಅಂದರೆ ಈ ಭೂಮಿಯ (ಮನುಷ್ಯ) ಸ್ವಭಾವ, ಅದರೊಂದಿಗೆ ಅದರ ಎಲ್ಲಾ ಹಕ್ಕುಗಳು ಮತ್ತು ಸವಲತ್ತುಗಳನ್ನು "ಈಡುಬಲಿ"ಯಾಗಿ ಅಥವಾ ಸರಿಸಮಾನವಾದ ಬೆಲೆಯಾಗಿ, ಆದಾಮನು ಕಳೆದುಕೊಂಡಂತಹ ಜೀವ ಮತ್ತು ಈ ಭೂಮಿಯ ಎಲ್ಲಾ ಸವಲತ್ತುಗಳನ್ನು ಆದಾಮ ಮತ್ತು ಆತನ ಸಂತತಿಗೆ ನೀಡಬೇಕೆಂದು ದೇವರ ಚಿತ್ತವಾಗಿತ್ತು.

# ಒಡಂಬಡಿಕೆ ಮಾಡಿ ತ್ಯಾಗಬಲಿ ಸಲ್ಲಿಸುವವರಿಗೆ ಕ್ರಿಸ್ತನ ಅರ್ಹತೆಯನ್ನು (ಪುಣ್ಯವನ್ನು) ವಿಧಿಸುವುದು(ಹೊರಿಸುವುದು)

## (IMPUTING HIS MERIT NOW TO THOSE WHO COVENANT TO SACRIFICE)

ವಾಸ್ತವವಾಗಿ ನಮ್ಮ ಕರ್ತನು ಇನ್ನೂ ಲೋಕದ ಎಲ್ಲಾ ಜನರನ್ನು ಈಡುಬಲಿಯ ಮೂಲಕ ವಿಮೋಚಿಸಿಲ್ಲ, ಆದರೆ 1800 ವರ್ಷಗಳ ಹಿಂದೆಯೇ ತ್ಯಾಗಬಲಿ ಮಾಡುವ ಅರ್ಥದಲ್ಲಿ ತನ್ನನ್ನು ತಾನೇ ಅರ್ಪಿಸಿದನು. ಆದರೆ ಆತನು ಇನ್ನೂ ಇಡೀ ಲೋಕಕ್ಕೆ ಈಡುಬಲಿಯ-ಬೆಲೆಯನ್ನು ಅರ್ಹತೆಯಾಗಿ (ಪುಣ್ಯವಾಗಿ) ಅನ್ವಯಿಸಿಲ್ಲ. ಇಷ್ಟು ದಿನ ಕ್ರಿಸ್ತನು ಈಡುಬಲಿಯ-ಬೆಲೆಯೊಂದಿಗೆ ಏನು ಮಾಡುತ್ತಿದ್ದಾನೆ? ಈಡುಬಲಿಯ-ಬೆಲೆಯನ್ನು ತಂದೆಯ ಕೈಗಳಲ್ಲಿ ಒಪ್ಪಿಸಲಾಯಿತು. ಯೇಸು ಮರಣಹೊಂದಿದಾಗ ಆತನು, "ನಿನ್ನ ಕೈಗಳಲ್ಲಿ ನನ್ನ ಆತ್ಮವನ್ನು ಒಪ್ಪಿಸುತ್ತೇನೆ" ಎಂದು ಹೇಳಿದನು. ಆದ್ದರಿಂದ ಮಹಾನ್ ಮೆಸ್ಸೀಯನಾಗಿ, ಕರ್ತನಾದ ಯೇಸು ಇಡೀ ಲೋಕದ ಮನುಕುಲಕ್ಕೆ- ಅಂದರೆ ಆದಾಮ ಮತ್ತು ಆತನ ಎಲ್ಲಾ ಸಂತತಿಗೆ- ದಯಪಾಲಿಸಲು ಉದ್ದೇಶಿಸಿರುವ ಆ ಎಲ್ಲಾ ವಿಷಯಗಳಿಗೆ ಸಂಪೂರ್ಣ ಹಕ್ಕನ್ನು ಹೊಂದಿದ್ದಾನೆ. ಕ್ರಿಸ್ತನು ಅವರೆಲ್ಲರಿಗೂ ದೇವರ ಜನರಾಗುವ ಅವಕಾಶವನ್ನು ನೀಡುತ್ತಾನೆ. ಈ ನಡುವೆ ಕ್ರಿಸ್ತನು ಆ ಅರ್ಹತೆಯೊಂದಿಗೆ(ಪುಣ್ಯ) (MERIT) ಏನು ಮಾಡುತ್ತಿದ್ದಾನೆ? ಈಗ (ಈ ಸುವಾರ್ತೆ ಯುಗದಲ್ಲಿ) ಆದಾಮನ ಸಂತತಿಯ ಯಾವುದೇ ವ್ಯಕ್ತಿಯಾದರೂ ಸರಿ, ಅವರು ಕ್ರಿಸ್ತನ ಹೆಜ್ಜೆಯ ಜಾಡನ್ನು ಹಿಂಬಾಲಿಸಬೇಕು ಮತ್ತು ಕ್ರಿಸ್ತನು ತನ್ನ ಜೀವನವನ್ನು ಅರ್ಪಿಸಿದಂತೆ ತನ್ನ ಲೌಕಿಕ(ಭೂಮಿಯ) ಜೀವನವನ್ನು ತ್ಯಾಗ ಮಾಡಬೇಕು ಎಂಬ ಷರತ್ತಿನ ಮೇಲೆ ಆ ವ್ಯಕ್ತಿಗೆ ತನ್ನ ಅರ್ಹತೆಯನ್ನು(ಪುಣ್ಯವನ್ನು) (MERIT) ವಿಧಿಸುತ್ತಾನೆ(IMPUTES). ಈ ರೀತಿ ಕರ್ತನ ಬಳಿ ಬರುವ ಪ್ರತಿಯೊಬ್ಬರಿಗೂ ಬಲಿಯ ಮೂಲಕ ಪ್ರತಿಷ್ಠೆ ಮಾಡಿಕೊಂಡ ಆ ಕ್ಷಣದಿಂದ ಕರ್ತನು ತನ್ನ ಅರ್ಹತೆಯನ್ನು(ಪುಣ್ಯವನ್ನು) (MERIT) ವಿಧಿಸುತ್ತಾನೆ(IMPUTES), ಈ ರೀತಿ ಕರ್ತನ ಅರ್ಹತೆಯನ್ನು(ಪುಣ್ಯವನ್ನು) ಅವರಿಗೆ ವಿಧಿಸುವುದರಿಂದ, ತಂದೆಯು ಅವರನ್ನು ಅಂಗೀಕರಿಸುತ್ತಾನೆ ಮತ್ತು ನೂತನ ಸೃಷ್ಟಿಯಾಗಿ ಭ್ರೂಣಾಂಕುರ (BEGETS) ಹೊಂದುವಂತೆ ಮಾಡುತ್ತಾನೆ. ಅಂದಿನಿಂದ ಅವರು ನೂತನ ಸೃಷ್ಟಿಗಳು, ಮತ್ತು ಯೇಸುವಿನ ಜೀವನವನ್ನು ತ್ಯಾಗಬಲಿಯಲ್ಲಿ ತ್ಯಜಿಸಿದಂತೆ ಅವರ ಲೌಕಿಕ ಜೀವನವನ್ನು ತ್ಯಜಿಸಲಾಗುತ್ತದೆ. ಆದ್ದರಿಂದ ಕ್ರಿಸ್ತನ ಮರಣದ ಅರ್ಹತೆಯನ್ನು(ಪುಣ್ಯವನ್ನು) (MERIT) ಅನ್ವಯಿಸುವುದರ ಮೂಲಕ ಈ ವಿಶೇಷ ವ್ಯವಸ್ಥೆಯ ಅಡಿಯಲ್ಲಿ ಬರಲು ಆಹ್ವಾನಿಸಲ್ಪಟ್ಟಿರುವ ಇವರೆಲ್ಲರೂ ಆ ಅರ್ಹತೆಯನ್ನು(ಪುಣ್ಯವನ್ನು) (MERIT) ವಿಧಿಸುವುದಕ್ಕೆ(Imputation of that merit) (ಹೊರಿಸುವುದಕ್ಕೆ) ಒಳಗಾಗುತ್ತಾರೆ. ಆದರೆ ಅದನ್ನು ನೀಡಲಾಗುವುದಿಲ್ಲ(Not the bestowment). ಕ್ರಿಸ್ತನ ಅರ್ಹತೆಯನ್ನು(ಪುಣ್ಯವನ್ನು) (MERIT) ವಿಧಿಸುವುದು(ಹೊರಿಸುವುದು) ಮತ್ತು ಅದನ್ನು ದಯಪಾಲಿಸುವುದು-ಇವೆರಡರ ನಡುವೆ ವ್ಯತ್ಯಾಸವಿದೆ. ಉದಾಹರಣೆಗೆ, ನಾವು ನಿಮಗೆ $100 ಹಸ್ತಾಂತರಿಸಿದರೆ ನಿಮಗೆ $100 ನೀಡುತ್ತೇವೆ, ಅಂದರೆ ಅದನ್ನು ನೇರವಾಗಿ ನಿಮಗೆ ಕೊಡುತ್ತೇವೆ. ಆದರೆ ನಾವು ನಿಮ್ಮ ನೋಟನ್ನು $100ಗೆ ಅನುಮೋದಿಸಿದರೆ(we endorse your note) ನಾವು ನಿಮಗೆ $100 ಅನ್ನು ವಿಧಿಸುತ್ತಿದ್ದೇನೆ (imputing to you). ಕ್ರಿಸ್ತನ ಸಭೆಯ ವಿಷಯದಲ್ಲಿ ಅದು ವಿಧಿಸುವುದು(ಹೊರಿಸುವುದು): ವಾಸ್ತವವಾಗಿ ಆ ಅರ್ಹತೆಯನ್ನು ಸಭೆಗೆ ನೀಡುತ್ತಿಲ್ಲ. ನಮ್ಮ ಕರ್ತನು ನೀಡಬೇಕಾಗಿರುವುದು ಮನುಷ್ಯ ಜೀವನದ ಹಕ್ಕನ್ನು, ಮೂಲತಃ ಆದಾಮನಿಗೆ ಇದ್ದ ಮತ್ತು ಆತನು ಹೊಂದಿದ್ದ ಎಲ್ಲವನ್ನೂ ಕಳೆದುಕೊಂಡ ಮಾನವ ಸವಲತ್ತುಗಳನ್ನು ಮತ್ತೆ ನೀಡಬೇಕಾಗಿದೆ. ನಮ್ಮ ಕರ್ತನು ಹೊಂದಿದ್ದ ಮನುಷ್ಯ ಜೀವನದ ಹಕ್ಕನ್ನು ಬಿಟ್ಟುಕೊಡಬೇಕಾಗಿದೆ, ಆದರೆ ಕರ್ತನು ಅದನ್ನು ಈಗ ಬಿಟ್ಟುಕೊಡುತ್ತಿಲ್ಲ. ಆತನು ಅದನ್ನು ತಕ್ಕ ಕಾಲದಲ್ಲಿ ಈ ಲೋಕಕ್ಕೆ ನೀಡಲು ಇಟ್ಟುಕೊಂಡಿದ್ದಾನೆ. ಕರ್ತನು ಅದನ್ನು ಈಗ ನಮ್ಮ ಮೇಲೆ ವಿಧಿಸುತ್ತಿದ್ದಾನೆ(ಹೊರಿಸುತ್ತಿದ್ದಾನೆ), ಅಥವಾ ಪರಲೋಕ ತಂದೆಯೊಂದಿಗಿನ ನಮ್ಮ ಒಪ್ಪಂದದ ಅನುಮೋದನೆಗೆ ಅನುಗುಣವಾದದ್ದನ್ನು ವಿಧಿಸುತ್ತಿದ್ದಾನೆ.

## ಲೋಕವು ತಮಗಾಗಿ ಖರೀದಿಸಿದ (ಕೊಂಡುಕೊಂಡ) ಭೂಮಿಯ ಜೀವನ-ಹಕ್ಕಗಳನ್ನು ಉಳಿಸಿಕೊಳ್ಳುತ್ತದೆ

### (THE WORLD WILL RETAIN THE EARTHLY LIFE-RIGHTS PURCHASED FOR THEM)

ಈ ಅರ್ಹತೆಯನ್ನು(ಪುಣ್ಯವನ್ನು) (MERIT) ಲೋಕದ ಪರವಾಗಿ ನೀಡಬೇಕೆಂದು ಮೇಲೆ ಹೇಳಲಾದ ಹೇಳಿಕೆಯನ್ನು ನೋಡುವುದಾದರೆ, ನಾವು ಅದನ್ನು ಅರ್ಹತೆಗೊಳಿಸಬೇಕು ಮತ್ತು ಆ ಅರ್ಹತೆಯನ್ನು ಇಡೀ ಲೋಕಕ್ಕೆ ಈಗ ನೀಡಬಾರದು, ಆದರೆ ಕೇವಲ, ಧರ್ಮಶಾಸ್ತ್ರವು ವಿವರಿಸುವಂತೆ, "ಎಲ್ಲಾ ಜನರಿಗೆ" ಎಂದು ಹೇಳಬೇಕು. ಆದರೂ "ಜನರು" ಎಂದರೆ ಇಡೀ ಲೋಕದ ಜನರಲ್ಲ, ಆದರೆ ಮಹಾ ಮಧ್ಯಸ್ಥ ರಾಜ್ಯದ ಅವಧಿಯಲ್ಲಿ ದೇವರೊಂದಿಗೆ ಒಡಂಬಡಿಕೆಯ ಸಂಬಂಧಕ್ಕೆ ಬರುವ ಜನರಿಗೆ ಮಾತ್ರ ಅನ್ವಯವಾಗುತ್ತದೆ. ಯಾರಾದರೂ ಈ ಅವಕಾಶವನ್ನು ತಿರಸ್ಕರಿಸಿ, ಈ ಜನರಲ್ಲಿ ಒಬ್ಬರಾಗುವುದಕ್ಕೆ ನಿರಾಕರಿಸುತ್ತಾರೋ, ಅಂಥವರು ತಮಗೆ ಒದಗಿಸುವ ಅವಕಾಶಗಳನ್ನು ತಿರಸ್ಕರಿಸುತ್ತಾರೆ, ಆದ್ದರಿಂದ ಅಂಥವರು ಮನುಷ್ಯ ಜೀವನಕ್ಕೆ ಸಿಗುವ ಯಥಾಸ್ಥಿತಿಯನ್ನು ತಿರುಗಿ ಪಡೆದು ಕೊಳ್ಳುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಅಂಥವರನ್ನು ಪರಿಪೂರ್ಣರನ್ನಾಗಿ ಮಾಡಲು ಸಾಧ್ಯವಿಲ್ಲ. ಅವರಿಗೆ ಮನುಷ್ಯನ ಹಕ್ಕುಗಳು ಸಿಗುವುದೇ ಇಲ್ಲ. ಅವರು ಮರಣದಿಂದ ಎಚ್ಚೆತ್ತುಕೊಳ್ಳುತ್ತಾರೆ, ಆದರೆ ಇದು ಯಥಾಸ್ಥಿತಿಯನ್ನು ತಿರುಗಿ ಪಡೆದುಕೊಳ್ಳುವಂತಾಗುವುದಿಲ್ಲ. ಇದು ಕೇವಲ ಮೊದಲ ಹೆಜ್ಜೆಯಾಗಿದ್ದು, ಅವರು ಆಯ್ಕೆ ಮಾಡಿದರೆ, ಯಥಾಸ್ಥಿತಿಯನ್ನು ಪಡೆದು ಆಶೀರ್ವಾದಗಳಿಗೆ ಕಾರಣವಾಗುವ ಮುಂದಿನ ಹಂತಗಳಿಗೆ ಹೋಗಬಹುದು. ಆ ಮಹಾನ್ ಮಧ್ಯಸ್ಥ, ಮಹಾನ್ ಪ್ರವಾದಿ, ಯಾಜಕ ಮತ್ತು ರಾಜ, ಮಹಾನ್ "ಪ್ರವಾದಿಯನ್ನು (ಮೋಶೆಯ ಹಾಗೆ) ನಿನ್ನ ಸಹೋದರರಲ್ಲಿ ಏರ್ಪಡಿಸುವೆನು." – ಯೇಸು ಅದರ ಶಿರಸ್ಸಾಗಿಯೂ ಮತ್ತು ಈ ಸುವಾರ್ತಾಯುಗದ ಸಭೆಯು ಆತನ ಸದಸ್ಯರಾಗಿದ್ದಾರೆ—"ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನು ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು." ಅಪೊಸ್ತಲರ ಕೃತ್ಯಗಳು 3 : 19-21, 23

"ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ, ಆದರೆ ದೇವರ ಕೋಪವು ಅವನ ಮೇಲೆ ನೆಲೆಗೊಳ್ಳುತ್ತದೆ," ಎಂಬ ಸತ್ಯವೇದ ವಾಕ್ಯಕ್ಕೆ ಇದು ಹೊಂದಿಕೆಯಾಗುತ್ತದೆ, ದೇವರ ಕೋಪವು ಅವನ ಮೇಲೆ ಮುಂದುವರಿಯುತ್ತದೆ; ಅವನು ಎಂದಿಗೂ ದೇವರ ಕೋಪದಿಂದ ಹೊರಬರುವುದಿಲ್ಲ. ಅವನಿಗೆ ಅವಕಾಶವಿತ್ತು; ಅವನಿಗೆ ಸತ್ಯದ ಜ್ಞಾನವನ್ನು ಕೊಡಲಾಯಿತು; ಇಸ್ರಾಯೇಲಿನಾದ್ಯಂತ ಎಲ್ಲರಿಗೂ ವಿಸ್ತರಿಸಲಾಗುವ ಹೊಸ ಒಡಂಬಡಿಕೆಯ ಆಶೀರ್ವಾದಗಳ ವ್ಯವಸ್ಥೆಯಡಿಯಲ್ಲಿ ಬರುವ ಅವಕಾಶಕ್ಕೆ ಆತನನ್ನು ತರಲಾಗುವದು. ಆದರೆ ಆ ಅವಕಾಶವನ್ನು ಬಳಸಿಕೊಳ್ಳಲು ಮತ್ತು ದೇವರ ಜನರಲ್ಲಿ ಒಬ್ಬನಾಗಲು ಅವನು ವಿಫಲನಾದರೆ ಅವನು ಎಂದಿಗೂ ದೇವರ ಕೋಪದಿಂದ ಹೊರಬರುವುದಿಲ್ಲ. ಅವನು ದೇವರ ಮೂಲ ಕೋಪದ ಅಡಿಯಲ್ಲಿ(under the original wrath of God) ಮತ್ತು ಸಾವಿರ ವರ್ಷ ಯುಗದ ಅಂತ್ಯದವರೆಗೂ ಹೋಗದೆ—ಪುನಃ ಸ್ಥಾಪಿಸಲ್ಪಟ್ಟವರಲ್ಲಿ ಒಬ್ಬನಾಗದೆ ಸಾಯುತ್ತಾನೆ.

-------------------

**R5085**

## ಕ್ರಿಸ್ತನ ತ್ಯಾಗಬಲಿ

### (THE SACRIFICE OF THE LORD)

ಯೊರ್ದನಿನ್ನಲ್ಲಿ ನಮ್ಮ ಕರ್ತನು ಮರಣ ಪರ್ಯಂತ ತನ್ನನ್ನು ತಾನು ಪ್ರತಿಷ್ಠಿಸಿಕೊಂಡನು. ಅಂದರೆ ಆತನು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಪಡೆದುಕೊಂಡನು. ಕರ್ತನು ಹೀಗೆಂದನು, "ಇನ್ನು

ಮುಂದೆ, ನನಗೆ ನನ್ನ ಸ್ವಂತ ಚಿತ್ತ ಏನೂ ಇರುವುದಿಲ್ಲ ತಂದೆಯೇ, ನಿನ್ನ ಚಿತ್ತ ಏನಾದರೂ ಇರಲಿ, ಅದು ನನ್ನ ಚಿತ್ತವಾಗಿರುತ್ತದೆ. ನೀನು ನನಗೆ ಏನು ಮಾಡಬೇಕೆಂದು ಬಯಸುವಿಯೊ ಅದೆಲ್ಲವನ್ನೂ ನಾನು ಮಾಡುತ್ತೇನೆ; ದೈವಿಕ ಪ್ರಮಾಣಕ್ಕೆ ಅಗತ್ಯವಿರುವ ಕೆಲಸಗಳನ್ನು ವಿಧೇಯತೆಯಿಂದ ಮಾಡುವುದು ಮಾತ್ರವಲ್ಲದೆ ಧರ್ಮಶಾಸ್ತ್ರ, ಪುಸ್ತಕದಲ್ಲಿ ಬರೆಯಲಾದ ಎಲ್ಲಾ ವಿಷಯಗಳನ್ನು ಮಾಡಿ ನೆರವೇರಿಸುತ್ತೇನೆ—ಹಾಗೆ ಮಾಡಲು ವಿಫಲನಾದರೆ ಅದು ಪಾಪವಾಗುತ್ತದೆ. ನಾನು ನನ್ನ ಜೀವನವನ್ನು ತ್ಯಾಗ ಮಾಡಿದ್ದೇನೆ. ನಿನ್ನ ದೈವಿಕ ಮಾರ್ಗದರ್ಶನದ ಮೂಲಕ ಮತ್ತು ನಿನ್ನ ವಾಕ್ಯಗಳ ಮೂಲಕ ನನಗೆ ಮಾರ್ಗದರ್ಶನ ನೀಡು, ಇದರಿಂದ ನಾನು ನಿನ್ನ ಚಿತ್ತವನ್ನು ತಿಳಿದು ಅದನ್ನು ಮಾಡಬಲ್ಲೆ." ಇದು ಲೋಕಕ್ಕೆ ಜೀವವನ್ನು ಕೊಡುವ ಅರ್ಥದಲ್ಲಿ ಅಲ್ಲ; ಏಕೆಂದರೆ ಕ್ರಿಸ್ತನು ದೇವರಿಗೆ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿದ್ದನು. ಆತನು ದೇವರಿಗೆ ತನ್ನ ಪ್ರತಿಷ್ಠೆಯನ್ನು ಸಮರ್ಪಿಸಿದಾಗ, ಆತನು ಮರಣವನ್ನು ಸಹ ಎದುರಿಸಲು ಮತ್ತು ದೇವರ ಚಿತ್ತವಿದ್ದರೆ ತನ್ನ ಅಸ್ತಿತ್ವವನ್ನು ಸಹ ತ್ಯಾಗಮಾಡಲು ಸಿದ್ಧನಾಗಿದ್ದನು.—ಕೀರ್ತನೆಗಳು 40:7,8; ಇಬ್ರಿಯ 10:7.

ಯೇಸು ತಾನು ಪ್ರತಿಷ್ಠೆಮಾಡಿಕೊಂಡ ನಂತರ ತನ್ನ ಸೇವೆಯನ್ನು ಪ್ರಾರಂಭಿಸಿದನು. ತಂದೆಯ ಚಿತ್ತವನ್ನು ಪೂರೈಸುವ ಸೇವೆಯಲ್ಲಿ ಆತನು ಮುಂದುವರೆದಂತೆ, ಪುಸ್ತಕದಲ್ಲಿ ಬರೆಯಲಾದ ಎಲ್ಲದಕ್ಕೂ ಆತನು ತನ್ನನ್ನು ಒಪ್ಪಿಸಿಕೊಟ್ಟನು. ಆತನ ಹೃದಯದ ಭಾಷೆ(ಭಾವನೆ) ಹೀಗಿತ್ತು, "ಇಗೋ, ಓ ದೇವರೇ, ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ; ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ." (ಇಬ್ರಿಯ 10 : 7), ಮತ್ತು ತನ್ನನ್ನು ತಾನು ದೇವರಿಗೆ ಸಲ್ಲಿಸಿಕೊಟ್ಟಾಗ ತನ್ನ ಶಕ್ತಿ ಮತ್ತು ಬಲವನ್ನು ಕೊಟ್ಟನು, ಎಷ್ಟರ ಮಟ್ಟಿಗೆ ಅಂದರೆ ಪ್ಯಾಲೆಸ್ಟೈನ್ ಮತ್ತು ಅದರಾಚೆಗಿನ ಜನರ ದೊಡ್ಡ ಸಮೂಹಗಳು "ಆತನ ಉಪದೇಶವನ್ನು ಕೇಳುವದಕ್ಕೂ ತಮ್ಮ ರೋಗಗಳಿಂದ ಸ್ವಸ್ಥರಾಗುವದಕ್ಕೂ ಬಂದರು; ಅಶುದ್ಧಾತ್ಮಗಳಿಂದ ಪೀಡಿತರಾದವರೂ ಬಂದು ಸ್ವಸ್ಥರಾದರು. ಆಗ ಸಮೂಹವೆಲ್ಲಾ ಆತನನ್ನು ಮುಟ್ಟಬೇಕೆಂದು ಪ್ರಯತ್ನಿಸಿದರು; ಯಾಕಂದರೆ ಆತನಿಂದ ಶಕ್ತಿಯು ಹೊರಟು ಅವರೆಲ್ಲರನ್ನು ಸ್ವಸ್ಥಮಾಡಿತು." (ಲೂಕ 6 : 17-19) ಆತನು ತನ್ನ ಶಕ್ತಿಯನ್ನು ಉಳಿಸಿಕೊಳ್ಳುವ ಉದ್ದೇಶಕ್ಕಾಗಿ ಏನ್ನನ್ನೂ ತಡೆಹಿಡಿಯಲಿಲ್ಲ, ಆದರೆ ಅದು ತಂದೆಯ ಚಿತ್ತವೆಂದು ಅರ್ಥಮಾಡಿಕೊಂಡು ಅದಕ್ಕೆ ವಿಧೇಯನಾಗಿ ಪ್ರತಿದಿನ ತನ್ನ ಜೀವವನ್ನು ನೀಡುತ್ತಿದ್ದನು; ಆದುದರಿಂದ ಆತನು ದೇವರಿಗೆ ಮೆಚ್ಚುಗೆಯಾದದ್ದನ್ನೇ ಮಾಡುತ್ತಿದ್ದನು – ದೇವರು ಅವನಿಂದ ಬಯಸಿದ್ದನ್ನೆಲ್ಲಾ ಮಾಡುತ್ತಿದ್ದನು, ಹಾಗೆಯೇ ಧರ್ಮಶಾಸ್ತ್ರದಲ್ಲಿ ಬರೆದಿರುವ ವಿಷಯಗಳನ್ನು ನೆರವೇರಿಸುತ್ತಿದ್ದನು.

## "ತೀರಿತು!" ("It is finished!")

ನಮ್ಮ ಕರ್ತನು ಶಿಲುಬೆಯ ಮೇಲೆ "ತೀರಿತು" ಎಂದು ಕೂಗಿದಾಗ ಆತನು "ತನ್ನ ಆತ್ಮವನ್ನು ಮರಣಕ್ಕೆ ಹೊಯ್ದುಬಿಟ್ಟನು" (ಒಪ್ಪಿಸಿಕೊಟ್ಟನು.); ಅವನು "ತನ್ನ ಆತ್ಮವನ್ನು ಪಾಪನಿವಾರಣೆಕ್ಕೋಸ್ಕರ ಬಲಿಯನ್ನಾಗಿ ಮಾಡಿಕೊಂಡನು." (ಯೋಹಾನ 19 : 30; ಯೆಶಾಯ 53 : 12,10); ತಂದೆಯ ಏರ್ಪಾಡಿಗೆ ವಿಧೇಯನಾಗಿ ತನ್ನ ಪ್ರಾಣವನ್ನು ತನ್ನಿಂದ ತೆಗೆದುಕೊಳ್ಳಲು ಆತನು ಅನುಮತಿಸಿದ್ದನು. ಈ ಎಲ್ಲಾ ವಿಷಯಗಳು ಪೂರ್ವರೂಪಿತವಾದ ಛಾಯೆಯಾಗಿದೆ. ಅಂತಹ ದಿನ ಮತ್ತು ಅಂತಹ ತಿಂಗಳಲ್ಲಿ(Nisan 14) ಪಸ್ಕದ ಕುರಿಮರಿಯನ್ನು ವಧಿಸಬೇಕು. ನಮ್ಮ ಕರ್ತನು ಧರ್ಮಶಾಸ್ತ್ರದಲ್ಲಿ ನಿರ್ಧಿಷ್ಟ ಪಡಿಸಿದ ಎಲ್ಲವನ್ನೂ – ಅದು ನೇರವಾದ ಆಜ್ಞೆಯಿಂದಾಗಲಿ ಅಥವಾ ಛಾಯೆಯಿಂದಾಗಲಿ – ದೇವರ ಚಿತ್ತವೇನೆಂದು ಗುರುತಿಸಿದನು. ಮನುಷ್ಯರು ಕರ್ತನ ಜೀವವನ್ನು ತನ್ನಿಂದ ತೆಗೆದುಕೊಳ್ಳಲಿಲ್ಲ ಎಂದು ಆತನು ಘೋಷಿಸಿದನು, ಅಂದರೆ ಅವರು ಮಾಡುವ ಕೆಲಸವನ್ನು ಆತನು ಇಷ್ಟಪಡಲಿಲ್ಲ. ಆತನು ನಿಜವಾಗಿಯೂ ಹೀಗೆಂದನು, "ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ ಸಂತೋಷವು; ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ" (ಕೀರ್ತನೆ 40:8), ಮತ್ತು ದೇವರ ಚಿತ್ತಕ್ಕೆ ವಿಧೇಯನಾಗಿದ್ದರಿಂದ ಅವರು ತನ್ನನ್ನು ಕೊಲ್ಲಲು ಅನುಮತಿಸಿದನು.

ನಮ್ಮ ಕರ್ತನು ತನ್ನ ಜೀವವನ್ನು ಮೋಸದಿಂದ ಕಸಿದುಕೊಳ್ಳಲಾಗಿದೆ ಎಂದು ಅರಿತುಕೊಂಡನು. ಆತನು ಅದಕ್ಕೆ ವಿರೋಧಿಸಲಿಲ್ಲ, ಆದರೆ ಇದನ್ನು ಮಾಡಲು ಅನುಮತಿಸಿದನು. ತಂದೆಯು ಕರ್ತನಾದ ಯೇಸುವನ್ನು ಏನು ಮಾಡಲು ಕಳುಹಿಸುತ್ತಾನೋ ಅದನ್ನು ತಾನು ಮಾಡುತ್ತೇನೆ ಮತ್ತು ಅದನ್ನು ವಿರೋಧಿಸುವುದಿಲ್ಲ ಎಂದು ಒಪ್ಪಿಕೊಂಡಿದ್ದನು. ಒಮ್ಮೆ ಪ್ರತಿಷ್ಠೆ ಮಾಡಿದ ನಂತರ ಆತನು ಹಿಂತೆಗೆದುಕೊಳ್ಳಬಹುದೇ? ಇಲ್ಲ; ಏಕೆಂದರೆ ಆತನು ತಂದೆಯ ಚಿತ್ತವೆಂದು ಸೂಚಿಸಲಾದ ಯಾವುದೇ ದೈವಿಕ ನಡೆಸುವಿಕೆಗೆ ವಿಧೇಯನಾಗಲು ಒಡಂಬಡಿಕೆಯನ್ನು ಮಾಡಿಕೊಂಡನು. ಆತನು ಒಂದು ಸಕಾರಾತ್ಮಕ ಒಪ್ಪಂದವನ್ನು ಮಾಡಿಕೊಂಡಿದ್ದನು, ಅದರ ಅಡಿಯಲ್ಲಿ ಆತನು ದೇವರ ಚಿತ್ತಕ್ಕೆ ನಂಬಿಗಸ್ತನಾಗಿರಲು ತನ್ನನ್ನು ತಾನು ಬಾಧ್ಯತೆ ಮಾಡಿಕೊಂಡಿದ್ದನು, ಮತ್ತು ಆ ನಂಬಿಗಸ್ತ ವಿಧೇಯತೆಯ ಕಾರಣದಿಂದಾಗಿ ನಮ್ಮ ಕರ್ತನಿಗೆ ದೈವಿಕ ಸ್ವಭಾವಕ್ಕೆ ಅತ್ಯುನ್ನತ ಪ್ರತಿಫಲವನ್ನು ನೀಡುವುದಾಗಿ ದೇವರು ತನ್ನನ್ನು ತಾನೇ ನಿರ್ಬಂಧಿಸಿಕೊಂಡಿದ್ದನು. ಆ ಒಪ್ಪಂದದ ನಿರ್ಬಂಧವಾಗಿ ದೇವರು ಆತನಿಗೆ ಪವಿತ್ರಾತ್ಮವನ್ನು ಕೊಟ್ಟನು.

## ಮನುಷ್ಯ ಜೀವನ ಹಕ್ಕುಗಳು ನಮ್ಮ ಕರ್ತನಿಗೆ ಸೇರಿವೆ.

### HUMAN LIFE-RIGHTS BELONG TO OUR LORD

ವಿನಿಮಯ ಮಾಡಿಕೊಳ್ಳುವುದಕ್ಕೂ (making an exchange) ಪ್ರತಿಫಲ ನೀಡುವುದಕ್ಕೂ (bestowing a reward) ವ್ಯತ್ಯಾಸವಿದೆ. ವಿನಿಮಯ(exchange) ಮಾಡಿಕೊಳ್ಳುವುದು ಎಂದರೆ ಸಮಾನವೆಂದು ಪರಿಗಣಿಸಲಾದ ಯಾವುದೋ ವಸ್ತುವಿಗೆ ಪ್ರತಿಯಾಗಿ ಬೇರೆ ಏನನ್ನಾದರೂ ಹಂಚಿಕೊಳ್ಳುವುದು ಎಂದರ್ಥ. ಪ್ರತಿಫಲ(reward) ನೀಡುವುದು ಎಂದರೆ ಅರ್ಹತೆಯ(merit) ಅಂಗೀಕಾರವಾಗಿ ಏನನ್ನಾದರೂ ನೀಡುವುದು. ಈ ಪದವು ಬಾಧ್ಯತೆಯ(obligation) ಕಲ್ಪನೆಯನ್ನು ತಿಳಿಸುವುದಿಲ್ಲ. ಪ್ರತಿಫಲ ನೀಡುವವನು ಸಂಪೂರ್ಣವಾಗಿ ತನ್ನ ಸ್ವಂತ ಇಚ್ಛೆಯಂತೆ ವರ್ತಿಸುತ್ತಾನೆ.

ಆದ್ದರಿಂದ ತಂದೆ ಮತ್ತು ನಮ್ಮ ಕರ್ತನ ನಡುವೆ ಮಾಡಲಾದ ಒಪ್ಪಂದದ ಏರ್ಪಾಡು ನಮ್ಮ ಕರ್ತನ ಭೂಮಿಯ(ಲೌಕಿಕ) ಜೀವನದ ಹಕ್ಕನ್ನು(ಕೊಡುವೆನೆಂದು) ಒಳಗೊಂಡಿರಲಿಲ್ಲ; ಏಕೆಂದರೆ ತಂದೆಯು ಕ್ರಿಸ್ತನಿಗೆ ಮನುಷ್ಯ ಜೀವನಕ್ಕೆ ಬದಲಾಗಿ ಭೂಮಿಯ ಅಸ್ತಿತ್ವದ ಅತ್ಯುನ್ನತ ನೆಲೆಯಲ್ಲಿ ಆತನಿಗೆ ಜೀವ ನೀಡಲು ಒಪ್ಪಂದ ಮಾಡಿಕೊಳ್ಳಲಿಲ್ಲ. ಹಾಗಿದ್ದಿದ್ದರೆ, ನಮ್ಮ ಕರ್ತನು ಯಾವುದೇ ಮನುಷ್ಯ ಜನಾಂಗಕ್ಕೆ–ಸಭೆಗೆ ಅಥವಾ ಮನುಕುಲಕ್ಕೆ–ನೀಡಲು ಏನನ್ನೂ ಹೊಂದಿರುತ್ತಿರಲಿಲ್ಲ.

ಇದಕ್ಕೆ ತದ್ವಿರುದ್ಧವಾಗಿ ತಂದೆಯು ನಮ್ಮ ಕರ್ತನಿಗೆ ಪ್ರತಿಫಲವಾಗಿ ಆತನನ್ನು ದೇವದೂತರುಗಳಿಗಿಂತ, ಅಧಿಕಾರ ಮಹತ್ವ ಪ್ರಭುತ್ವಾದಿಗಳಿಗಿಂತ ಉನ್ನತಕ್ಕೆ ಏರಿಸಬೇಕಾಗಿತ್ತು. ಏಕೆಂದರೆ ಮಗನು ಮರಣ ಪರ್ಯಂತ ವಿಧೇಯನಾಗಿದ್ದನು. ಈ ಭೂಮಿಯ ಜೀವನದ ಹಕ್ಕುಗಳು ಇನ್ನೂ ನಮ್ಮ ಕರ್ತನದ್ದಾಗಿವೆ. ಆತನು ಮನುಕುಲಕ್ಕೆ ಮನುಷ್ಯ ಜೀವನವನ್ನು ನೀಡಲಿದ್ದಾನೆ ಎಂಬ ಅಂಶವು ಆತನು ಆ ಭೂಮಿಯ ಜೀವನದ ಹಕ್ಕನ್ನು ಹೊಂದಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿದೆ.

ನಮ್ಮ ಕರ್ತನಾದ ಯೇಸು ತನ್ನ ಜೀವವನ್ನು ಅರ್ಪಿಸಲು ತಂದೆಯೊಂದಿಗೆ ಒಪ್ಪಿಕೊಂಡಿದ್ದಾನೆಂಬ ವಿಷಯವನ್ನು ಮಾತ್ರ ನಾವು ಅರ್ಥ ಮಾಡಿಕೊಂಡಿಲ್ಲ. ಯೆಹೋವನ ಮೇಲಿನ ಆತನ ಪ್ರೀತಿ ಮತ್ತು ಆತನ ವಿಶ್ವಾಸ ಎಷ್ಟು ಹೆಚ್ಚಾಗಿತ್ತೆಂದರೆ ಅದಕ್ಕೆ ಆತನಿಗೆ ಎಷ್ಟೇ ಬೆಲೆ ಕೊಡಬೇಕಾದರೂ, ಮನುಕುಲದ ಆಶೀರ್ವಾದಕ್ಕಾಗಿ ತಂದೆಯ ಯೋಜನೆಯನ್ನು ಕಾರ್ಯರೂಪಗೊಳಿಸಲು ಆತನು ಉತ್ಸಾಹ ಉಳ್ಳವನಾಗಿದ್ದನು. ಪ್ರತಿಷ್ಟೆ ಪಡಿಸುವ ಸಮಯದಲ್ಲಿ ಆತನ ಸ್ಥಾನವನ್ನು ಕುರಿತು ಹೀಗೆ ತನ್ನ ಮಾತುಗಳಲ್ಲಿ ವಿವರಿಸುತ್ತದೆ, “ಇಗೋ, ನಿನ್ನ ಚಿತ್ತವನ್ನು ಅನುಸರಿಸಲು ಬಂದಿದ್ದೇನೆ, ಓ ದೇವರೇ.” ಈ ಹೇಳಿಕೆಯು ದೇವರ ಚಿತ್ತವನ್ನು ನೆರವೇರಿಸುವುದರಲ್ಲಿ ಎಷ್ಟು ಭಾಗವನ್ನು

ಒಳಗೊಂಡಿದೆ? "ಪುಸ್ತಕದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ," ಪುಸ್ತಕದಲ್ಲಿ ಬರೆಯಲಾದ ಎಲ್ಲವನ್ನೂ ನೆರವೇರಿಸಲು ನಾನು ಸಿದ್ಧನಾಗಿ ಬಂದಿದ್ದೇನೆ. ಆತನು ದೇವರ ಧರ್ಮಶಾಸ್ತ್ರವನ್ನು ತನ್ನ ಹೃದಯದಲ್ಲಿ ಬರೆದಿದ್ದಲ್ಲದೆ, ಪುಸ್ತಕದ ಸುರುಳಿಯಲ್ಲಿ ಬರೆಯಲಾದ ಎಲ್ಲವನ್ನೂ ಮಾಡಲು ತನ್ನನ್ನು ತಾನು ಅರ್ಪಿಸಿದ್ದನು.

ಪುಸ್ತಕದಲ್ಲಿ ಬರೆದಿರುವುದನ್ನು ಯೇಸು ಹೇಗೆ ತಿಳಿದುಕೊಳ್ಳಲು ಸಾಧ್ಯ? ತನ್ನ ಪ್ರತಿಷ್ಠೆಯ ಸಮಯದಲ್ಲಿ, ಪುಸ್ತಕದಲ್ಲಿ ಬರೆಯಲ್ಪಟ್ಟಿದ್ದನ್ನೆಲ್ಲ ಆತನು ತಿಳಿದಿರಲಿಲ್ಲ ಎಂದು ನಂಬಲು ಎಲ್ಲಾ ಕಾರಣಗಳಿವೆ. ಹಳೆಯ ಒಡಂಬಡಿಕೆಯ ಛಾಯೆಗಳು ಮತ್ತು ನೆರಳುಗಳಲ್ಲಿ ಬರೆಯಲ್ಪಟ್ಟ ವಿಷಯಗಳನ್ನು ಒಬ್ಬ ಯೆಹೂದ್ಯನೂ ಅರ್ಥಮಾಡಿಕೊಳ್ಳಲಿಲ್ಲ. ಅವುಗಳಲ್ಲಿ ಅನೇಕ ವಿಷಯಗಳನ್ನು ನಿಸ್ಸಂದೇಹವಾಗಿ ನಮ್ಮ ಕರ್ತನು ತನ್ನ ದೀಕ್ಷಾಸ್ನಾನಕ್ಕೆ ಮೊದಲು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲ. ದೇವರ ಚಿತ್ತವು ಧರ್ಮಶಾಸ್ತ್ರದ ಒಡಂಬಡಿಕೆಯ ಛಾಯೆಗಳಲ್ಲಿ ವ್ಯಕ್ತವಾಗಿದೆ. ನಮ್ಮ ಕರ್ತನು, "ಎಲ್ಲವೂ ಪುಸ್ತಕದಲ್ಲಿ ಬರೆದದೆ" ಎಂದು ಹೇಳಿದನು. ಆದರೆ ಆ ಸಮಯದಲ್ಲಿ ಆತನಿಗೆ ಅವುಗಳು ಎಷ್ಟು ಒಳಗೊಂಡಿವೆ ಎಂದು ತಿಳಿದಿತ್ತು ಎಂದು ಯಾರು ಹೇಳಲು ಸಾಧ್ಯ? ವಾಸ್ತವವಾಗಿ ತಾನು ದೀಕ್ಷಾಸ್ನಾನ ಮಾಡುವ ತನಕ ಆತನಿಗೆ ತಿಳಿದಿರಲಿಲ್ಲ, ದೀಕ್ಷಾಸ್ನಾನದ ನಂತರವೇ ಆತನಿಗೆ ಉನ್ನತ ವಿಚಾರಗಳು ತೆರೆಯಲಾಯಿತು ಮತ್ತು ಆತನಿಗೆ ತಿಳಿಸಲಾಯಿತು; ಮತ್ತು ಈ ಜ್ಞಾನೋದಯದ ನಂತರ ಆತನು ಅವುಗಳನ್ನು ಅಧ್ಯಯನ ಮಾಡಲು ಮತ್ತು ಧ್ಯಾನಿಸಲು ಅರಣ್ಯಕ್ಕೆ ಹೋದನು.

## ದೇವರ ಚಿತ್ತವನ್ನು ಹೊರತುಪಡಿಸಿ (ಕ್ರಿಸ್ತನು) ಎಲ್ಲದಕ್ಕೂ ಸತ್ತನು.

### DEAD TO EVERYTHING BUT THE WILL OF GOD

ಯೇಸು ತನ್ನನ್ನು ಪ್ರತಿಷ್ಠೆಪಡಿಸಿಕೊಳ್ಳುವುದಕ್ಕೆ ಮುಂಚೆ ಧರ್ಮಶಾಸ್ತ್ರದ ಪುಸ್ತಕದಲ್ಲಿ ತನ್ನ ಬಗ್ಗೆ ಬರೆದಿರುವ ಎಲ್ಲಾ ವಿಷಯವನ್ನು ತಿಳಿದಿರಲಿಲ್ಲ. ಆತನು ತನ್ನ ಇಡೀ ಜೀವನವನ್ನು ದೇವರ ಚಿತ್ತವನ್ನು ನೆರವೇರಿಸಲು ಪ್ರತಿಜ್ಞೆ ಮಾಡಿದ್ದನು. ಆತನ ಸ್ವಂತ ಚಿತ್ತವು ಬೇರೆ ಎಲ್ಲದಕ್ಕೂ ಸತ್ತಿತ್ತು. ನಂತರ ತನ್ನ ಒಡಂಬಡಿಕೆಯಲ್ಲಿ ತಾನು ಅಪರಾಧಿ (Malefactor) ಎಂಬ ಅಪಾದನೆ ಹೊತ್ತು ಮರಣ ಹೊಂದಬೇಕು ಎಂದು ಆತನು ಅರಿತುಕೊಂಡನು.

ಈ ಒಂದು ಪ್ರಶ್ನೆಯನ್ನು ಕೇಳಲಾಗಿದೆ, ಅದೇನೆಂದರೆ – ಯೇಸು ತನ್ನ ಪುನರುತ್ಥಾನದ ನಂತರ ಮನುಷ್ಯ ಜೀವನದ – ಹಕ್ಕುಗಳನ್ನು ಹೊಂದಿರುವುದು ಮರಣದಲ್ಲಿ ತ್ಯಜಿಸದೆ ಇರುವ ಕಾರಣದಿಂದಲೋ ಅಥವಾ ಆತನನ್ನು "ಎಲ್ಲಕ್ಕೂ ಬಾಧ್ಯನನ್ನಾಗಿ" ನೇಮಿಸಿದ್ದರಿಂದಲೋ? ---- ಇಬ್ರಿಯರಿಗೆ 1:2

ಇತರ ಅನೇಕ ವಿಷಯಗಳಂತೆ ಇದು ವಿಧವಿಧವಾದ ಚಿಂತನೆ ಮತ್ತು ಭಾವನೆಗಳಿಗೆ ಸಮರ್ಥವಾಗಿದೆ. ನಮ್ಮ ಕರ್ತನು ಮನುಷ್ಯ ಜೀವನದ ಹಕ್ಕುಗಳು ಮತ್ತು ಎಲ್ಲಾ ಲೌಕಿಕ ವಿಷಯಗಳ ಮೇಲೆ ಹಕ್ಕನ್ನು ಹೊಂದಿದ್ದನು. ಈ ಜೀವಿಸುವ ಹಕ್ಕು ಮತ್ತು ಅದರ ಎಲ್ಲಾ ಆಶೀರ್ವಾದಗಳನ್ನು ಆದಾಮನು ಅವಿಧೇಯತೆಯಿಂದ ಕಳೆದುಕೊಂಡಿದ್ದನು, ಆದರೆ ಯೇಸು ಅದನ್ನು ವಿಧೇಯತೆಯಿಂದ ಪಡೆದುಕೊಂಡನು ಮತ್ತು ನಷ್ಟ ಹೊಂದುವದಕ್ಕೆ ಸಾಧ್ಯತೆಯೇ ಇಲ್ಲದಂತೆ ಅದನ್ನು ಧಕ್ಕಿಸಿಕೊಂಡನು. ನಂತರ ಯಾರಾದರೂ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ಆತನ ಹಕ್ಕನ್ನು ಕಸಿದುಕೊಂಡಿದ್ದರೆ, ಈ ಕಸಿದುಕೊಳ್ಳುವಿಕೆಯಿಂದ ಅವುಗಳಲ್ಲಿ ಯಾವುದನ್ನೂ ಆತನು ಕಳೆದುಕೊಳ್ಳಲು ಸಾಧ್ಯವಿಲ್ಲ.

ಬೇರೆ ರೀತಿಯಲ್ಲಿ ಹೇಳುವುದಾದರೆ, ನ್ಯಾಯಾಂಗ ರೀತಿಯಲ್ಲಿ ಯಾರಾದರೂ ನಮ್ಮ ಕರ್ತನ ಜೀವಹಕ್ಕುಗಳನ್ನು ಹೇಗೆ ಕಸಿದುಕೊಳ್ಳಬಹುದು ಎಂದು ನಮಗೆ ಅರ್ಥವಾಗುವುದಿಲ್ಲ. ನಮ್ಮ ತಿಳುವಳಿಕೆಯಲ್ಲಿ ಹೇಳಬೇಕಾದರೆ, ಬಿದ್ದುಹೋದ ಜನರ ಮತಾಂಧ ಗುಂಪಿನಿಂದ ಯೇಸುವನ್ನು ಆತನ

ಜೀವ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು; ಆದರೆ ದೇವರ ಧರ್ಮಶಾಸ್ತ್ರವು ಕ್ರಿಸ್ತನಿಗೆ ಕೊಟ್ಟಿದ್ದರಿಂದ ಅವರ ಕ್ರಿಯೆಯು ಕ್ರಿಸ್ತನ ಯಾವುದೇ ಹಕ್ಕನ್ನು ನಾಶಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿ ಆತನಿಗೆ ಉನ್ನತ (ದೈವಿಕ) ಸ್ವಭಾವವನ್ನು ಮತ್ತು ಅದಕ್ಕೆ ಸಂಬಂಧಿಸಿದ ಕೆಲವು ಅದ್ಭುತ ಆಶೀರ್ವಾದಗಳನ್ನು ಬಹುಮಾನವಾಗಿ ಕೊಟ್ಟನು, ಈ ಉನ್ನತ ಪದವಿಯು ದೇವರ ಧರ್ಮಶಾಸ್ತ್ರ, ನೀಡಿದ್ದ ಹಕ್ಕುಗಳಿಗೆ ಅಡ್ಡಿಯಾಗಲಿಲ್ಲ ಮತ್ತು ಆತನು ಅದನ್ನು ಬಿಟ್ಟೂ ಕೊಡಲಿಲ್ಲ ಅಥವಾ ಅದನ್ನು ಆತನು ಕಳೆದುಕೊಳ್ಳಲಿಲ್ಲ. ಆತನು ಮನುಷ್ಯರು ತನ್ನ ಜೀವವನ್ನು ತನ್ನಿಂದ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟನು, ಹೀಗಾಗಿ ತನ್ನದ್ದಾಗಿ ಉಳಿದಿದ್ದ ಆ ಹಕ್ಕನ್ನು ಆತನಿಂದ ಬೇರ್ಪಡಿಸಲಾಯಿತು.

## ನಮ್ಮ ಕರ್ತನು ಮನುಕುಲಕ್ಕೆ ಹೇಗೆ ತಂದೆಯಾಗುವನು.

### HOW OUR LORD BECOMES FATHER OF MANKIND

ಆದ್ದರಿಂದ ನಮ್ಮ ಕರ್ತನು ಆ ಹಕ್ಕುಗಳನ್ನು ಕಳೆದುಕೊಂಡಿಲ್ಲ ಅಥವಾ ಬಿಟ್ಟುಕೊಟ್ಟಿಲ್ಲವಾದ್ದರಿಂದ, ಆತನು ಮರಣದವರೆಗೂ ವಿಧೇಯನಾಗಿದ್ದರಿಂದ ದೇವರು ಆತನನ್ನು ಉನ್ನತಿಗೆ ಏರಿಸಿದಾಗ, ಮಾನವ ಜೀವನದ ಹಕ್ಕು ಆತನು ಹೊಂದಿದ್ದ ವಿಷಯಗಳಲ್ಲಿ ಇದೂ ಒಂದಾಗಿತ್ತು. ತಂದೆಯು ಆತನಿಗೆ ನೀಡಿದ ಬೇರೆ ಯಾವುದೇ ಹಕ್ಕನ್ನು ಲೆಕ್ಕಿಸದೆ ಈ ಹಕ್ಕು ಆತನದಾಗಿತ್ತು. ಆತನು ಮನುಷ್ಯ ಜೀವನದ ಈ ಹಕ್ಕನ್ನು ಉಡುಗೊರೆಯಾಗಿ ಅಲ್ಲ, ಕಾನೂನುಬದ್ಧವಾಗಿ, ತನ್ನ ಆಸ್ತಿಯಾಗಿ ಹೊಂದಿರುವುದರಿಂದ ಆತನನ್ನು ಜೀವ – ನೀಡುವವನು (LIFE-GIVER) ಎಂದು ಹೇಳಲಾಗುತ್ತದೆ.

ಸಾವಿರ ವರ್ಷದ ಯುಗದಲ್ಲಿ, ದೈವಿಕ ವಾಗ್ದಾನ ನೆರವೇರುವಾಗ, ನಮ್ಮ ಕರ್ತನು ಮನುಕುಲಕ್ಕೆ ಮಾನವ ಪರಿಪೂರ್ಣ ಸ್ವಭಾವವನ್ನು ತಿರುಗಿ ಕೊಡುವನು (ಯಥಾಸ್ಥಿತಿಗೆ ತರುವನು). ಹೀಗೆ ಇದನ್ನು ಮಾಡುವುದರಿಂದ ತಂದೆಯು ತನಗೆ ಕೊಟ್ಟಿದ್ದನ್ನು ನೀಡುವುದಿಲ್ಲ, ಆದರೆ ಆತನು ತನ್ನ ಸ್ವಂತ ಹೆಸರಿನಲ್ಲಿ, ವಿಶೇಷ ಅರ್ಥದಲ್ಲಿ ಅದನ್ನು ಕಾರ್ಯನಿರ್ವಹಿಸುತ್ತಾನೆ. ಆತನಿಗೆ ನಿತ್ಯ ಜೀವವನ್ನು ನೀಡುವ ಹಕ್ಕು ಇಲ್ಲದಿದ್ದರೆ, ಆತನನ್ನು ಜೀವ – ನೀಡುವವನು(LIFE-GIVER) ಎಂದು ಹೇಳಲಾಗುವುದಿಲ್ಲ. ಆದರೆ ಆತನು ಮನುಷ್ಯ ಜೀವನದ ಹಕ್ಕನ್ನು ಹೊಂದಿರುವುದರಿಂದ, ಆತನ ಆಳ್ವಿಕೆಯ ಸಾವಿರ ವರ್ಷಗಳ ಅವಧಿಯಲ್ಲಿ ಅದನ್ನು ನೀಡುವುದು ಆತನದ್ದಾಗಿದೆ.

ಸಾವಿರ ವರ್ಷಗಳ ಅಂತ್ಯದಲ್ಲಿ ನಮ್ಮ ಕರ್ತನು ಇನ್ನು ಮುಂದೆ ಜೀವ – ನೀಡುವವನಾಗಿರಲು ಸಾಧ್ಯವಿಲ್ಲ, ಏಕೆಂದರೆ ಆತನ ಹಕ್ಕು ಪರಿಪೂರ್ಣ ಮನುಷ್ಯನಾಗಿ ಆತನಿಗೆ ಮಾತ್ರ ಸಂಬಂಧಿಸಿದೆ. ಆತನು ಸಾಮಾನ್ಯ ಮನುಕುಲಕ್ಕೆ ಏನನ್ನು ನೀಡುತ್ತಾನೆಂದರೆ, ಆತನು ಈಗ ಸಭೆಗೆ ವಿಧಿಸುವ (ಹೊರಿಸುವ)(imputes), ಅಥವಾ ಸಾಲವಾಗಿ (loans) ನೀಡಿ, ಈಗ ನಮ್ಮನ್ನು ಆತನ ತ್ಯಾಗಬಲಿಯ ಕೆಲಸದಲ್ಲಿ ಭಾಗವಹಿಸಲು ಮತ್ತು ಭವಿಷ್ಯದಲ್ಲಿ ಆತನ ಮಹಿಮೆಯುಳ್ಳ ಕೆಲಸದಲ್ಲಿ ಭಾಗವಹಿಸಲು ಅನುಮತಿಸುತ್ತಾನೆ.

## ನಮ್ಮ ಕರ್ತನು ಮನುಕುಲಕ್ಕೆ ಮನುಷ್ಯ ಜೀವನದ ಹಕ್ಕನ್ನು ವೈಯಕ್ತಿಕವಾಗಿ ಕೊಡುವ ಕೊಡುಗೆ(ಉಡುಗೊರೆ)ಯಾಗಿದೆ(GIFT).

### RIGHT TO HUMAN LIFE OUR LORD'S PERSONAL GIFT TO MANKIND

"ಎಲ್ಲದಕ್ಕೂ ಬಾಧ್ಯ"ನಾಗಿರುವ ನಮ್ಮ ಕರ್ತನು ಧರ್ಮಶಾಸ್ತ್ರಕ್ಕೆ ವಿಧೇಯನಾಗುವ ಮೂಲಕ ತನ್ನ ಲೌಕಿಕ ಸ್ವಭಾವವನ್ನು ಮತ್ತು ಲೌಕಿಕ ಜೀವನದ – ಹಕ್ಕುಗಳ ಮೇಲೆ ಹೆಚ್ಚಾದ ನಿಯಂತ್ರಣವನ್ನು

ಹೇಗೆ ಪಡೆದಿರಬಹುದು ಎಂಬುದು ನಮಗೆ ತಿಳಿಯುವುದಿಲ್ಲ. ಎಲ್ಲದಕ್ಕೂ ಬಾಧ್ಯನಾಗಿ, ಆತನು ಎಂದೆಂದಿಗೂ ತಂದೆಯ ಪ್ರತಿನಿಧಿಯಾಗಿರುತ್ತಾನೆ. ಆತನು ಉನ್ನತ ಅಧಿಕಾರದ (ತಂದೆಯ) ಬಲಗಡೆಯಲ್ಲಿ ಸ್ಥಾನವನ್ನು ತೆಗೆದುಕೊಳ್ಳುತ್ತಾನೆ. ತಕ್ಕ ಕಾಲದಲ್ಲಿ ಎಲ್ಲಾ ಮನುಷ್ಯರು ಆತನಿಗೆ ಅಡ್ಡಬೀಳುವರು (ಮೊಣಕಾಲೂರುವರು), ಮತ್ತು ದೇವದೂತರೂ ಸಹ ಆತನಿಗೆ ಅಧೀನರಾಗಿರುತ್ತಾರೆ.

ತಂದೆಯು ವಾಗ್ದಾನ ಮಾಡಿದ ಪ್ರತಿಫಲದ ಒಂದು ಭಾಗವಾಗಿ ಇವೆಲ್ಲವೂ ನಮ್ಮ ಕರ್ತನಿಗೆ ಬಂದೊದಗುವವು. ಆದರೆ ಈ ಒಂದು ನಿರ್ದಿಷ್ಟ ವಿಚಾರವು ಅಂದರೆ ಆದಾಮನಿಂದ ಕಳೆದುಕೊಂಡ ಎಲ್ಲದರ ಮರುಸ್ಥಾಪನೆಯು ಮನುಕುಲಕ್ಕೆ ಆತನ ಸ್ವಂತ ಉಡುಗೊರೆಯಾಗಿ ಬರುವ ವಿಶೇಷ ಸವಲತ್ತಾಗಿದೆ – ಅದನ್ನು ಆತನು ತನ್ನ ಸ್ವಂತ ವೆಚ್ಚದಲ್ಲಿ(ಜೀವವನ್ನು ಕೊಟ್ಟು) ಕೊಂಡುಕೊಂಡಿದ್ದಾನೆ, ಅಂದರೆ ತನ್ನ ಲೌಕಿಕ ಜೀವನವನ್ನು ತ್ಯಾಗಮಾಡಿರುವುದರಿಂದ ಆತನು ನೂತನ ಸ್ವಭಾವವನ್ನು ಹೊಂದುವುದಕ್ಕೆ ಮತ್ತು ಈ ಭೂಮಿಯ ಜೀವನವನ್ನು ನಿಯಂತ್ರಿಸುವ ಹಕ್ಕನ್ನು ಪಡೆಯುವುದಕ್ಕೆ ಆಧಾರವಾಗಿದೆ, ಇದನ್ನು ಲೋಕದ ಪರವಾಗಿ ಮರುಸ್ಥಾಪನೆಯಲ್ಲಿ ಅನ್ವಯಿಸಲಾಗುತ್ತದೆ.

ಒಂದು ವೇಳೆ ಆತನು ಆ ಜೀವವನ್ನು ಈಗಾಗಲೇ ಅನ್ವಯಿಸಿದ್ದರೆ ಮತ್ತು ಅದನ್ನು ನಿಜವಾಗಿಯೂ ಕೊಟ್ಟಿದ್ದರೆ, ಆತನು ಮನುಕುಲಕ್ಕಾಗಿ ವಿಶೇಷವಾದದ್ದನ್ನು ಹೇಗೆ ಸಾಧಿಸಬಲ್ಲನು ಎಂಬುದು ನಮಗೆ ಗೊತ್ತಾಗುವುದಿಲ್ಲ. ಆದರೆ ಆತನು ಕೊಡುವದಕ್ಕಾಗಿ ಈ ಭೂಮಿಯ ಹಕ್ಕುಗಳು ಮತ್ತು ಸವಲತ್ತುಗಳ ಈ ಆಸ್ತಿ ಇರುವುದರಿಂದ, ಅದನ್ನು ಕೊಡುವ ಪ್ರಕ್ರಿಯೆಯು ಸಾವಿರ ವರ್ಷದ ಆಳ್ವಿಕೆಯಲ್ಲಿ ಮುಂದುವರಿಯುತ್ತದೆ; ಮತ್ತು ಆತನು ಧರ್ಮಶಾಸ್ತ್ರಕ್ಕೆ ವಿಧೇಯನಾಗಿರುವುದರಿಂದ ಆತನಲ್ಲಿ ಏನಿದೆಯೋ ಅದನ್ನು ಆತನು ಕೊಡುತ್ತಾನೆ. – ಯಾಜಕಕಾಂಡ 18:5

## "ಬಲಿ" ಎಂಬ ಪದದ ಧರ್ಮಶಾಸ್ತ್ರದ (ಸತ್ಯವೇದದ) ಬಳಕೆ.

### SCRIPTURAL USAGE OF THE TERM ''SACRIFICE''

"ಬಲಿ" ಎಂಬ ಪದವನ್ನು ವಿಭಿನ್ನ ದೃಷ್ಟಿಕೋನಗಳಿಂದ ಉಪಯೋಗಿಸಬಹುದು. ಒಂದು ಪ್ರಾಣಿಯನ್ನು ಯಾವುದೇ ಒಳ್ಳೆಯ ಕಾರಣಕ್ಕಾಗಿ ಅಥವಾ ಉದ್ದೇಶಕ್ಕಾಗಿ ಕೊಂದಿದ್ದರೆ ಅದನ್ನು ಬಲಿ ಎಂದು ಹೇಳಬಹುದು, ವಿಶೇಷವಾಗಿ ಅದು ದೈವಿಕ ವ್ಯವಸ್ಥೆಗೆ ಅನುಗುಣವಾಗಿ ಹಾಗೆ ಮಾಡಿದರೆ ಹಾಗೆಂದು ಹೇಳಬಹುದು. ಆದರೆ ಕೇವಲ ಪ್ರಾಣಿಯನ್ನು (ಸುಮ್ಮನೆ) ಕೊಲ್ಲುವುದು ಬಲಿಯಾಗುವುದಿಲ್ಲ – ಒಂದು ನಾಯಿಯನ್ನು ಬಲಿ ನೀಡದೆ ಕೊಲ್ಲಬಹುದು (ವಧಿಸಬಹುದು). ಆದರೆ ನಾಯಿಯ ಜೀವವನ್ನು ವೈಜ್ಞಾನಿಕ ಪ್ರಯೋಗದ ಉದ್ದೇಶಕ್ಕಾಗಿ ಒಪ್ಪಿಸಿದ್ದರೆ, ಅದನ್ನು ವಿಜ್ಞಾನಕ್ಕೆ ತ್ಯಾಗ ಬಲಿ ಮಾಡಲಾಗಿದೆ ಎಂದು ನಾವು ಹೇಳಬಹುದು. ಈ ದೃಷ್ಟಿಕೋನದಿಂದ ನಾವು ಬಲಿಯ ವಿಷಯವನ್ನು ನೋಡಬೇಕು. ದೇವರ ಪ್ರತಿಷ್ಟೆಪಡಿಸಿದ ಜನರ ಜೀವನವನ್ನು ಒಂದು ಉದ್ದೇಶಕ್ಕಾಗಿ ಶರಣಾಗಿಸಲಾಗುತ್ತದೆ.

ನಮ್ಮ ಪ್ರತಿಷ್ಟೆಯ(Consecration) ಸಮಯದಲ್ಲಿ ನಾವು ನಮ್ಮ ದೇಹಗಳನ್ನು ಸಜೀವ ಯಜ್ಞಗಳಾಗಿ (ಬಲಿಯಾಗಿ) ಸಮರ್ಪಿಸುತ್ತೇವೆ. ನಮ್ಮ ಜೀವನ, ನಮ್ಮ ಮಾನವ ಶರೀರಗಳು ಮತ್ತು ನಮ್ಮಲ್ಲಿರುವ ಎಲ್ಲವನ್ನೂ ನಾವು ಕರ್ತನಿಗೆ ಒಪ್ಪಿಸುತ್ತೇವೆ. ಆದರೂ ದೇವರು ಈ ಬಲಿಯನ್ನು ಯಾವುದೋ ವಿಶೇಷ ರೀತಿಯಲ್ಲಿ ಮರಣಕ್ಕೆ ಒಪ್ಪಿಸಿದರೆ ಮಾತ್ರ ಸ್ವೀಕರಿಸುವುದಿಲ್ಲ. ಕೆಲವರು ತಮ್ಮ ಜೀವನವನ್ನು ಕರ್ತನ ಸತ್ಯದ ಸೇವೆಯಲ್ಲಿ ಕಳೆಯಬಹುದು ಮತ್ತು ಅವರು ನಿಜವಾಗಿಯೂ ಶಿಲುಬೆಯ ಕಂಬದಲ್ಲಿ ಸತ್ತಂತೆ ತ್ಯಾಗಬಲಿ ಮಾಡಲ್ಪಟ್ಟಿದ್ದಾರೆಂದು ಹೇಳಬಹುದು. ನಾವು ಕರ್ತನಿಗೆ ಹೀಗೆ ಹೇಳಬಹುದು – "ನನ್ನ ಇಡೀ ಜೀವನವು ನಿಮ್ಮ ಕೈಯಲ್ಲದೆ."; ನೀವು ಬಯಸಿದಂತೆ ಅದನ್ನು ಮಾಡಿ. ಅದು ಸಂತೋಷ ಅಥವಾ ನೋವು, ಬಲಿ ಅಥವಾ ಆನಂದ, ಏನೇ ಬಂದರೂ ನಾವು ಈ ವಿಷಯದಲ್ಲಿ ನಮ್ಮ ಸ್ವಂತ ಇಚ್ಛೆಯನ್ನು ಬಿಟ್ಟುಕೊಡುತ್ತೇವೆ ಮತ್ತು ಯೇಸು ಹೇಳಿದಂತೆ ನಾವು ಮಾಡಬಹುದು: "ನನ್ನ ಚಿತ್ತದಂತೆ

ನಡೆಯುವದಕ್ಕಾಗಿ ನಾನು ಬಂದಿಲ್ಲ, ನನ್ನನ್ನು ಕಳುಹಿಸಿದಾತನ ಚಿತ್ತವನ್ನೇ ನೆರವೇರಿಸುವದಕ್ಕೆ ಪರಲೋಕದಿಂದ ಬಂದೆನು."–ಯೋಹಾನ 6:38.

## ನಾವು ಏನ್ನನ್ನು ಬಲಿ ಸಲ್ಲಿಸುತ್ತೇವೆ?

**WHAT DO WE SACRIFICE**

ಯೇಸುವಿನ ಬಲಿಯು ಯೊರ್ದನ್ ನಲ್ಲಿ ಆರಂಭವಾಯಿತು, ಆದರೆ ಅದು ಕಲ್ವಾರಿಯಲ್ಲಿ ಪೂರ್ಣಗೊಂಡಿತು. ಆತನ ಪ್ರತಿಷ್ಠೆಯು ಸಂಪೂರ್ಣವಾಗಿತ್ತು. ಹೋರಿಯ ಬಲಿಯು ಯೇಸು ತನ್ನ ಚಿತ್ತವನ್ನು ಒಪ್ಪಿಸುವುದಕ್ಕೆ ಸಂಕೇತವಾಗಿದೆ. ಮತ್ತು ನಮಗೂ ಹಾಗೆಯೇ ಇದೆ. ಆತನ ಹೆಜ್ಜೆಯ ಜಾಡನ್ನು ಹಿಂಬಾಲಿಸುವಾಗ ನಾವು ನಮ್ಮ ಚಿತ್ತಗಳನ್ನು ಬಲಿ ಸಲ್ಲಿಸುತ್ತೇವೆ ಎಂಬ ಅರ್ಥದಲ್ಲಿ ಸತ್ತವರಾಗುತ್ತೇವೆ. ಆದರೆ ನಾವು ಆ ಬಲಿ ಸಲ್ಲಿಸಿದ ಚಿತ್ತವನ್ನು ಕರ್ತನು ಯಾವ ವಿಧವಾಗಿ ಅಂಗೀಕರಿಸುವನು ಎಂಬುದು ಆತನಿಗೆ ಬಿಟ್ಟಿದೆ. ಕ್ರಿಸ್ತನ ಮನಸ್ಸು ನಮ್ಮಲ್ಲಿ ಸಮೃದ್ಧವಾಗಿ ನೆಲೆಸುವಂತೆ ನಾವು ಅದನ್ನು ಉಚಿತವಾಗಿ ನೀಡುತ್ತೇವೆ.

ನಮ್ಮ ಚಿತ್ತದ ಹಕ್ಕಿನಿಂದ ನಾವು ಶಾಶ್ವತವಾಗಿ ಬೇರ್ಪಡುತ್ತೇವೆ, ಆದರೆ ನಾವು ನಮ್ಮ ಜೀವನವನ್ನು ಬಲಿ ಸಲ್ಲಿಸುವುದಿಲ್ಲ, ಆದರೂ ನಮ್ಮ ಚಿತ್ತವನ್ನು ಬಲಿಸಲ್ಲಿಸುವುದರ ಕಾರಣದಿಂದ ಅಂತಿಮವಾಗಿ ನಮ್ಮ ಜೀವನವನ್ನು ತ್ಯಾಗ ಮಾಡಲು ಕಾರಣವಾಗುತ್ತದೆ ಎಂದು ನಮಗೆ ತಿಳಿದಿದೆ. ಆದರೆ ನಮ್ಮ ಹಕ್ಕುಗಳಿಂದ ಬೇರ್ಪಡುವಿಕೆಗೆ ಮತ್ತು ನಮಗೆ ಯಾವುದೇ ಸಂಬಂಧವಿಲ್ಲ. ಯೇಸು ನಮ್ಮ ವಕೀಲರಾದಾಗ(Avocate)(ನಮಗೋಸ್ಕರ ಬಿನ್ನಹ ಮಾಡುವವನಾದಾಗ), ಆತನು ನಮ್ಮ ಬಗ್ಗೆ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾನೆ. ನಾವು ನಮ್ಮ ಚಿತ್ತಗಳನ್ನು ತ್ಯಜಿಸಿದ ಸಮಯದಿಂದ, ನಮ್ಮ ದೇಹಗಳನ್ನು ಆತನ ದೇಹವೆಂದು ಪರಿಗಣಿಸಲಾಗುತ್ತದೆ. ನಾವು ಈ ವಿಷಯದಲ್ಲಿ ನಮ್ಮ ಚಿತ್ತವನ್ನು ಬಿಟ್ಟುಬಿಡುತ್ತೇವೆ ಮತ್ತು ಎಲ್ಲವನ್ನೂ ಆತನಿಗೆ ಒಪ್ಪಿಸಿ ಬಿಟ್ಟುಬಿಡುತ್ತೇವೆ. ಆತನು ನಮ್ಮ ಬಲಿಯನ್ನು ನೋಡಿಕೊಳ್ಳುತ್ತಾನೆ; ಏಕೆಂದರೆ ಆತನು ಮಹಾಯಾಜಕನಾಗಿದ್ದಾನೆ; ನಾವಲ್ಲ.

ಅದೇ ರೀತಿ, ದೊಡ್ಡ ಫಲಿತಾಂಶವು ಕರ್ತನ ಕೈಯಲ್ಲಿದೆ. ಈ ಸುವಾರ್ತಾ ಯುಗದಲ್ಲಿ ಆತನು ತನ್ನ ಪುಣ್ಯವನ್ನು (Merit) ಸಭೆಗೆ ವಿಧಿಸುತ್ತಾನೆ.(ಹೊರಿಸುತ್ತಾನೆ). ಆತನು ಬಲಿಯ ಕೆಲಸವನ್ನು ಪೂರ್ಣಗೊಳಿಸಿದ ನಂತರ ಆತನು ತನ್ನದು ಎಂದು ಕರೆಯುವ ಈ ಮಹಾನ್ ಬಲಿಯ ಪುಣ್ಯವನ್ನು (Merit) ಲೋಕಕ್ಕೆ ಹೊಸ ಒಡಂಬಡಿಕೆಯನ್ನು ಮುದ್ರೆ ಮಾಡಲು ಅನ್ವಯಿಸುತ್ತಾನೆ. ಆದರೆ ಬಲಿಯೊಂದಿಗೂ ನಮಗೂ ಯಾವುದೇ ಸಂಬಂಧವಿಲ್ಲ. ನಾವು ಅವೆಲ್ಲವನ್ನು ನಮ್ಮ ವಕೀಲನಿಗೆ ಅಥವಾ ನಮಗಾಗಿ ಬಿನ್ನಹ ಮಾಡುವಾತನಿಗೆ ಬಿಡುತ್ತೇವೆ.

ನೂತನ ಸೃಷ್ಟಿಯು ಖಂಡಿತವಾಗಿಯೂ ನಮ್ಮ ಶರೀರದ ಮಾಲಿಕ ಅಥವಾ ನಿಯಂತ್ರಕನಾಗಿದೆ ಮತ್ತು ಇದು ಕರ್ತನಿಂದ ಹಾಗೆ ಮಾಡಲ್ಪಟ್ಟಿದೆ. ನೂತನ ಸೃಷ್ಟಿಗಳಾದ ನಮಗೆ ನಮ್ಮ ದೇಹದೊಂದಿಗೆ ನಿರ್ವಹಿಸಲು ಒಂದು ಕೆಲಸವಿದೆ. ನಮ್ಮ ಕರ್ತನು ನಮ್ಮನ್ನು ತನ್ನ ಸೇವಕರನ್ನಾಗಿ ಸ್ವೀಕರಿಸಿದಾಗ, ನಾವು ನಮ್ಮ ಎಲ್ಲಾ ಪ್ರತಿಭೆ(ತಲಾಂತು)ಗಳನ್ನು ಆತನ ಮೇಲ್ವಿಚಾರಕರಾಗಿ ಬಳಸಬೇಕು. ಆ ಮಾತಿನ ಅರ್ಥದಲ್ಲಿ, ನಮ್ಮ ಶರೀರವು ಮರಣದವರೆಗೂ ನೂತನ ಸೃಷ್ಟಿಯ ನಿಯಂತ್ರಣದಲ್ಲಿರುತ್ತದೆ.

## ಜಿವನದ – ಹಕ್ಕುಗಳನ್ನು (ಈ ಸುವಾರ್ತಾ ಯುಗದಲ್ಲಿ) ಸಭೆಗೆ ಮಾತ್ರ ವಿಧಿಸಲಾಗಿದೆ.

**LIFE-RIGHTS MERELY IMPUTED TO THE CHURCH**

ನಮ್ಮ ಸ್ಥಾನವು ನಮ್ಮ ಕರ್ತನ ಸ್ಥಾನಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಆರಂಭಿಸುವುದಕ್ಕೆ ನಮಗೆ

ಯಾವುದೇ ಲೌಕಿಕ ಹಕ್ಕುಗಳಿರಲಿಲ್ಲ; ಆದ್ದರಿಂದ, ಅದನ್ನು ಬಿಟ್ಟುಕೊಡಲು ನಮಗೆ ಏನೂ ಇರಲಿಲ್ಲ. ಅವುಗಳನ್ನು ಆದಾಮನ ಪಾಪದಿಂದ ಕಳೆದುಕೊಳ್ಳಲಾಯಿತು. ಆದರೆ ನಾವು ಕರ್ತನ ಶಿಷ್ಯರಾದರೆ, ನಮಗಿರುವ ಎಲ್ಲವನ್ನೂ ಆತನಿಗೆ ಒಪ್ಪಿಸಿಬಿಟ್ಟರೆ ಮತ್ತು ಆತನು ನಮಗೆ ವಿಧಿಸುವ ಪುಣ್ಯವನ್ನು(Merit) ಅಂಗೀಕರಿಸಿದರೆ, ನಮ್ಮ ಮಹಾನ್ ವಕೀಲನು (ಬಿನ್ನಹ ಮಾಡುವವನು) ಆತನ ಶರೀರದ ಅಂಗಗಳಾಗಿ ನಮ್ಮನ್ನು ಎಣಿಸಿ, ಆತನ ಶ್ರಮೆಗಳಲ್ಲಿ ನಾವು ಪಾಲು ಹೊಂದಲು ಅನುಮತಿಸುತ್ತಾನೆ. ಆತನು ತನ್ನ ಪುಣ್ಯವನ್ನು (merit) ನಮಗೆ ವಿಧಿಸುವಾಗ ಎಲ್ಲಾ ಹಕ್ಕುಗಳು ಆತನಿಗೆ ವರ್ಗಾಯಿಸಲ್ಪಟ್ಟವು. ಆತನು ತನ್ನ ಅಂಗಗಳಿಗೆ ಅವರಿಗಿರುವ ಯಾವುದೇ ವಿಧವಾದ ಹಕ್ಕನ್ನು ಮತ್ತು ಅವರಿಗೆ ಬರುವ ಯಾವುದೇ ವಿಧವಾದ ಲೌಕಿಕ ಹಕ್ಕಿನ ಸವಲತ್ತನ್ನು ನೀಡಿದನು.

ನಮ್ಮ ಕರ್ತನು ಭವಿಷ್ಯದಲ್ಲಿ ಈ ಹಕ್ಕುಗಳನ್ನು ಲೋಕಕ್ಕಾಗಿ ಉಪಯೋಗಿಸುವುದು ಅಗತ್ಯವಾದಾಗ, ಆತನು ಹಾಗೆ ಮಾಡಲು ಸಾಕಷ್ಟು ಸಮರ್ಥನೂ ಮತ್ತು ಸವಲತ್ತನ್ನು ಹೊಂದಿರುತ್ತಾನೆ. ದೈವಿಕ ಧರ್ಮಶಾಸ್ತ್ರವನ್ನು ಆತನು ಎಂದಿಗೂ ಉಲ್ಲಂಘಿಸದೆ ಇದದ್ದರಿಂದ ತನ್ನ ಎಲ್ಲಾ ಲೌಕಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಅದನ್ನು ಬಳಸಲು, ಆಜ್ಞಾಪಿಸಲು ಮತ್ತು ನಿರ್ದೇಶಿಸಲು ಸಂಪೂರ್ಣ ಹಕ್ಕನ್ನು ಹೊಂದಿರುತ್ತಾನೆ, ಅದನ್ನು ಆತನು ಕಳೆದುಕೊಳ್ಳಲಿಲ್ಲ, ಆದರೆ ಈ ಲೋಕಕ್ಕೆ ಜೀವ ನೀಡುವುದಕೋಸ್ಕರ ಅವುಗಳನ್ನು ಮತ್ತೆ ಬಳಸಬೇಕೆಂಬ ತಿಳುವಳಿಕೆಯೊಂದಿಗೆ ಅವುಗಳನ್ನು ಬಲಿಯಾಗಿ ಸಮರ್ಪಿಸಿದನು, ಇದರಿಂದಾಗಿ ಲೋಕದ ಜನರ ಭವಿಷ್ಯದ ಜೀವನಕ್ಕೆ ಸಂಬಂಧಿಸಿದಂತೆ ಆತನನ್ನು ಮನುಕುಲದ ತಂದೆ ಎಂದು ಕರೆಯಲಾಗುವುದು.

ಕ್ರಿಸ್ತನು ತನ್ನನ್ನು ಬಲಿಯಾಗಿ ಸಮರ್ಪಿಸಲು ಬಂದನೆಂದು ಧರ್ಮಶಾಸ್ತ್ರದಲ್ಲಿ ಎಲ್ಲಿಯೂ ಹೇಳಲಾಗಿಲ್ಲ. ಧರ್ಮಶಾಸ್ತ್ರದಲ್ಲಿ ಹೇಳುವುದೇನೆಂದರೆ ಆತನು ತಂದೆಯ ಚಿತ್ತವನ್ನು ನೆರವೇರಿಸಲು ಬಂದನು. ತಂದೆಯು ತನಗಾಗಿ ಸಿದ್ಧಪಡಿಸಿದ "ಪಾತ್ರೆ"ಯಲ್ಲಿ ಕುಡಿಯಲು ಆತನು ನಿರಾಕರಿಸಲಿಲ್ಲ, ಆದರೆ ಅದರ ಗಸಿಯನ್ನು(ಮಡ್ಡಿ) ಸೇರಿ ಕುಡಿದನು. ಮತ್ತು ಮರಣದವರೆಗೆ ಈ ಚಿತ್ತಕ್ಕೆ ಆತನು ವಿಧೇಯನಾಗಿದ್ದರಿಂದ—ಅದು ಎಷ್ಟು ದೀರ್ಘ ಅಥವಾ ಕಡಿಮೆಯ ಸಮಯವಾಗಿದ್ದರೂ ಸರಿ, ಆ ಜೀವನವನ್ನು ತಂದೆಗೆ ಪ್ರಿಯವುಳ್ಳದ್ದಾಗಿ ಮುಂದುವರಿಸಬೇಕಾಗಿತ್ತು,-- ಈ ಕಾರಣದಿಂದ ಕ್ರಿಸ್ತನು ಬಹುಮಾನವನ್ನು ಪಡೆದುಕೊಂಡನು. ಆತನು ಎಲ್ಲವನ್ನೂ ತಂದೆಯ ಕೈಗೆ ಒಪ್ಪಿಸಿದನು. ಇದು ಒಂದು ಬಲಿಯಾಗಿತ್ತು; ಏಕೆಂದರೆ ಆತನಿಗೆ ತನ್ನ ಜೀವವನ್ನು ಬಳಸುವ ಹಕ್ಕಿತ್ತು. ಆದರೆ ತನ್ನ ತಂದೆಯ ಚಿತ್ತಕ್ಕೆ ವಿಧೇಯನಾಗಿದ್ದರಿಂದ ತನ್ನನ್ನು ಬಲಿಯಾಗಿ ಸಮರ್ಪಿಸಿದ್ದರಿಂದ ಆತನು ಬಹುಮಾನ (ಪ್ರತಿಫಲ)ವನ್ನು ಪಡೆಯಲು ಕಾರಣವಾಯಿತು.

---------------------

**R5621**

# ನಮ್ಮ ಕರ್ತನ ಮನುಷ್ಯ ಜೀವನದ - ಹಕ್ಕುಗಳನ್ನು ವಿಧಿಸುವುದು (ಹೊರಿಸುವುದು) ಮತ್ತು ಅನ್ವಯಿಸುವುದು.

## IMPUTATION AND APPLICATION OF OUR LORD'S HUMAN LIFE-RIGHTS

"ಆತನು ಎಲ್ಲರಿಗೋಸ್ಕರ ವಿಮೋಚನೆಯ ಕ್ರಯವಾಗಿ ತನ್ನನ್ನು ತಾನೇ ಒಪ್ಪಿಸಿಕೊಟ್ಟನು." ಎಂಬ ವಾಕ್ಯದಲ್ಲಿ ಏನನ್ನು ಸೂಚಿಸಲಾಗಿದೆ ಎಂಬುದನ್ನು ಗ್ರಹಿಸುವುದಕ್ಕೆ ದೇವರ ಜನರಲ್ಲಿ ಅನೇಕರಿಗೆ ಕಷ್ಟವಿದೆ ಎಂದು ತೋರುತ್ತದೆ. ಅವರು ಹೀಗೆ ಕೇಳುತ್ತಾರೆ, "ನಮ್ಮ ಕರ್ತನಾದ ಯೇಸು ಆದಾಮನಿಗಾಗಿ

ಮತ್ತು ಆತನ ಸಂತತಿಗಾಗಿ ತನ್ನ ಮನುಷ್ಯ ಜೀವವನ್ನು ಈಡುಬಲಿಯಾಗಿ ಕೊಟ್ಟಿದ್ದರೆ, "ಮಗನ ಮೇಲೆ ನಂಬಿಕೆಯಿಡುವವನಿಗೆ ನಿತ್ಯ ಜೀವ ಉಂಟು." ಎಂದು ನಾವು ಓದುವ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ತನ್ನ ದಯೆಯನ್ನು (ಅನುಗ್ರಹವನ್ನು) ಸ್ವೀಕರಿಸುವವರಿಗೆ ಸಮರ್ಥನೆಯಾಗಿ ನೀಡಲು ಆತನಿಗೆ ಈಗ ಮನುಷ್ಯ ಜೀವದ ಹಕ್ಕು ಎಲ್ಲಿದೆ?" - ಯೋಹಾನ 3:36.

ಈ ಪ್ರಶ್ನೆಗೆ ಉತ್ತರವನ್ನು ಅರ್ಥಮಾಡಿಕೊಳ್ಳಲು, ಈಡುಬಲಿ ನೀಡುವಿಕೆಯು ವಿವಿಧ ವೈಶಿಷ್ಟ್ಯಗಳನ್ನು ಹೊಂದಿದೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಮೊದಲನೆಯದಾಗಿ, ನಮ್ಮ ಕರ್ತನು ಮೂವತ್ತು ವರ್ಷದವನಿದ್ದಾಗ ಮಾಡಿದ ಪ್ರತಿಷ್ಠೆ, ಅದನ್ನು ಆತನು ನೀರಿನ ದೀಕ್ಷಾಸ್ನಾನದ ಮೂಲಕ ಸಂಕೇತಿಸಿದನು. ಇದು ದೇವರಿಗೆ ತನ್ನ ಜೀವನವನ್ನು ಬಿಟ್ಟುಕೊಡುವುದನ್ನು, ಶರಣಾಗುವುದನ್ನು ಪ್ರತಿನಿಧಿಸುತ್ತದೆ. ಆತನು ಶರಣಾಗಿ ನೀಡಿದ ಜೀವನವು ಪರಿಪೂರ್ಣ ಮನುಷ್ಯ ಜೀವನವಾಗಿತ್ತು, ಅದಕ್ಕೆ ಅವನಿಗೆ ಸಂಪೂರ್ಣ ಹಕ್ಕಿತ್ತು. ಸಂತ ಪೌಲನು ನಮಗೆ ಹೇಳುವುದೇನೆಂದರೆ, ಕ್ರಿಸ್ತನು "ಪರಿಶುದ್ಧನೂ ಕೇಡುಮಾಡದವನೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿಇರುವಾತನು." ನಮ್ಮ ಕರ್ತನು ನೇರ ಅರ್ಥದಲ್ಲಿ ಆದಾಮನ ಸಂತತಿಯಿಂದ ಬಂದ ಸದಸ್ಯದ ವ್ಯಕ್ತಿ ಅಲ್ಲ -- ಮಾನವ ತಂದೆಯಿಂದ ತನ್ನ ಜೀವವನ್ನು ಪಡೆಯಲಿಲ್ಲ; ಆದ್ದರಿಂದ ಆತನ ಜೀವವು ಈ ಲೋಕದ ಉಳಿದ ಜನರಂತೆ (ಮರಣ ದಂಡನೆಗೆ) ಖಂಡಿಸಲ್ಪಟ್ಟ ಜೀವವಾಗಿರಲಿಲ್ಲ. ಇನ್ನೂ ಹೆಚ್ಚಾಗಿ ಅಗತ್ಯವೂ ಇರಲಿಲ್ಲ. ಆತನು ಆದಾಮನ ಸರಿಸಮವಾದ ಜೀವನ ಮತ್ತು ಪರಿಪೂರ್ಣತೆಯ ಜೀವವನ್ನು ಒಪ್ಪಿಸಿದನು. ಆದರೆ ಅವನು ತನ್ನ ಜೀವನವನ್ನು ಆದಾಮನಿಗೆ ಒಪ್ಪಿಸಲಿಲ್ಲ; ಆತನು ಅದನ್ನು ಬೇರೆ ಯಾರಿಗೂ ಕೊಡದೆ ನೇರವಾಗಿ ತಂದೆಯ ಕೈಗೆ ಕೊಟ್ಟನು. ತನ್ನ ಮೂರುವರೆ ವರ್ಷಗಳ ಸೇವೆಯಲ್ಲಿ ನಮ್ಮ ವಿಮೋಚಕನು ತನ್ನ ಜೀವವನ್ನು ಅರ್ಪಿಸಿದನು. ಆ ಕೆಲಸವನ್ನು ಆತನು ಕಲ್ವಾರಿಯಲ್ಲಿ ಪೂರ್ಣಗೊಳಿಸಿದನು, ಅಲ್ಲಿ "ತೀರಿತು" ಎಂದು ಹೇಳಿದನು. ಅಲ್ಲಿ ಆತನು ಮರಣದಲ್ಲಿ ತನ್ನ ದೀಕ್ಷಾಸ್ನಾನವನ್ನು ಮುಗಿಸಿದನು; ಆತನು ಕೊನೆಯವರೆಗೂ ತನ್ನ ಸ್ವಯಂ-ಸಮರ್ಪಣೆಯನ್ನು ಮುಂದುವರೆಸಿದನು. ಆದರೆ ಆತನು ಇನ್ನೂ ಈ ಮನುಷ್ಯ ಜೀವನವನ್ನು ಆದಾಮ ಮತ್ತು ಆತನ ಸಂತತಿಗೆ ಅನ್ವಯಿಸಿಲ್ಲ. ಆತನು ಅದನ್ನು ತಂದೆಯ ಕೈಗೆ ಕೊಟ್ಟಿದ್ದಾನೆ. ಅದು ಕಳೆದುಕೊಳ್ಳದ(not been forfeited), ಅಡಮಾನ ಇಡದ, ನಿರ್ಬಂಧಕ್ಕೆ ಒಳಪಡದ ಜೀವನವಾಗಿತ್ತು. ಆತನು ತಂದೆಯ ಯೋಜನೆಗೆ ಅನುಗುಣವಾಗಿ ತನ್ನ ಜೀವವನ್ನು ಒಪ್ಪಿಸಿದನು - ಲೂಕ 23:46

## ಎರಡು ನೆಲೆ(ಸಮತಲ)ಗಳಲ್ಲಿ ಜೀವದ ಹಕ್ಕು
### RIGHTS ON THE TWO PLANE

ತಂದೆಯು ಯೇಸುವನ್ನು ಮೂರನೆಯ ದಿನದಲ್ಲಿ ಮರಣದಿಂದ ಎಬ್ಬಿಸಿದಾಗ, ತಂದೆಯು ಯೇಸುವನ್ನು ಆತ್ಮ ಜೀವಿಯನ್ನಾಗಿ(**spirit being**) ಮಾಡಿದನು. ಆತನನ್ನು ಶರೀರಸಂಬಂಧದಲ್ಲಿ ಕೊಲ್ಲಲ್ಪಟ್ಟನು ಮತ್ತು ಆತ್ಮಸಂಬಂಧದಲ್ಲಿ ತಿರಿಗಿ ಬದುಕುವವನಾದನು. (1 ಪೇತ್ರನು 3: 18) (quickened in spirit)(Diaglott). ಆತ್ಮ ಜೀವಿಯಾಗಿ ಬದುಕುವವನಾದ ಹೊಸ ಸ್ವಭಾವದ ಒಬ್ಬ ವ್ಯಕ್ತಿಯು ತನ್ನ ಲೌಕಿಕ ಜೀವನವನ್ನು ಅವನಿಂದ ಕಸಿದುಕೊಳ್ಳಲು ಅನುಮತಿಸಿದ್ದರಿಂದ, ತನ್ನ ವಿಧೇಯತೆಗೆ ಪ್ರತಿಫಲವಾಗಿ ಈ ಹೊಸ ಜೀವನವನ್ನು ಹೊಂದಿದ್ದನು. ಆದರೆ ಆತನು ಮನುಷ್ಯ ಜೀವನದ ಹಕ್ಕನ್ನು ಕಳೆದುಕೊಂಡಿರಲಿಲ್ಲ(not forfeited); ಆದ್ದರಿಂದ ನೂತನ ಸೃಷ್ಟಿಯಾಗಿ ಆತನು ಇನ್ನೂ ಪರಿಪೂರ್ಣ ಮನುಷ್ಯ ಜೀವನದ ಈ ಹಕ್ಕನ್ನು ಉಳಿಸಿಕೊಂಡನು. ಪರಿಪೂರ್ಣ ಜೀವನಕ್ಕೆ ಸೇರಿದ ಎಲ್ಲವನ್ನೂ ಆತನು ಹೊಂದಿದ್ದನು. ಯೆಹೂದ್ಯರು ತನ್ನ ಜೀವವನ್ನು ಕಸಿದುಕೊಳ್ಳಲು ಆತನು ಅನುಮತಿಸಿದ್ದನು, ಆದರೆ ಅವನು ತನ್ನ ಜೀವದ ಹಕ್ಕನ್ನು ಶರಣಾಗಿ ಕೊಟ್ಟಿಲ್ಲ ಅಥವಾ ಅದನ್ನು ಕಳೆದುಕೊಳ್ಳಲಿಲ್ಲ. ಆದ್ದರಿಂದ ತಂದೆಯಿಂದ ಜೀವಕ್ಕೆ ಎಬ್ಬಿಸಲ್ಪಟ್ಟಾಗ, ಆತನಿಗೆ ಆತ್ಮ ಸ್ವಭಾವದ ಹಕ್ಕು ಮಾತ್ರವಲ್ಲದೆ, ಲೌಕಿಕ ಶರೀರ

ಸ್ವಭಾವದ ಹಕ್ಕೂ ಸಹ ಇತ್ತು – ಆತನು ಇದನ್ನು ತನಗಾಗಿ ಉಪಯೋಗಿಸಬೇಕಾಗಿರಲಿಲ್ಲ; ಏಕೆಂದರೆ ದೈವಿಕ ಸ್ವಭಾವವನ್ನು ಹೊಂದಿರುವ ಯಾರಿಗಾದರೂ ಭೂಮಿಯ ಮನುಷ್ಯ ಸ್ವಭಾವದ ಉಪಯೋಗ ಅಥವಾ ಬಯಕೆ ಇರುವುದಿಲ್ಲ. ಆತನಿಗಿದ್ದ ನಿರ್ದಿಷ್ಟವಾದ ಹಕ್ಕು ಯಾವುದೆಂದರೆ-ಆದಾಮ ಮತ್ತು ಆತನ ಸಂತತಿಗೆ ಮನುಷ್ಯ ಜೀವವನ್ನು ಉಚಿತವಾಗಿ ನೀಡುವ ಹಕ್ಕು-ಆತನು ಲೋಕಕ್ಕೆ ಬಂದಾಗ ಆತನ ಮನಸ್ಸಿನಲ್ಲಿದ್ದ ಉದ್ದೇಶವೇ ಅದಾಗಿತ್ತು.

ಆದ್ದರಿಂದ ಕರ್ತನಾದ ಯೇಸು ಸತ್ತವರೊಳಗಿಂದ ಎದ್ದು ನಲವತ್ತು ದಿನಗಳ ನಂತರ ಉನ್ನತಕ್ಕೆ(ಪರಲೋಕಕ್ಕೆ) ಏರಿದಾಗ, ಆತನು ತನಗೆ ಇದ್ದ ಎಲ್ಲಾ (ಭೂಮಿಯ) ಹಕ್ಕುಗಳನ್ನು ಉಳಿಸಿಕೊಂಡಿದ್ದನು. ಆತನಿಗೆ ಮನುಷ್ಯ ಜೀವನದ ಹಕ್ಕಿತ್ತು, ಅದನ್ನು ಎಂದಿಗೂ ಕಳೆದುಕೊಳ್ಳಲಿಲ್ಲ; ಆತನಿಗೆ ದೈವಿಕ ಸ್ವಭಾವವೂ ಇತ್ತು, ಅದು ಆತನ ವಿಧೇಯತೆಗೆ ಬಂದಂತಹ ಪ್ರತಿಫಲ-ಅದೊಂದು ಉನ್ನತವಾದ ಹಕ್ಕು, ಒಂದು ಶ್ರೇಷ್ಠವಾದ ಸ್ವಭಾವ. ಆದರೆ ಆತನು ಉನ್ನತಕ್ಕೆ ಏರಿ ಹೋದಾಗ, ಆತನು ತನ್ನ ಬಲಿಯ ಪುಣ್ಯವನ್ನು (Merit of His sacrifice) ಈ ಲೋಕದ ಮನುಕುಲಕ್ಕೆ ಅನ್ವಯಿಸಲಿಲ್ಲ; ಹಾಗಿದಿದ್ದರೆ ಇಡೀ ಲೋಕವು ಈಗ ದುಷ್ಟನ ಕೈಯಲ್ಲಿ ಇರುತ್ತಿರಲಿಲ್ಲ. (1 ಯೋಹಾನ 5:19—ಡಯಾಗ್ಲಾಟ್ ಬೈಬಲ್). ನಮ್ಮ ವಿಮೋಚಕನು ಉನ್ನತಕ್ಕೆ ಏರಿದಾಗ ಈ ಲೋಕದ ಜನರಿಗೆ ತನ್ನ ಬಲಿಯ ಪುಣ್ಯವನ್ನು ಅನ್ವಯಿಸಿದ್ದರೆ, ಅದು ಲೋಕದ ಪಾಪವನ್ನು ತೆಗೆದುಹಾಕುತ್ತಿತ್ತು. ಆದರೆ ಆತನು ಹಾಗೆ ಮಾಡಲಿಲ್ಲ. ಸಭೆ ಮಾತ್ರ ಲೋಕದ ಮೇಲಿನ ಅಪರಾಧ ನಿರ್ಣಯದಿಂದ ತಪ್ಪಿಸಿಕೊಂಡಿದೆ ಎಂದು ಧರ್ಮಶಾಸ್ತ್ರಗಳು ಹೇಳುತ್ತದೆ. (ರೋಮಾಪುರ 8:1) ಹಾಗಾದರೆ ಲೋಕವು ಇನ್ನೂ ದುಷ್ಟನ ಕೈಕೆಳಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಅಪರಾಧ ನಿರ್ಣಯದಿಂದ ತಪ್ಪಿಸಿಕೊಂಡವರು ಯಾರೆಂದರೆ ಈ ಸುವಾರ್ತಾ ಯುಗದ ವ್ಯವಸ್ಥೆಯನ್ನು ಒಪ್ಪಿಕೊಂಡವರು ಮಾತ್ರ. ಪ್ರತಿಷ್ಟಿತ ವರ್ಗವನ್ನು ಹೊರತುಪಡಿಸಿ ಬೇರೆ ಯಾರೂ ಕ್ರಿಸ್ತನಿಂದ ಪುಣ್ಯ ಮತ್ತು ನೀತಿವಂತಿಕೆಯನ್ನು (Merit and Justification) ಹೊಂದಿಲ್ಲ.

## ಸಭೆಗೆ ವಿಧಿಸಲಾದ(ಹೊರಿಸಲಾದ) ಯಥಾಸ್ಥಿತಿ
## Restitution imputed to the Church

ಹಾಗಾದರೆ ನಮ್ಮ ಕರ್ತನು ಆ ಪುಣ್ಯವನ್ನು (Merit) ಸಭೆಗೆ ಹೇಗೆ ಅನ್ವಯಿಸುತ್ತಾನೆ? ಅದು ನೇರವಾಗಿ ಅಲ್ಲ ಎಂದು ನಾವು ಉತ್ತರಿಸುತ್ತೇವೆ. ಕ್ರಿಸ್ತನು ತನ್ನ ಪುಣ್ಯವನ್ನು (merit) ನೇರವಾಗಿ ಅನ್ವಯಿಸಿದರೆ, ಅದು ಸಭೆಗೆ ಮನುಷ್ಯ ಜೀವನವನ್ನು, ಮನುಷ್ಯ ಪರಿಪೂರ್ಣತೆಯನ್ನು ನೀಡುತ್ತದೆ. ದೇವರು ಸಭೆಗಾಗಿ ಇದಕ್ಕಿಂತ ಉತ್ತಮವಾದದನ್ನು ಇಟ್ಟಿದ್ದಾರೆ—ಸಭೆಯು ಯೇಸು ಪಡೆದ ಅದೇ ದೈವಿಕ ಸ್ವಭಾವವನ್ನು ಪಡೆಯಬೇಕೆಂದು ದೇವರು ಚಿತ್ತಗೊಂಡಿದ್ದಾರೆ. ಸಭೆಯು ಯೇಸುವಿನ ಹೆಜ್ಜೆಯ ಜಾಡನ್ನು ಅನುಸರಿಸುವ ಮೂಲಕ ಇದನ್ನು ಸಾಧಿಸಬಹುದು. ಇದು ಸೂಚಿಸುವುದೇನೆಂದರೆ, ಕ್ರಿಸ್ತನು ತನ್ನ ಮನುಷ್ಯ ಜೀವನವನ್ನು ಬಲಿ ಸಲ್ಲಿಸಿದಂತೆ ಮತ್ತು ತಂದೆಯ ಚಿತ್ತದ ಪ್ರಕಾರ ತನ್ನ ಭೂಮಿಯ ಹಕ್ಕುಗಳನ್ನು ತ್ಯಾಗಮಾಡಿದಂತೆ, ಆತನ ಮದಲಗಿತ್ತಿ ವರ್ಗದ ಸದಸ್ಯರಾಗಲು ಎಲ್ಲರೂ ಅದೇ ರೀತಿ ಮಾಡಬೇಕು, ಆತನೊಂದಿಗೆ ಐಕ್ಯವಾಗಲು (ಜೊತೆ ಸೇರಲು) ತಮ್ಮ ಲೌಕಿಕ ಜೀವನವನ್ನು ಒಪ್ಪಿಸಿಕೊಡಬೇಕು. ಆತನೊಂದಿಗೆ ಸಹಿಸಿಕೊಳ್ಳುವವರಾಗಿದ್ದರೆ ಮಾತ್ರ ಆತನೊಡನೆ ಆಳುವೆವು – 2 ತಿಮೊಥೆ 2: 11, 12.

“ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ.” (ಮತ್ತಾಯ 16 : 24). “ಎಲ್ಲಿ ನಾನು ಇರುತ್ತೇನೋ ಅಲ್ಲಿ ನನ್ನ ಸೇವಕನು ಸಹ ಇರುವನು.” (ಯೋಹಾನ 12 : 26) ಯಾರೆಲ್ಲಾ ಈ ಸುವಾರ್ತಾ ಯುಗದಲ್ಲಿ ಹಾಗೆ ಮಾಡುತ್ತಾರೋ ಅವರು ಅದೇ ದೈವಿಕ ಸ್ವಭಾವವನ್ನು, ಅದೇ ಮಹಿಮೆಯನ್ನು, ಅದೇ

ಅಮರತ್ವವನ್ನು (ನಿರ್ಲಯತ್ವವನ್ನು) ಪಡೆಯುತ್ತಾರೆ- ವ್ಯತ್ಯಾಸವೇನೆಂದರೆ ನಮ್ಮ ಕರ್ತನು ಯಾವಾಗಲೂ ಎಲ್ಲರ ಮೇಲೆ ಶಿರಸ್ಸಾಗಿರುತ್ತಾನೆ, ಅವನು ದೇಹವಾದ ಸಭೆಗೆ ಮುಖ್ಯಸ್ಥನಾಗಿರುತ್ತಾನೆ, ಮತ್ತು ಸಭೆಯು ಆತನ ಶರೀರವಾಗಿದ್ದು ಯಾವಾಗಲೂ ಕ್ರಿಸ್ತನ ಸದಸ್ಯರಾಗಿರುತ್ತಾರೆ, ವಿಶೇಷವಾಗಿ ಸಭೆಯ ಮಹಿಮೆ ಹೊಂದಿದವರಾಗಿರುತ್ತಾರೆ.

ಹಾಗಾದರೆ ಯೇಸು ಪರಿಶುದ್ಧನು, ಪವಿತ್ರವುಳ್ಳವನಾಗಿರಬೇಕಾದ ಅಗತ್ಯವಿರುವಾಗ, ಬಿದ್ದು ಹೋದ ಮನುಷ್ಯ ಸ್ವಭಾವದಲ್ಲಿರುವ ಸಭೆಯನ್ನು ತಂದೆ ಹೇಗೆ ಸ್ವೀಕರಿಸಲು ಸಾಧ್ಯ ಎಂಬ ಪ್ರಶ್ನೆ ಉದ್ಭವಿಸುತ್ತದೆ? ಇದಕ್ಕೆ ಸತ್ಯವೇದದ ಉತ್ತರವೇನೆಂದರೆ, ಸಭೆಯಾಗುವ ಈ ವರ್ಗದ ಶಿಷ್ಯರಿಗೆ ಯೇಸು ಅವರ ದೋಷಗಳನ್ನು ಮತ್ತು ಅಪೂರ್ಣತೆಗಳನ್ನು ಮುಚ್ಚುವ (ಮರೆಮಾಡುವ) ಹಾಗೆ ತನ್ನ ಬಲಿಯ ಪುಣ್ಯವನ್ನು (merit of His sacrifice) ಅವರಿಗೆ ಅನ್ವಯಿಸುತ್ತಾನೆ. ನಾವು ಕೊಡುವದು ಮತ್ತು ಹೊರಿಸುವದು ಇದರ ನಡುವೆ ಇರುವ ವ್ಯತ್ಯಾಸವನ್ನು ಕುರಿತು ಗ್ರಹಿಸಬೇಕು. ಆತನು ತನ್ನ ಪುಣ್ಯವನ್ನು (merit) ಈ ಲೋಕಕ್ಕೆ ನಂತರ ಕೊಡುತ್ತಾನೆ. ಆದರೆ ಈಗ ಆತನು ಸಭೆಗೆ ಅದನ್ನು ಹೊರಿಸುತ್ತಾನೆ (imputes)(ವಿಧಿಸುತ್ತಾನೆ).

ಈ ಪದದ ಮೂಲಕ ಹೊರಿಸುವುದು (ವಿಧಿಸುವುದು) ಎಂಬುದನ್ನು ಸೂಚಿಸುತ್ತದೆ, ಸಭೆಯು ಲೋಕದವರಂತೆಯೇ ಮನುಷ್ಯ ಸ್ವಭಾವದಲ್ಲಿ ಉಳಿದಿದ್ದರೆ, ಅವರು ಕ್ರಮೇಣವಾಗಿ ಮಾನವ ಪರಿಪೂರ್ಣತೆಗೆ ಅವನತಿಯಿಂದ ಹೊರಬರುವ ಹಕ್ಕನ್ನು, ಈ ಲೋಕದವರಂತೆಯೇ ಹೊಂದುತ್ತಿದ್ದರು. ಯೇಸು ತನ್ನ ಮರಣದ ಮೂಲಕ ಸಭೆಗೆ ಮತ್ತು ಆದಾಮನ ಸಂತತಿಯಲ್ಲಿರುವ ಉಳಿದವರಿಗೆ ಆ ಎಲ್ಲಾ ಹಕ್ಕುಗಳನ್ನು ನೀಡುವ ಸವಲತ್ತನ್ನು ಪಡೆದುಕೊಂಡನು. ಆದರೆ ಈ ಸಭೆಯ ವರ್ಗದವರು ಮಾನವ ಪರಿಪೂರ್ಣತೆಗೆ ಸಿಗುವ ಆ ಎಲ್ಲಾ ಹಕ್ಕುಗಳನ್ನು ತ್ಯಾಗಮಾಡುತ್ತಾರೆ. ನಾವು ದೇವರಿಗೆ ಪ್ರತಿಷ್ಟಿಸಿಕೊಂಡಾಗ, ನಾವು ಭೂಮಿ ಮತ್ತು ಭೂಮಿಯ ವಿಷಯಗಳ ಸ್ವಾಸ್ಥ್ಯವನ್ನು (ಬಾಧ್ಯತೆಯನ್ನು) ಪಡೆಯುವ ಹಕ್ಕನ್ನು ಬಿಟ್ಟುಕೊಟ್ಟೆವು. ನಾವು ನಮ್ಮ ಎಲ್ಲಾ ಹಕ್ಕುಗಳನ್ನು ಬಿಟ್ಟುಕೊಟ್ಟೆವು ಅಂದರೆ ನಾವು ಅವುಗಳನ್ನು ಒಪ್ಪಿಸಿಕೊಟ್ಟೆವು ಎಂದರ್ಥವಾಗುತ್ತದೆ. ನಂಬಿಕೆಯ ಮೂಲಕ ಯೇಸು ತಕ್ಕ ಕಾಲದಲ್ಲಿ ಇಡೀ ಮನುಕುಲದಂತೆಯೇ ನಮಗೂ ಮರು ಸ್ಥಾಪನೆಯ ಆಶೀರ್ವಾದಗಳನ್ನು ನೀಡುತ್ತಾನೆ ಎಂದು ವಿಶ್ವಾಸಿಸುತ್ತೇವೆ. ನಂಬಿಕೆಯ ಮೂಲಕ ಆ ಆಶೀರ್ವಾದಗಳನ್ನು ಸ್ವೀಕರಿಸುತ್ತೇವೆ ಮತ್ತು ನಂಬಿಕೆ ಮೂಲಕ ಅವುಗಳನ್ನು ನಾವು ಒಪ್ಪಿಸಿಕೊಡುತ್ತೇವೆ. ಸಭೆ ಮಾಡಲು ಉಳಿದಿರುವ ಒಂದೇ ಒಂದು ವಿಷಯ ಏನೆಂದರೆ ಅವರ ಭೂಮಿಯ ಜೀವನವನ್ನು ಬಿಟ್ಟುಕೊಡುವುದು. ಕೆಲವರು ಹೆಚ್ಚು ಶಕ್ತಿ(ಚೈತನ್ಯವನ್ನು) ಹೊಂದಿರಬಹುದು, ಮತ್ತು ಕೆಲವರು ಕಡಿಮೆ ಹೊಂದಿರಬಹುದು; ಕೆಲವರು ಹೆಚ್ಚು ಪ್ರತಿಭೆಗಳನ್ನು (ತಲಾಂತು) ಹೊಂದಿರಬಹುದು, ಕೆಲವರು ಕಡಿಮೆ ಹೊಂದಿರಬಹುದು; ಕೆಲವರು ಹೆಚ್ಚು ವರ್ಷಗಳು ಬದುಕಿರಬಹುದು; ಕೆಲವರು ಕಡಿಮೆ ವರ್ಷಗಳು ಬದುಕಿರಬಹುದು; ಆದರೆ ಪ್ರತಿಯೊಬ್ಬರೂ ಏನನ್ನು ಹೊಂದಿದ್ದಾರೋ ಅದನ್ನು ಬಿಟ್ಟುಕೊಡಬೇಕು, ಶರಣಾಗಿಸಬೇಕು.

ಆದ್ದರಿಂದ ಪ್ರತಿಷ್ಠೆಯ ಸಮಯದಲ್ಲಿ ಸಭೆಯ ವರ್ಗದವರು ತಮ್ಮ ಭೂಮಿಯ ಸ್ವಭಾವವನ್ನು ಸ್ವಯಂಪ್ರೇರಣೆಯಿಂದ ಒಪ್ಪಿಸಿಕೊಡುತ್ತಾರೆ. ಪ್ರಸ್ತುತ (ಈಗಿನ) ಕಾಲದ ಎಲ್ಲಾ ಲೌಕಿಕ ಹಕ್ಕುಗಳನ್ನು ಮತ್ತು ಲೌಕಿಕ ಭಾಗಗಳು ಮತ್ತು ಪಾಲುಗಳು ಅವರು ಲೋಕದವರಾಗಿದ್ದರೆ ಅವರದಾಗಿತ್ತು, ಆದರೆ ಅವೆಲ್ಲವನ್ನು ಶರಣಾಗಿ ಒಪ್ಪಿಸಿಕೊಡುತ್ತಾರೆ. ಯೇಸು ಪ್ರಸ್ತುತ (ಈಗಿನ) ಸಮಯದಲ್ಲಿ ಸಭೆಗೆ ಈಡು-ಬಲಿಯ ಯಾವುದೇ ಭಾಗವನ್ನು ಕೊಡುವುದಿಲ್ಲ, ಆದರೆ ಅವರು ಲೋಕದ ಭಾಗವಾಗಿ ಉಳಿದಿದ್ದರೆ ಅವರಿಗೆ ಇದ್ದಿರುವಂತಹದನ್ನು ಹೊರಿಸುತ್ತಾನೆ (ವಿಧಿಸುತ್ತಾನೆ), ಅವರದ್ದಾಗಿ ಎಣಿಸುತ್ತಾನೆ.

ಯೇಸು ಮರಣ ಹೊಂದಿದಾಗ, ಆದಾಮನಿಗೆ ಪರಿಹಾರವಾಗಿ ಆತನು ಈಡುಬಲಿಯನ್ನು ಕೊಡಲಿಲ್ಲ. ಯೇಸು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಾಗ, ಆತನು ಈಡುಬಲಿಯನ್ನು ಕೊಡಲಿಲ್ಲ; ಮತ್ತು ಆತನು ತಂದೆಯ ಬಳಿಗೆ ಏರಿ ಹೋದಾಗ ಆತನು ಲೋಕಕ್ಕಾಗಿ ಈಡುಬಲಿಯನ್ನು ಕೊಡಲಿಲ್ಲ. ಆದರೆ

ಆತನು ತನ್ನ ಬಲಿಯ ಪುಣ್ಯವನ್ನು (Merit of His sacrifice) ತಂದೆಯ ಕೈಯಲ್ಲಿ ಕೊಟ್ಟನು. ಸುವಾರ್ತಾ ಯುಗದಲ್ಲಿ ಆತನು ಈ ಪುಣ್ಯವನ್ನು (Merit) ಸಭೆಗೆ ಮಾತ್ರ ಹೊರಿಸುತ್ತಿದ್ದಾನೆ (ವಿಧಿಸುತ್ತಿದ್ದಾನೆ), ಆದರೆ ಈಗ ಆತನು ಸಭೆಗೆ ವಿಧಿಸುವುದನ್ನು (ಹೊರಿಸುವುದನ್ನು) ಮುಗಿಸಲಿದ್ದಾನೆ, ಮತ್ತು ಲೋಕಕ್ಕೆ ಸಮಸ್ತವನ್ನು ಸರಿಮಾಡುವ ಕೆಲಸವು ಬೇಗನೆ ಪ್ರಾರಂಭವಾಗಲಿದೆ; ಮತ್ತು ಸಭೆಗೆ ವಿಧಿಸಲಾದ ಪುಣ್ಯವನ್ನು (ಸಾಲ) (imputed - loan), ಲೋಕಕ್ಕೆ ಸಮಸ್ತವನ್ನು ಸರಿಮಾಡುವ ಕೆಲಸವನ್ನು ಆರಂಭಿಸುವ ಮುಂಚೆ, ಸಭೆಯು ಅದನ್ನು ದೈವಿಕ ನ್ಯಾಯಾಧಿಪತಿಯಾದ ತಂದೆಗೆ ಮರುಪಾವತಿಸಬೇಕು (ಒಪ್ಪಿಸಬೇಕು).

## ಸುವಾರ್ತಾ ಯುಗದ ಕೆಲಸವು ಛಾಯೆಯಾಗಿದೆ

### WORK OF THE GOSPEL AGE TYPIFIED

ಯೆಹೂದ್ಯರ ದೋಷಪರಿಹಾರಕ ಮಹಾದಿನದಂದು, ಮಹಾಯಾಜಕನು ಮೊದಲನೆಯದಾಗಿ ಹೋರಿಯನ್ನು ಕೊಲ್ಲುತ್ತಾನೆ. ಆ ಹೋರಿ ಪರಿಪೂರ್ಣ ಮನುಷ್ಯನಾದ ನಮ್ಮ ಕರ್ತನಾದ ಯೇಸುವನ್ನು ಸೂಚಿಸುತ್ತದೆ. ಮತ್ತು ಯಾಜಕನು ನೂತನ ಸೃಷ್ಟಿಯಾದ ನಮ್ಮ ಕರ್ತನನ್ನು ಸೂಚಿಸುತ್ತದೆ. ಹೀಗೆ ಆತನು ಮನುಷ್ಯ ಸ್ವಭಾವದಲ್ಲಿ ಪ್ರತಿಷ್ಠೆಪಡಿಸಿಕೊಂಡವನೂ ಮತ್ತು ನೂತನ ಸೃಷ್ಟಿಯ ಸ್ಥಿತಿಯಲ್ಲಿರುವುದಕ್ಕೆ ಛಾಯೆಯಾಗಿದ್ದಾನೆ, ಇನ್ನೂ ಮಾಂಸಿಕ ಶರೀರದಲ್ಲಿ, ಮೊದಲ ಪವಿತ್ರ ಸ್ಥಳದಲ್ಲಿರುವ ಯಾಜಕನಿಗೆ ಛಾಯೆಯಾಗಿದ್ದಾನೆ. ನಮ್ಮ ಕರ್ತನು ತನ್ನ ಮೂರುವರೆ ವರ್ಷಗಳ ಸೇವೆಯಲ್ಲಿ ಪವಿತ್ರ ಸ್ಥಳದಲ್ಲಿರುವ ಸ್ಥಿತಿಯಲ್ಲಿದ್ದನು. ಆ ಸಮಯದಲ್ಲಿ ಆತನಿಗೆ ಚಿನ್ನದ ಧೂಪವೇದಿ, ಮತ್ತು ಚಿನ್ನದ ದೀಪಸ್ತಂಭದಿಂದ ಬರುವ ಬೆಳಕು (ದೇವರ ಸತ್ಯದ ಬೆಳಕನ್ನು ಸೂಚಿಸುತ್ತದೆ), ಮತ್ತು ರೊಟ್ಟಿಯ ಮೇಜು (ಆತ್ಮೀಕ ಆಹಾರ) ಇವುಗಳ ಆಶೀರ್ವಾದಗಳು ಇದ್ದವು. ಮೂರುವರೆ ವರ್ಷಗಳು ಮುಗಿಸಿದ ನಂತರ, ತನ್ನನ್ನೇ ಬಲಿಯಾಗಿ ಸಲ್ಲಿಸುವ ಕೆಲಸವನ್ನು ಮುಗಿಸಿದ ನಂತರ, ನಿಜರೂಪದ ಧೂಪವನ್ನು ಸಲ್ಲಿಸಿದ ನಂತರ, ಆತನು ಎರಡನೆಯ ತೆರೆಯನ್ನು ದಾಟಿ ಹೋದನು.

ಮೂರನೆಯ ದಿನ ನಮ್ಮ ಕರ್ತನು ಎರಡನೆಯ ತೆರೆಯ ಆ ಕಡೆಯಲ್ಲಿ – ಆತ್ಮೀಕ ಸಮತಲದಲ್ಲಿ (ನೆಲೆಯಲ್ಲಿ) ನೂತನ ಸೃಷ್ಟಿಯಾಗಿ ಸಂಪೂರ್ಣ ಪರಿಪೂರ್ಣನಾಗಿ ಜೀವಂತವಾಗಿ ಎದ್ದನು, ಇನ್ನು ಮುಂದೆ ಎಂದಿಗೂ ಆತನು ಮನುಷ್ಯನಲ್ಲ. ಆತನು ಗಾಳಿಯಂತೆ ಹೋಗಬಲ್ಲನು ಮತ್ತು ಬರಬಲ್ಲನು ಮತ್ತು ಆತನು ತನ್ನ ಶಿಷ್ಯರೊಂದಿಗೆ ಇದ್ದು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆಂದರೆ, ಇನ್ನು ಮುಂದೆ ಆತನು ಮನುಷ್ಯನಲ್ಲ – ಆತನು ಗಾಳಿಯಂತೆ ಹೋಗಿ ಬರಬಲ್ಲನು, ಮತ್ತು ವಿಧವಿಧವಾದ ದೇಹದ ರೂಪದಲ್ಲಿ ಕಾಣಿಸಿಕೊಳ್ಳಬಲ್ಲನು. ನಂತರ ಆತನು ಉನ್ನತಕ್ಕೆ(ಪರಲೋಕಕ್ಕೆ) ಏರಿ ಹೋದಾಗ, ನಿಜರೂಪದ ಮಹಾ ಯಾಜಕನಾಗಿ ತನ್ನೊಂದಿಗೆ ರಕ್ತವನ್ನು ತೆಗೆದುಕೊಂಡು ಹೋದನು. ರಕ್ತವು ಬಲಿಯ ಜೀವವನ್ನು ಸೂಚಿಸುತ್ತದೆ. ಆತನು ದೇವರ ಸನ್ನಿಧಿಯಲ್ಲಿ ಕಾಣಿಸಿಕೊಂಡು ಕೃಪಾಸನದ ಮೇಲೆ ರಕ್ತವನ್ನು ಚಿಮುಕಿಸಿದನು, ಕೃಪಾಸನದ ಮೇಲೆ ಈ ರಕ್ತವನ್ನು ಚಿಮುಕಿಸುವುದು ಒಂದು ನಿರ್ದಿಷ್ಟ ವರ್ಗಕ್ಕೆ ದೋಷ ಪರಿಹಾರ ಮಾಡುವುದಾಗಿತ್ತು. ನಾವು ನೋಡುವ ಆ ದೋಷ ಪರಿಹಾರವು ಯಾಜಕರಿಗೆ ಮತ್ತು ಲೇವಿಯರಿಗೆ ಮಾತ್ರ ಮಾಡಲ್ಪಟ್ಟಿದೆ--ಲೋಕಕ್ಕಾಗಿ ಅಲ್ಲ--ಯಾಜಕಕಾಂಡ 16:6.

ಮಹಾಯಾಜಕನು ಯಾಜಕರಿಗೂ ಲೇವಿಯರಿಗೂ ದೋಷ ಪರಿಹಾರ ಯಜ್ಞವನ್ನು ಸಲ್ಲಿಸಿದ ನಂತರ, ಆತನು ಮತ್ತೆ ಪ್ರಾಕಾರಕ್ಕೆ ಹೋಗಿ ಅಲ್ಲಿ ಬೇರೆ ಕೆಲಸವನ್ನು ಪ್ರಾರಂಭಿಸಿದನು. ನಮ್ಮ ಕರ್ತನು ಪರಲೋಕಕ್ಕೆ ಏರಿ ಹೋದ ದಿನದಿಂದ ಪಂಚಶತ್ತಮದ ದಿನದಂದು ಪವಿತ್ರಾತ್ಮವನ್ನು ಸುರಿಸಿದ ಆ ಹತ್ತು ದಿನಗಳ ಅಂತರದಲ್ಲಿ ನಿಜರೂಪದ ಯಾಜಕರಿಗೂ ಲೇವಿಯರಿಗೂ ತನ್ನ ರಕ್ತವನ್ನು ಅನ್ವಯಿಸಿದನು(application of the blood). ಆತನು ತನ್ನ ಪುಣ್ಯವನ್ನು (Merit) ಸಭೆಗೆ ಅನ್ವಯಿಸಿದನು. ಈ ವಿಷಯ ನಮಗೆ ತಿಳಿದಿದೆ; ಏಕೆಂದರೆ ಪಾಪಗಳಿಗಾಗಿ ನಿವಾರಣೆ ನೀಡಿ ತೃಪ್ತಿಪಡಿಸಿದ ನಂತರ

ಪಂಚಾಶತ್ತಮದಂದು ಪವಿತ್ರಾತ್ಮದ ಸುರಿಸುವಿಕೆ ನಡೆಯಿತು, ಇದು ದೈವಿಕ ಕರುಣೆ ಅವರ ಮೇಲೆ ಬಂದಿದೆ ಎಂಬುದಕ್ಕೆ ಪುರಾವೆಯಾಗಿದೆ.– ಇಬ್ರಿಯ 9 : 24.

ಛಾಯೆಯಲ್ಲಿ ಮಹಾ ಯಾಜಕನು ಹೋರಿಯನ್ನು ಬಲಿ ಸಲ್ಲಿಸಿದ ನಂತರ, ಅವನು ಮುಂದಿನ ಭಾಗವಾದ-ಕರ್ತನ ಹೋತವನ್ನು ಕೊಲ್ಲುವ ಕೆಲಸವನ್ನು ಮಾಡುತ್ತಾನೆ. ಹೋತವು (ಆಡು) ಹೋರಿಗಿಂತ ಕೆಳಮಟ್ಟದ್ದಾಗಿದೆ. ಸ್ವತಃ ಕರ್ತನೇ ಆ ಹೋರಿಗೆ ಛಾಯೆಯಾಗಿದ್ದಾನೆ. ಕರ್ತನ ಹೋತವು, ಆತನ ಶರೀರವಾದ ನಂಬಿಗಸ್ತರಾದ ಸಭೆಯ ಸದಸ್ಯರನ್ನು ಸೂಚಿಸುತ್ತದೆ. ಈ ಸುವಾರ್ತಾ ಯುಗದಲ್ಲಿ ಬಲಿಯನ್ನು ಅರ್ಪಿಸುವುದು ಸಭೆಯ ಕೆಲಸವಾಗಿದೆ. ಅವರು ತಮ್ಮನ್ನು ತಾವು ಅರ್ಪಿಸಿಕೊಳ್ಳಲು ಸಾಧ್ಯವಿಲ್ಲ; ಏಕೆಂದರೆ ಸ್ವಾಭಾವಿಕವಾಗಿ ಮರಣ ದಂಡನೆಗೆ ಒಳಪ್ಪಟ್ಟ ಆದಾಮನ ಸಂತತಿಯ ಸದಸ್ಯರಾಗಿದ್ದ ಕಾರಣ ಅವರು ಯಾಜಕರಾಗಲು ಯೋಗ್ಯರಲ್ಲ, ಮತ್ತು ಮಹಾನ್ ಪ್ರಧಾನ ಯಾಜಕನು ಅವರಿಗಾಗಿ ತನ್ನ ಬಲಿಯ ಪುಣ್ಯವನ್ನು(Merit) ಹೊರಿಸುವವರೆಗೆ (ವಿಧಿಸುವವರೆಗೆ) ಯಾಜಕರಾಗಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಹೋರಿಯನ್ನು ಅರ್ಪಿಸಿದ ಮಹಾನ್ ಪ್ರಧಾನ ಯಾಜಕನು ಹೋತವನ್ನು (ಆಡು) ಸಹ ಅರ್ಪಿಸಿದನು.

ನಂತರ ಈ ವಿಷಯದ ತೀರ್ಮಾನವನ್ನು ನಾವು ನೋಡುತ್ತೇನೆ. ಛಾಯೆಯಲ್ಲಿ ಹೋತದ ರಕ್ತವನ್ನು ಅತಿ ಪವಿತ್ರ ಸ್ಥಳಕ್ಕೆ ತೆಗೆದುಕೊಂಡು ಹೋಗಲಾಯಿತು ಮತ್ತು ಅದನ್ನು ಯಾಜಕರಿಗಾಗಿ ಅಲ್ಲ, ಲೇವಿಯರಿಗಾಗಿ ಅಲ್ಲ, ಆದರೆ ಜನರಿಗಾಗಿ ಅನ್ವಯಿಸಲಾಯಿತು. ಹೋರಿಯ ರಕ್ತವನ್ನು ಯಾಜಕರು ಮತ್ತು ಲೇವಿಯರಿಗಾಗಿ ಮಾತ್ರ ಅನ್ವಯಿಸಲಾಯಿತು; ಹೋತದ (ಆಡು) ರಕ್ತವನ್ನು ಜನರಿಗಾಗಿ ಅನ್ವಯಿಸಲಾಯಿತು. (ಯಾಜಕಕಾಂಡ 16 : 6, 15). ಈ ಎರಡು ಬಲಿಗಳು ಸುವಾರ್ತಾ ಯುಗದ ಎಲ್ಲಾ ಬಲಿಗಳನ್ನು ಸೂಚಿಸುತ್ತದೆ; ಶ್ರೇಷ್ಠವಾದ ಬಲಿಯು ನಮ್ಮ ಕರ್ತನಾದ ಯೇಸುವಿನದ್ದಾಗಿತ್ತು, ಕೆಳಮಟ್ಟದ ಬಲಿಯು ಸಭೆಯದಾಗಿತ್ತು.

## ಸಭೆಗೆ ಈಡುಬಲಿಯಲ್ಲಿ ಯಾವ ಪಾಲೂ ಇಲ್ಲ

### THE CHURCH NO PART OF THE RANSOM

ಇಡೀ ಲೋಕದ ಪಾಪಗಳಿಗೆ ಅನ್ವಯಿಸಲು (ಪ್ರಾಯಶ್ಚಿತ್ತ ಮಾಡಲು) ನಿಜರೂಪದ ಹೋರಿಯಲ್ಲಿ (ಯೇಸು) ಸಾಕಷ್ಟು ಪುಣ್ಯ (ಅರ್ಹತೆ) (MERIT) ಇತ್ತು. ಆದರೆ ಸಭೆಗೆ ಬಲಿಯಲ್ಲಿ ಪಾಲ್ಗೊಳ್ಳಲು ದೇವರ ವ್ಯವಸ್ಥೆಯ ಅಡಿಯಲ್ಲಿ ಅನುಮತಿಸಲಾಗಿತ್ತು. ಯಾರೆಲ್ಲಾ ಬಲಿಯಲ್ಲಿ ಪಾಲು ಹೊಂದುತ್ತಾರೋ ಅವರಿಗೆ ಮಹಿಮೆಯಲ್ಲಿ ಪಾಲು ಹೊಂದುವ ಸವಲತ್ತು (ಭಾಗ್ಯ) ಇರುತ್ತದೆ. ನ್ಯಾಯಾಧಿಪತಿಯ (Justice) ತೃಪ್ತಿಗಾಗಿ ಸಭೆಯ ಯಾವ ವ್ಯಕ್ತಿಯಾದರೂ ಸಾಯುವುದು ಅಗತ್ಯವಿರಲಿಲ್ಲ; ಆದರೆ ಅವರು ವಾಗ್ದಾನ ಮಾಡಿದ ಮಹಿಮೆಯಲ್ಲಿ ಪಾಲ್ಗೊಳ್ಳಲು ಅದು ಅಗತ್ಯವಾಗಿತ್ತು. ಆದ್ದರಿಂದ ಇದು ಕರ್ತನ ಕಡೆಯಿಂದ ನಮ್ಮ ಪಾಪಗಳಿಗೆ ಬಲಿಯಾಗಿದ್ದರೂ, ಆತನ ಮಹಿಮೆಯಲ್ಲಿ ಪಾಲುಹೊಂದಲು ನಮ್ಮ ಕಡೆಯಿಂದ ಅದು ಅವಶ್ಯವಾಗಿದೆ. ಕರ್ತನು ಬಲಿಯನ್ನು ಅರ್ಪಿಸುತ್ತಾನೆ; ಅದು ನಮ್ಮ ಬಲಿ ಅಲ್ಲ. ಅಪೋಸ್ತಲನಾದ ಪೌಲನು ಸೂಚಿಸುವಂತೆ ನಾವು ಕೇವಲ ನಮ್ಮ ದೇಹಗಳನ್ನು ಸಮರ್ಪಿಸುತ್ತೇವೆ. (ರೋಮಾಪುರದವರಿಗೆ 12 : 1). ದೇವರು ಕ್ರಿಸ್ತನ ಮೂಲಕ ಹೊರತು ಪಡಿಸಿ ನಮ್ಮ ಬಲಿಯನ್ನು ಸ್ವೀಕರಿಸುವುದಿಲ್ಲ; ನಾವು ನಮ್ಮ ಪ್ರಿಯನ ಮೂಲಕ ಮಾತ್ರ ಸ್ವೀಕರಿಸಲ್ಪಡುತ್ತೇವೆ (ಎಫೆಸ 1 :3-6). ಹೀಗೆ ನಮ್ಮ ಕರ್ತನು ನಮ್ಮನ್ನು ಸ್ವೀಕರಿಸಿದ್ದರಿಂದಲೇ, ಬಲಿಯಲ್ಲಿ ಮತ್ತು ಮಹಿಮೆಯಲ್ಲಿ ಆತನೊಂದಿಗೆ ಪಾಲು ಹೊಂದಲು ಸವಲತ್ತು (ಭಾಗ್ಯ) ನಮಗುಂಟಾಗಿದೆ.

ಆದ್ದರಿಂದ ನಮ್ಮ ಕರ್ತನು ಇನ್ನೂ ಮನುಷ್ಯ ಜೀವನವನ್ನು ಬಿಟ್ಟುಕೊಡದೆ ಇದ್ದಾನೆ. ಆತನು ಸಭೆಗೆ ಮನುಷ್ಯ ಜೀವನವನ್ನು ಕೊಡಲಿಲ್ಲ. ಆತನು ಹೊಂದಿದ್ದ ಮನುಷ್ಯ ಜೀವನದ ಹಕ್ಕಿನ ಒಂದು

ಕಣವನ್ನು ಸಹ ಆತನು ಬಿಟ್ಟುಕೊಡಲಿಲ್ಲ. ನಮ್ಮ ಕರ್ತನಿಗೆ ಈ ಭೂಮಿಯ ದೇಹದ ಅಗತ್ಯವಿಲ್ಲ; ಆತನ ಸಭೆಗೂ ಸಹ ಈ ಭೂಮಿಯ ಶರೀರಗಳ ಅವಶ್ಯವಿಲ್ಲ. ಯೇಸು ಈ ಭೂಮಿಯ ಹಕ್ಕುಗಳಿಂದ ಏನನ್ನು ಉಪಯೋಗಿಸುತ್ತಾನೆ ಅಥವಾ ನಾವು ಅವುಗಳಿಂದ ಏನನ್ನು ಉಪಯೋಗಿಸುತ್ತೇವೆ? ನಾವು ಮತ್ತೆ ಮನುಷ್ಯರಾಗಲು ಎಂದಿಗೂ ಉದ್ದೇಶ ಪಡುವುದಿಲ್ಲ; ಕರ್ತನು ಮತ್ತೆ ಮನುಷ್ಯನಾಗಲು ಉದ್ದೇಶಿಸಿಲ್ಲ. ಕ್ರಿಸ್ತನ ಪುಣ್ಯವನ್ನು (ಅರ್ಹತೆ) (MERIT) ನಮಗೆ ಅಂಗೀಕಾರದ ಬಲಿಗಳಾಗಿ ಮಾಡುವ ಉದ್ದೇಶಕ್ಕಾಗಿ ಮಾತ್ರ ನಮಗೆ ವಿಧಿಸಲಾಯಿತು (ಹೊರಿಸಲಾಯಿತು) (imputed); ಮತ್ತು ಸಭೆಯ ಕೊನೆಯ ಸದಸ್ಯನು ಮಹಿಮೆ ಹೊಂದಿದಾಗ ಈ ಪುಣ್ಯ (ಅರ್ಹತೆ) ಮತ್ತೆ ಬಿಡುಗಡೆಯಾಗುತ್ತದೆ. (ತಂದೆಯ ಕೈಯಲ್ಲಿ ಒಪ್ಪಿಸಲಾಗುತ್ತದೆ). ಆಗ ಕ್ರಿಸ್ತನ ಬಲಿಯ ಸಂಪೂರ್ಣ ಮೌಲ್ಯವು ಲೋಕದ ಮನುಕುಲಕ್ಕೆ ತಮ್ಮದಾಗಿಸಿಕೊಳ್ಳುವುದಕ್ಕೆ ಸಿದ್ಧವಾಗುತ್ತದೆ, ಏಕೆಂದರೆ ಆ ಸಮಯದಲ್ಲಿ ಸಭೆಯು ಆದಾಮನ ಸಂತತಿಗೆ ಸೇರಿರುವುದು ಕೊನೆಗೊಳ್ಳುತ್ತದೆ, ದೈವಿಕ ಸ್ವಭಾವವನ್ನು ಹೊಂದಿರುತ್ತದೆ. – 2 ಪೇತ್ರನು 1 : 4

ಹಾಗಾದರೆ ಲೋಕದ ಪರವಾಗಿ ಯೇಸುವಿನ ಪುಣ್ಯವು ಜನರು ತಮ್ಮದಾಗಿಸಿಕೊಳ್ಳುವ ಈ ಕೆಲಸವು ಸಾವಿರ ವರ್ಷ ಯುಗದ ಕೊನೆಯವರೆಗೂ ನಡೆಯುತ್ತದೆ; ಆಗ ವಿಮೋಚಕನ ರಾಜ್ಯವು ಮನುಷ್ಯನನ್ನು ಯಥಾಸ್ಥಿತಿಗೆ ತರುವ ಸವಲತ್ತುಗಳು ನಿಜವಾದ ವರದಾನವನ್ನಾಗಿ ಮಾಡುತ್ತದೆ. ಆದ್ದರಿಂದ ಕ್ರಿಸ್ತನ ಪುಣ್ಯವನ್ನು ಲೋಕವು ತಮ್ಮದಾಗಿಸಿಕೊಂಡ ತಕ್ಷಣ ಆತನು ತಾನು ಕೊಂಡುಕೊಂಡ ಆಸ್ತಿಯ ಜವಾದ್ದಾರಿಯನ್ನು ತಕ್ಷಣವೇ ವಹಿಸಿಕೊಳ್ಳುತ್ತಾನೆ. ನಂತರ ಆತನು ತನ್ನ ಮಹತ್ತಾದ ಶಕ್ತಿಯನ್ನು ಹೊಂದಿಕೊಂಡು ಆಳ್ವಿಕೆ ನಡೆಸುತ್ತಾನೆ. ನಂತರ ಆತನು ತನ್ನ ಬಲಿಯ ಪುಣ್ಯವನ್ನು ಯಾರಿಗಾಗಿ ಪಡೆದುಕೊಳ್ಳುತ್ತಾನೋ ಅವರಿಗೆ ಆತನು ಬಹುಕಾಲದಿಂದ ವಾಗ್ದಾನ ಮಾಡಲಾದ ಮರುಸ್ಥಾಪನೆಯ ಆಶೀರ್ವಾದಗಳನ್ನು ನೀಡಲು ಸಿದ್ಧನಾಗಿರುತ್ತಾನೆ.

ಪ್ರವಾದಿಯಾದ ದಾವೀದನ ಮೂಲಕ ಯೆಹೋವ ದೇವರು ತನ್ನ ಮಗನಿಗೆ, "ನೀನು ಕೇಳಿಕೊಂಡರೆ ನಾನು ಅನ್ಯಜನಗಳನ್ನೆಲ್ಲಾ[ಅನ್ಯಜನಾಂಗಗಳು, ದೇಶಗಳು, ಜನರು] ನಿನಗೆ ಅಧೀನ ಮಾಡುವೆನು; ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನು ನಿನಗೆ ಸ್ವಾಸ್ತ್ಯವಾಗಿ ಕೊಡುವೆನು." ಎಂದು ಹೇಳಿದನು. (ಕೀರ್ತನೆಗಳು 2 : 8). ಇದು ಬಾಗಿಲಲ್ಲಿದೆ (ಹತ್ತಿರವಿದೆ) ಎಂದು ನಾವು ನಂಬುತ್ತೇವೆ. ಇಡೀ ಲೋಕದಿಂದ ರತ್ನವರ್ಗದ (Jewel Class) ಸಭೆಯನ್ನು ಕರ್ತನು ಸ್ವಾಧೀನಪಡಿಸಿಕೊಳ್ಳಲಿದ್ದಾನೆ. ನಂತರ ಆತನು ನೀಡುವ ಆಶೀರ್ವಾದಗಳೆಂದರೆ ಆದಾಮನ ಸಂತತಿಗೆ ಮನುಷ್ಯನ ಮರುಸ್ಥಾಪನೆ ಮತ್ತು ಮನುಷ್ಯರ ಮನೆಯಾದ ಇಡೀ ಭೂಮಿಯನ್ನು ಏದೆನ್ ತೋಟದ ಭವ್ಯತೆಗೆ ತರುವುದಾಗಿದೆ. ಈ ಕೆಲಸವನ್ನು ತನ್ನ ಶರೀರವಾದ ಮದಲಗಿತ್ತಿಯೊಂದಿಗೆ ಹಂಚಿಕೊಳ್ಳುವನು.

ಈ ಧರ್ಮಶಾಸ್ತ್ರದ ದೃಷ್ಟಿಕೋನದಿಂದ, ಯೇಸು ನೀಡುವ ಈಡುಬಲಿಯು ಪ್ರಗತಿಪರ ವಿಷಯವಾಗಿದೆ (Progressive matter), ಮತ್ತು ಅದು ಇನ್ನೂ ಪೂರ್ಣಗೊಂಡಿಲ್ಲ. ಆತನು ಮನುಷ್ಯನಾದಾಗ(ಮೂವತ್ತನೆ ವಯಸ್ಸಿನಲ್ಲಿ) ಅದನ್ನು ನೀಡಲು ಪ್ರಾರಂಭಿಸಿದನು; ಆತನು ಲೌಕಿಕ (ಭೂಮಿಯ) ಸೇವೆಯ ಮೂರುವರೆ ವರ್ಷಗಳಲ್ಲಿ ಈಡುಬಲಿ ಕೊಡುತ್ತಾ ಪ್ರಗತಿ ಸಾಧಿಸಿದನು; ಆತನು ಕಲ್ವಾರಿಯಲ್ಲಿ ಈಡುಬಲಿ ಕೊಡುವುದನ್ನು ಮುಗಿಸಿದನು. ಅಂದಿನಿಂದ ಆತನು ಸಭೆಯ ಪರವಾಗಿ ತನಗೆ ಹಕ್ಕು ಇದದ್ದನ್ನು ಹೊರಿಸುವುದರ (ವಿಧಿಸುವುದರ) ಮೂಲಕ ಅದನ್ನು ಉಪಯೋಗಿಸುತ್ತಿದ್ದಾನೆ. ಇಡೀ ಲೋಕದ ಪಾಪಗಳನ್ನು ನಿವಾರಣೆ ಮಾಡಲು ಆತನ ಬಲಿಯ ಈ ಎಲ್ಲಾ ಪುಣ್ಯವನ್ನು (ಅರ್ಹತೆ) (MERIT) ಅವನು ಹೊಂದಿರುತ್ತಾನೆ – ಒಬ್ಬ ವ್ಯಕ್ತಿಯನ್ನು ಬಿಟ್ಟುಬಿಡುವುದಿಲ್ಲ. ಸಾವಿರ ವರ್ಷಗಳಲ್ಲಿ ಆತನು ತನ್ನ ಮರಣದಿಂದ ಪಡೆದುಕೊಂಡದ್ದನ್ನು ಮತ್ತು ಹೊಸ ಒಡಂಬಡಿಕೆಯನ್ನು ಮುದ್ರೆ ಮಾಡುವ ಮೂಲಕ ಅವರಿಗೆ ಅನ್ವಯಿಸುವಂತೆ ಮಾಡುವನು. ಸಭೆ ಪೂರ್ಣಗೊಂಡ ತಕ್ಷಣ ಸಭೆಯು ತೆರೆಯ ಆ ಕಡೆಯನ್ನು ದಾಟಿದ ತಕ್ಷಣ ಆ ಹೊಸ ಒಡಂಬಡಿಕೆಯನ್ನು ಮುದ್ರೆ ಮಾಡಲಾಗುತ್ತದೆ.

# ಆತ್ಮೀಕ ಸ್ವಭಾವ ಮತ್ತು ಮನುಷ್ಯ ಸ್ವಭಾವ ಒಂದೇ ಅಲ್ಲ
## SPIRITUAL AND HUMAN LIFE NOT THE SAME

ಕ್ರೈಸ್ತ ಜನರ ದೃಷ್ಟಿಕೋನಗಳು ಬಹಳ ಗೊಂದಲಮಯವಾಗಿ ಕಾಣುತ್ತದೆ. ಯೇಸು ಈ ಲೋಕಕ್ಕೆ ಬರುವ ಮೊದಲು ಆತ್ಮೀಕ ಜೀವಿಯಾಗಿದ್ದನು ಮತ್ತು ಮನುಷ್ಯನಾಗುವ ಸಮಯದಲ್ಲಿ ಆತನು ಸ್ವಭಾವದಲ್ಲಿ ಒಂದು ರೀತಿಯ ಬದಲಾವಣೆಯ ಅನುಭವ ಪಡೆದನು ಎಂದು ಅವರು ಒಪ್ಪಿಕೊಳ್ಳುತ್ತಾರೆ. ಆದರೆ ಬಹಳ ಅಸಮಂಜಸವಾಗಿ ಅವರು ತಪ್ಪಾಗಿ ಮತ್ತು ಸತ್ಯವೇದ ಆಧಾರವಿಲ್ಲದ ರೀತಿಯಲ್ಲಿ, ಮನುಷ್ಯನಾದ ನಂತರ, ಆತನು ಶಾಶ್ವತವಾಗಿ ಮನುಷ್ಯನಾಗಿರಬೇಕು – "ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿರಬೇಕು ಎಂದು ತರ್ಕಿಸುತ್ತಾರೆ. ಲೋಗೋಸ್ "ಮಾಂಸವಾಗಿ (ದೇಹವಾಗಿ) ಮಾಡಲ್ಪಟ್ಟನು", "ತನ್ನನ್ನು ತಗ್ಗಿಸಿಕೊಂಡನು", ಶಾಶ್ವತವಾಗಿ ಅಲ್ಲ, ಆದರೆ ಕೇವಲ "ಮರಣವನ್ನು ಅನುಭವಿಸುವುದಕೋಸ್ಕರ,...ಆತನು... ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಬೇಕಾಗಿತ್ತು" ಎಂದು ನಾವು ನೆನಪಿನಲ್ಲಿಡಬೇಕು – ಇಬ್ರಿಯ 2:9.

ಸ್ವಭಾವಗಳಲ್ಲಿ ವ್ಯತ್ಯಾಸಗಳಿವೆ ಎಂದು ಸತ್ಯವೇದವು ಸೂಚಿಸುತ್ತದೆ. ಸಂತ ಪೌಲನು ತಿಳಿಸುವಂತೆ, ಮನುಷ್ಯನ ಶರೀರ ಬೇರೆ, ಪಶುಗಳ ಶರೀರ ಬೇರೆ, ಪಕ್ಷಿಗಳ ಶರೀರ ಬೇರೆ, ಮೀನುಗಳದು ಬೇರೆ. ಹೇಗೆ ಲೌಕಿಕ ತಲದಲ್ಲಿ ಪಶುಗಳು, ಪಕ್ಷಿಗಳು, ಮೀನುಗಳು ಮತ್ತು ಮನುಷ್ಯರು ಇರುವಂತೆಯೇ ಆತ್ಮೀಕ ತಲದಲ್ಲಿ(spiritual plane)ಪರಲೋಕದಲ್ಲಿ ದೇವದೂತರು, ಕೆರೂಬಿಗಳು ಮತ್ತು ಸೆರಾಫಿಮ್ ಗಳು ಇದ್ದಾರೆ. (1 ಕೊರಿಂಥ 15 : 39-41) . ನಮ್ಮ ಕರ್ತನು ತಂದೆಯೊಂದಿಗೆ ತನಗಿದ್ದ ಮಹಿಮೆಯನ್ನು ಬಿಟ್ಟು ಬಂದನೆಂದು ಸ್ಪಷ್ಟವಾಗಿ ಹೇಳಿದನು. ಆತನು ತನ್ನ ಶಿಷ್ಯರಿಗೆ, "ಮನುಷ್ಯ ಕುಮಾರನು ತಾನು ಮೊದಲು ಇದ್ದಲ್ಲಿಗೆ ಏರಿಹೋಗುವದನ್ನು ನೀವು ನೋಡಿದರೆ ಏನನ್ನುವಿರಿ?" ಎಂದು ಹೇಳಿದನು – ಯೋಹಾನನು 6: 62.

"ಅವನು ಮೊದಲು ಎಲ್ಲಿದ್ದನು" ಎಂಬ ಪದದ ಭಾವನೆಯು ಮೊದಲು ಆತನ ಸ್ವಭಾವ, ಸ್ಥಿತಿಯಲ್ಲಿದ್ದ ಭಿನ್ನತೆಯನ್ನು ಸೂಚಿಸುತ್ತದೆ. ಯೇಸು ಈ ಲೋಕದಲ್ಲಿ ಹಲವು ಬಾರಿ ಬಂದಿದ್ದನು, ಆದರೆ ಹಿಂದೆಂದೂ ಮಾಂಸ ಶರೀರದಲ್ಲಿರಲಿಲ್ಲ. (ಶರೀರಧಾರಿಯಾಗಿರಲಿಲ್ಲ). ಯೇಸು ಬಹುಶಃ ಏದೆನ್ ತೋಟದಲ್ಲಿ ಆದಾಮನೊಂದಿಗೆ ದೇವರ ಪ್ರತಿನಿಧಿಯಾಗಿದ್ದನು. ನಿಶ್ಚಯವಾಗಿ ತಂದೆಯ ಪ್ರತಿನಿಧಿಯಾಗಿ ಮೋಶೆಗೆ ಧರ್ಮಶಾಸ್ತ್ರ(ನ್ಯಾಯಪ್ರಮಾಣ)ವನ್ನು ನೀಡಿದವನು ಆತನೇ. ಮತ್ತು ಖಂಡಿತವಾಗಿಯೂ ಕರ್ತನಾದ ಯೇಸು ಮತ್ತು ಇಬ್ಬರು ದೇವದೂತರು ಸೊದೋಮಿಗೆ ಇಳಿದು ಹೋಗುವಾಗ ಅಬ್ರಹಾಮನೊಂದಿಗೆ ಮಾತುಕತೆ ನಡಿಸಿದನು. ಪ್ರಾಸಂಗಿಕವಾಗಿ ಅವರು ಮನುಷ್ಯರಂತೆ ಕಾಣಿಸಿಕೊಂಡರು, ಮನುಷ್ಯರಂತೆ ತಿನ್ನುತ್ತಿದ್ದರು, ಮನುಷ್ಯರಂತೆ ಮಾತನಾಡುತ್ತಿದ್ದರು ಎಂದು ಅಬ್ರಹಾಮನು ನೆನಪಿಸಿಕೊಂಡನು, ಆದರೆ ನಂತರವೇ ಅವರು ದೇವದೂತರೆಂದು ತಿಳಿದುಕೊಂಡನು. ನಮ್ಮ ಕರ್ತನು ಮಾಂಸಧಾರಿಯಾದಾಗ, ಆತನು ಭೂಮಿಯ ಮೇಲೆ ಇದ್ದದ್ದು ಮೊದಲ ಬಾರಿಯಾಗಿರಲಿಲ್ಲ. ಆತನು ಹಿಂದೆಯೂ ಭೇಟಿಯಾದಾಗ, ಆತನು ಆತ್ಮೀಕ ಜೀವಿಯಾಗಿದ್ದನು, ಆತನು ತಂದೆಯ ಪ್ರತಿನಿಧಿಯಾಗಿ ಮನುಷ್ಯರೊಂದಿಗೆ ಮಾತುಕತೆ ನಡಿಸುವಾಗ ಅನುಕೂಲಕ್ಕಾಗಿ (ತಾತ್ಕಾಲಿಕವಾಗಿ) ಮಾಂಸಧಾರಿಯಂತೆ (ಮನುಷ್ಯನಂತೆ) ಕಾಣಿಸಿಕೊಂಡನು.

ಮಾಂಸಿಕ ಶರೀರದಲ್ಲಿ ಕಾಣಿಸಿಕೊಳ್ಳುವ ಈ ಶಕ್ತಿಯನ್ನು ಬೇರೆ ದೇವದೂತರು ಬಳಸಿದ್ದಾರೆಂದು ನಾವು ನೋಡುತ್ತೇವೆ. ಉದಾಹರಣೆಗೆ, ನಮ್ಮ ಕರ್ತನು ಪರಲೋಕಕ್ಕೆ ಏರಿ ಹೋದ ಸಮಯದಲ್ಲಿ ದೇವದೂತರು, "ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" ಎಂದು ಹೇಳಿದರು. ಬಿದ್ದು ಹೋದ

ದೇವದೂತರು ಮನುಷ್ಯರ ದೇಹಗಳಲ್ಲಿ ಕಾಣಿಸಿಕೊಳ್ಳುವ ಶಕ್ತಿಯನ್ನು ಹೊಂದಿದ್ದರು ಎಂದು ನಾವು ನೆನಪಿಸಿಕೊಳ್ಳುತ್ತೇವೆ. ಸತ್ಯವೇದವು ಸೂಚಿಸುವಂತೆ ಅವರು ಮನುಷ್ಯರಾಗಲು, ಭೂಮಿಯ ನೆಲೆಯಲ್ಲಿ, ಮತ್ತು ಮನುಷ್ಯ ಸ್ವಭಾವದಲ್ಲಿ ಇಂದ್ರಿಯ (ಶರೀರದ ಇಚ್ಛೆಯನ್ನು ನೆರವೇರಿಸುವ) ಕಾರಣಗಳಿಗಾಗಿ ಭೂಮಿಯಲ್ಲಿ ಬದುಕಲು ಬಯಸಿದ್ದರು. ಹೀಗೆ ಅವರು ತಮ್ಮ ಸ್ವಂತ ವಾಸಸ್ಥಾನವನ್ನು ತ್ಯಜಿಸಿ, ಮನುಷ್ಯರಂತೆ ಬದುಕಿ ಒಂದು ಹೊಸ ಜನಾಂಗ(ಸಂತತಿ)ವನ್ನು ಹುಟ್ಟು ಹಾಕಲು ಪ್ರಯತ್ನಿಸಿದರು.

## ಬಹಳ ತಪ್ಪಾಗಿ ತಿಳಿದುಕೊಂಡಿರುವ ವಿಷಯ
### A MUCH MISUNDERSTOOD SUBJECT

ಯೇಸು ತನ್ನ ಮೊದಲನೆಯ ಬರುವಿಕೆಯ ಸಮಯದಲ್ಲಿ ಕೇವಲ ಮನುಷ್ಯನಾಗಿ ಕಾಣಿಸಿಕೊಂಡು, ಆ ಸಮಯದಲ್ಲಿ ನಿಜವಾಗಿಯೂ ಆತ್ಮೀಕ ಜೀವಿಯಾಗಿದ್ದು ಶರೀರದಲ್ಲಿ ಮುಸುಕು ಹಾಕಿದ್ದರೆ--"ಅವತಾರ"-- ಹೊಂದಿದ್ದರೆ, ಆತನು ವಿಮೋಚಕನಾಗಿರಲು ಸಾಧ್ಯವಿಲ್ಲ. ಧರ್ಮಶಾಸ್ತ್ರವು (ಸತ್ಯವೇದವು) ಯೇಸುವನ್ನು ಒಬ್ಬ ಮನುಷ್ಯ ಎಂದು ಹೇಳುತ್ತದೆ, "ಇದಲ್ಲದೆ ಆ ವಾಕ್ಯವಾಗಿರುವಾತನು ಶರೀರಧಾರಿಯಾಗಿ ನಮ್ಮ ಮಧ್ಯದಲ್ಲಿ ವಾಸಮಾಡಿದನು." (KJV) (ಯೋಹಾನ 1 : 14)--ಆತನು ಮನುಷ್ಯನಂತೆ ನಟಿಸಲಿಲ್ಲ. ಮನುಷ್ಯನ ವಿಮೋಚಕನಾಗಬೇಕಾದರೆ ಆತನು ಮನುಷ್ಯನಾಗುವುದು ಅವಶ್ಯವಾಗಿತ್ತು, ಮನುಷ್ಯನಂತೆ ನಟಿಸುವುದು ಅಲ್ಲ. ಆತನು ನಿಜವಾಗಿಯೂ ಮನುಷ್ಯನಾಗಿರಬೇಕು; ಇಲ್ಲದಿದ್ದರೆ ಆತನು ಆದಾಮನಿಗೆ ಈಡುಬಲಿಯಾಗಿರಲು ಸಾಧ್ಯವಿಲ್ಲ; ಏಕೆಂದರೆ ದೈವಿಕ ಪ್ರಮಾಣವು ಸಮವಾಗಿದೆ – "ಜೀವಕ್ಕೆ ಜೀವ, ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಕೈಗೆ ಕೈ, ಕಾಲಿಗೆ ಕಾಲು" ಎಂದು ಹೇಳುತ್ತದೆ. – ಧರ್ಮೋಪದೇಶಕಾಂಡ 19:21

"ಈಡುಬಲಿ" (ಗ್ರೀಕ್ ಭಾಷೆಯಲ್ಲಿ "ಆಂಟಿಲುಟ್ರಾನ್") ಎಂಬ ಪದವು ಸರಿಸಮಾನವಾದ ಬೆಲೆಯನ್ನು ಸೂಚಿಸುತ್ತದೆ. ಆದ್ದರಿಂದ ಯೇಸು ನಿಜವಾಗಿಯೂ ಪರಲೋಕದ ಮಹಿಮೆಯನ್ನು ತೊರೆದನು – ಅದನ್ನು ಬಿಡುವಂತೆ ನಟಿಸಲಿಲ್ಲ. ಶ್ರೀಮಂತನಾಗಿದ್ದವನು ನಮಗಾಗಿ ಬಡವನಾದನು, ಆದ್ದರಿಂದ ಆತನು ಕಾಣಿಸಿಕೊಂಡಂತೆಯೇ ನಿಜವಾಗಿಯೂ ಅವನು – ಮನುಷ್ಯನಾಗಿದ್ದನು. ಯೋರ್ದಾನ್ನಲ್ಲಿ ತನ್ನನ್ನು ತಾನು ಅರ್ಪಿಸಿದಾಗ ಆತನು ಪರಿಪೂರ್ಣ ಮನುಷ್ಯನಾಗಿದ್ದನು. - ಆದಾಮನಿಗೆ ಸರಿಸಮಾನ ಬೆಲೆಯಾಗಬಹುದಾದ ಏಕೈಕ ವ್ಯಕ್ತಿ. ನಮ್ಮ ಕರ್ತನು ತಂದೆಗೆ "ಬಾಧೆಪಟ್ಟು ಮರಣ ಹೊಂದುವದಕ್ಕಾಗಿ ನನಗೆ ದೇಹವನ್ನು ಸಿದ್ಧಮಾಡಿಕೊಟ್ಟಿ" ಎಂದು ಹೇಳುತ್ತಿರುವುದನ್ನು ಸತ್ಯವೇದವು ಸೂಚಿಸುತ್ತದೆ. (ಇಬ್ರಿಯ 10:5). ನಮ್ಮಲ್ಲಿ ಅನೇಕರು ಕಡೆಗಣಿಸುವ ನಿಜಾಂಶವೇನೆಂದರೆ, ಈ (ಕ್ರಿಸ್ತನ) ದೇಹವು ದೈವಿಕ ಉದ್ದೇಶಕ್ಕಾಗಿ - ಮರಣದ ಬಾಧೆಗಳಿಗಾಗಿ ಸಿದ್ಧವಾಗಿದೆ, ಮತ್ತು ಅನೇಕರು ಯೋಚಿಸುವಂತೆ ಎಲ್ಲಾ ಪವಿತ್ರ ದೂತರ ಮುಂದೆ ಶಾಶ್ವತ ಅವಮಾನದ ಸ್ಥಿತಿಯಲ್ಲಿ ಕರ್ತನಾದ ಯೇಸುವನ್ನು ಇರಿಸಲು ಅಲ್ಲ, ಹಳೆಯ ಸ್ತೋತ್ರಗೀತೆಯಲ್ಲಿ ವ್ಯಕ್ತಪಡಿಸಿದಂತೆ,

"ಅವನು ಐದು ರಕ್ತಸ್ರಾವದ ಗಾಯಗಳನ್ನು ಹೊಂದಿದ್ದಾನೆ,
ಅದನ್ನು ಕಲ್ವಾರಿಯಲ್ಲಿ ಸ್ವೀಕರಿಸಲ್ಪಟ್ಟನು."

ನಮ್ಮ ಕರ್ತನು ತನ್ನ ಸುತ್ತಮುತ್ತಲಿನ ಪರಿಸರಕ್ಕೆ ಹೊಂದಿಕೆಯಾಗದ ದೇಹ ಮತ್ತು ಶರೀರ ಸ್ವಭಾವದ ಅನಾನುಕೂಲಗಳ ಕಾರಣಕ್ಕಾಗಿ ಪರಲೋಕಕ್ಕೆ ಹೋಗುತ್ತಿಲ್ಲ. ಆತನು ಈಗಾಗಲೇ ಬಲಿಯ ಕೆಲಸವನ್ನು ಪೂರ್ಣಗೊಳಿಸಿದ್ದಾನೆ ಮತ್ತು ಆತನ ಬಲಿಯ ಪುಣ್ಯ(ಅರ್ಹತೆಯು) ದೇವರ ಕೈಯಲ್ಲಿದೆ. ಹದಿನೆಂಟು (ಈಗ ಹತ್ತೊಂಬತ್ತು) ಶತಮಾನಗಳಿಗಿಂತಲೂ ಹಿಂದೆ ಮಾಡಿದ ಬಲಿಯನ್ನು ದೇವರು ಸ್ವೀಕರಿಸಿದ್ದಾನೆ; ಮತ್ತು ನ್ಯಾಯಾಧಿಪತಿಯ ಪುಸ್ತಕಗಳಲ್ಲಿ ನಮ್ಮ ವಿಮೋಚಕನು ಪರಿಪೂರ್ಣ ಮನುಷ್ಯನಾಗಿ ಅರ್ಹನಾಗಿದ್ದ ಭೂಮಿಯ ಜೀವನ – ಹಕ್ಕುಗಳಿಗೆ ಬಾಧ್ಯನಾಗಿದ್ದಾನೆ.

ದೇವರು ತಂದೆಯಾದ ಆದಾಮನಿಗೆ ಮನುಷ್ಯ ಜೀವನ ಮತ್ತು ಮನುಷ್ಯ ಜೀವನದ – ಹಕ್ಕುಗಳನ್ನು ನೀಡಿದಾಗ, ಅವನು ತಕ್ಷಣವೇ ಭೂಮಿಯ ಮಹಾನ್ ರಾಜನಾದನು. ಮತ್ತು ಯೇಸು ಸ್ವಾಭಾವಿಕ ಮನುಷ್ಯನಾದಾಗ ಆತನು ಸ್ವಾಭಾವಿಕವಾಗಿ ರಾಜನಾದನು (ಆಳ್ವಿಕೆಗಾರನಾದನು.) ಈ ಭೂಮಿಯು ಆತನಿಗೆ ಸೇರಿತ್ತು (ಆತನ ಸ್ವತ್ತಾಗಿತ್ತು); ಮತ್ತು ಪರಿಪೂರ್ಣ ಮನುಷ್ಯನಿಗೆ ಭೂಮಿಯ ಮೇಲೆ ಮತ್ತು ಅದರ ಎಲ್ಲಾ ಪೂರ್ಣತೆಯ ಮೇಲೆ ಹಕ್ಕು ಇರುತ್ತಿತ್ತು. ಈ ಹಕ್ಕಗಳನ್ನು ಉಳಿಸಿಕೊಳ್ಳುವ ಬದಲು ಮತ್ತು ಭವ್ಯವಾದ ಭೂಮಿಯ ಸರ್ವಾಧಿಕಾರಿಯಾಗುವ ಬದಲು, ಯೇಸು ಈ ಎಲ್ಲಾ ಭೂಮಿಯ-ಹಕ್ಕುಗಳನ್ನು ಬಿಟ್ಟುಕೊಟ್ಟನು ಮತ್ತು ಇದನ್ನು ವಿಧೇಯತೆಯ ಫಲವಾಗಿ ಪಡೆದನು - ಇದು ಬಲಿ ಸಲ್ಲಿಸಿದಕ್ಕಾಗಿ ಸಿಕ್ಕಿದ ಪ್ರತಿಫಲವಲ್ಲ, ಆದರೆ ಇದು ವಿಧೇಯತೆಗೆ ಸಿಕ್ಕ ಫಲವಾಗಿದೆ. ಆತನು ಇನ್ನೂ ಈ ಮನುಷ್ಯ ಜೀವನದ – ಹಕ್ಕುಗಳನ್ನು ಹೊಂದಿದ್ದಾನೆ ಮತ್ತು ಲೋಕದ ಮನುಕುಲಕ್ಕೆ ನೀಡಲಿದ್ದಾನೆ, ಇದಕ್ಕೆ ಆತನ ಷರುತ್ತು ಏನೆಂದರೆ – ಅವರು ದೇವರೊಂದಿಗೆ ಸಾಮರಸ್ಯವಾಗಿರಬೇಕು ಮತ್ತು ಅವರು ವಿಧೇಯತೆಯ ಒಡಂಬಡಿಕೆಯನ್ನು ಪ್ರವೇಶಿಸಬೇಕು. ತನ್ನ ಸ್ವಂತ ರಕ್ತದಿಂದ ಯೇಸು ಅವರನ್ನು ಏದೆನ್ನಲ್ಲಿ ಕಳೆದು ಹೋದ ಎಲ್ಲವನ್ನೂ ಮತ್ತು ಕಲ್ವಾರಿಯಲ್ಲಿ ವಿಮೋಚಿಸಿದ ಎಲ್ಲವನ್ನೂ ಅಂದರೆ ಪೂರ್ಣ ಮರು ಸ್ಥಾಪನೆಯನ್ನು ಪಡೆದುಕೊಳ್ಳಲು ಅರ್ಹರನ್ನಾಗಿ ಮಾಡುತ್ತಾನೆ.

ನಮ್ಮ ಕರ್ತನು ಪುನರುತ್ಥಾನದ ನಂತರ ಶರೀರದಲ್ಲಿ ಕಾಣಿಸಿಕೊಂಡದ್ದು, ಅನೇಕ ಶತಮಾಗಳ ಹಿಂದೆ ಆತನು ಮತ್ತು ದೇವದೂತರು ಕಾಣಿಸಿಕೊಂಡದಕ್ಕೆ ಹೋಲುತ್ತದೆ, ಹಾಗೆಂದು ಆತನು ಇನ್ನೂ ಮನುಷ್ಯನಾಗಿದ್ದಾನೆ ಎನ್ನುವುದನ್ನು ಸೂಚಿಸುವುದಿಲ್ಲ. ಬಾಗಿಲು ಮುಚ್ಚಲ್ಪಟ್ಟಿರುವಾಗ ಆತನು ಒಬ್ಬ ಮನುಷ್ಯನಾಗಿ ಎಂದಿಗೂ ಕೋಣೆಗೆ ಹೋಗಲಿಲ್ಲ; ಆದರೆ ಆತ್ಮೀಕ ಜೀವಿಯಾಗಿ ಆತನು ಬಾಗಿಲು ಮುಚ್ಚಲ್ಪಟ್ಟಿದ್ದರೂ ಪ್ರವೇಶಿಸಬಹುದು. ಆತ್ಮೀಕ ಜೀವಿಯಾಗಿ ಆತನು ಕಾಣಿಸಿಕೊಳ್ಳಬಹುದು(Materialize) ಮತ್ತು ನಂತರ ಅವರ ಕಣ್ಣಿಗೆ ಕಣ್ಮರೆಯಾಗಬಹುದು (Dematerialization). ಈ ರೀತಿಯಾಗಿ ಕಾಣಿಸಿಕೊಳ್ಳುವದು, ಕಣ್ಮರೆಯಾವುದು ಶರೀರಕ್ಕೆ ಅನ್ವಯಿಸುವುದು ಮಾತ್ರವಲ್ಲದೆ, ತಾನು ಧರಿಸಿಕೊಂಡಿರುವ ಬಟ್ಟೆಗೂ ಅನ್ವಯಿಸುತ್ತದೆ. ಒಮ್ಮೆ ಆತನು ದಾರಿಹೋಕನಾಗಿ, ಮತ್ತು ಒಮ್ಮೆ ತೋಟಗಾರನಾಗಿ ಕಾಣಿಸಿಕೊಂಡನು, ನಂತರ ಆತನು ಮೇಲಿನ ಕೋಣೆಯಲ್ಲಿ (Upper room) ತನ್ನ ಹಿಂದಿನ ಮನುಷ್ಯ ಸ್ವಭಾವದಂತೆ ಕಾಣಿಸಿಕೊಂಡನು, ಆಗ ಬಾಗಿಲುಗಳು ಮುಚ್ಚಿದ್ದವು. ಈ ವಿವಿಧ ಸಮಯಗಳಲ್ಲಿ ಆತನು ವಿಭಿನ್ನ ಉಡುಪುಗಳಲ್ಲಿ ಕಾಣಿಸಿಕೊಂಡನು, ಪ್ರತಿ ಬಾರಿಯೂ ಸಂದರ್ಭಕ್ಕೆ ಸೂಕ್ತವಾಗಿ ಧರಿಸಿದ್ದನು. ಒಂದು ಶೈಲಿಯ ಒಟ್ಟೆಗಳನ್ನು ಬೇರೆ ಸಮಯದಲ್ಲಿ ಇನ್ನೊಂದರಂತೆ ಮತ್ತು ಒಂದು ರೀತಿಯ ದೇಹವನ್ನು ಬೇರೆ ಸಮಯದಲ್ಲಿ ಇನ್ನೊಂದರಂತೆ ಸೃಷ್ಟಿಸುವುದು ಆತನಿಗೆ ಅಷ್ಟೇ ಸುಲಭವಾಗಿತ್ತು. ಈ ವಿಷಯದಲ್ಲಿ ಅನೇಕ ಕ್ರೈಸ್ತ ಜನರು ಹೊಂದಿರುವ ತಪ್ಪುಕಲ್ಪನೆಗಳು ಎಲ್ಲಿಂದ ಬಂದಿವೆ ಎಂದು ಹೇಳುವುದು ಕಷ್ಟ. ತಪ್ಪನ್ನು ಖಂಡಿಸುವಾಗ ನಾವು ತುಂಬಾ ದಯೆ ಮತ್ತು ಸಹಾನುಭೂತಿಯುಳ್ಳವರಾಗಿರಬೇಕು ಮತ್ತು ಒಮ್ಮೆ ನಾವೂ ಸಹ ತಪ್ಪುಗಳನ್ನು ಹೊಂದಿದ್ದೆವು ಮತ್ತು ಬೇರೆಯವರಂತೆ ಆ ವಿಚಾರಗಳಲ್ಲಿ ದೃಢವಾಗಿದ್ದೆವು ಎಂಬುದನ್ನು ನೆನಪಿನಲ್ಲಿಡಬೇಕು.

## ನಮ್ಮ ಕರ್ತನು ಇನ್ನು ಮುಂದೆ ಎಂದಿಗೂ ಮನುಷ್ಯನಲ್ಲ.
### OUR LORD NO LONGER HUMAN

ನಮ್ಮ ಕರ್ತನಾದ ಯೇಸು ಶರೀರಸಂಬಂಧದಲ್ಲಿ ಕೊಲ್ಲಲ್ಪಟ್ಟನು, ಆತ್ಮ ಸಂಬಂಧದಲ್ಲಿ ತಿರಿಗಿ ಬದುಕುವವನಾದನು, ಅಥವಾ ಆತ್ಮೀಕ ಜೀವಿಯಾಗಿ ಬದುಕುವವನಾದನು; ಅಂದಿನಿಂದ ಆತನು ಸದಾ ಆತ್ಮೀಕ ಜೀವಿಯಾಗಿದ್ದಾನೆ. ಈ ಆತ್ಮೀಕ ಜೀವಿಯನ್ನು ತಾರ್ಸದ ಸೌಲನು ದಮಸ್ಕಕ್ಕೆ ಹೋಗುವ ದಾರಿಯಲ್ಲಿ ನೋಡಿದನು. ಅವನು ಕಂಡದ್ದು ಮಹಿಮೆಯುಳ್ಳ ಪ್ರಕಾಶಮಾನದಾಗಿತ್ತು ಎಂದು ಅವನು ನಮಗೆ ಹೇಳುತ್ತಾನೆ. ಹಾಗೆ ಪ್ರಕಾಶಮಾನವಾಗಿ ಹೊಳೆಯುತ್ತಿದ್ದದ್ದು ಯೇಸುವಿನ ಶರೀರವಲ್ಲ.

ಅಪೋಸ್ತಲನು ಯೇಸುವಿನ ನಿಜವಾದ ವ್ಯಕ್ತಿತ್ವದಲ್ಲಿ ಒಂದು ಮಿನುಗು ನೋಟವನ್ನು(Glimpse) ನೋಡಿದನೆಂದು ಹೇಳುತ್ತಾನೆ – "ಕಟ್ಟಕಡೆಗೆ ದಿನ ತುಂಬದೆ ಹುಟ್ಟಿದವನಂತಿರುವ ನನಗೂ ಕಾಣಿಸಿಕೊಂಡನು." (1 ಕೊರಿಂಥ 15 : 8); ಅಂದರೆ ಸಮಯಕ್ಕಿಂತ ಮೊದಲು ಜನಿಸಿದ ಸಭೆಯನ್ನು, ಪುನರುತ್ಥಾನದ ಜನನವನ್ನು ಸೂಚಿಸುತ್ತಾನೆ.

ನಾವು ಆತ್ಮದಿಂದ ಭ್ರೂಣಾಂಕುರಗೊಂಡಿದ್ದೇವೆ (Begotten of the spirit) ಮತ್ತು ಜನನವು (ಹುಟ್ಟುವುದು) ಮೊದಲ ಪುನರುತ್ಥಾನದಲ್ಲಿ ಉಂಟಾಗುತ್ತದೆ. ಯೇಸುವಿನ ಬಗ್ಗೆ ಹೇಳಿದಂತೆ, ಆತನು ಸತ್ತವರೊಳಗಿಂದ ಮೊದಲು ಹುಟ್ಟಿದವನು; ಹಾಗೆಯೇ ಸಭೆಯು ಅಂದರೆ ನಾವು ಆತ್ಮೀಕ ಸ್ಥಿತಿಗಳಲ್ಲಿ ಹುಟ್ಟುತ್ತೇವೆ. ಆಗ "ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು." (1 ಯೋಹಾನ 3 : 2,3). ಆಗ ನಾವು ಮಾಂಸಿಕ ಶರೀರದಲ್ಲಿ ಇರುವುದಿಲ್ಲ, ಮತ್ತು ನಮ್ಮ ಮಹಿಮೆ ಹೊಂದಿದ ಕರ್ತನನ್ನು ನೋಡುವಾಗ ನಮ್ಮ ಕಣ್ಣುಗಳಿಗೆ ನೋವಾಗುವುದಿಲ್ಲ! ನಾವು ಕರ್ತನನ್ನು ಆತನು ಇರುವಂತೆಯೇ ನೋಡುತ್ತೇವೆ! ನಾವು ಆತನೊಂದಿಗೆ ಸದಾ ಇರುತ್ತೇವೆ! ಅಪೋಸ್ತಲನು ವಿವರಿಸುವಂತೆ ಇದಕ್ಕೂ ಮೊದಲು (ನಾವು ದೈವಿಕ ಸ್ವಭಾವದಲ್ಲಿ) "ಬದಲಾಗುತ್ತೇವೆ", ಏಕೆಂದರೆ "ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು."

---

**R5341**

# ರಕ್ತವು ಪ್ರಾಣಾಧಾರವಾಗಿದೆ

## (THE LIFE IS IN THE BLOOD)

ಪ್ರತಿ ದೇಹಿಗೂ ರಕ್ತವೇ ಪ್ರಾಣಾಧಾರ ಎಂದು ಧರ್ಮಶಾಸ್ತ್ರವು ಹೇಳುತ್ತದೆ (ಯಾಜಕಕಾಂಡ 17 : 11). ಈ ಹೇಳಿಕೆಗೆ ಅನುಗುಣವಾಗಿ, ಯೆಹೂದ್ಯರು ಯಾವಾಗಲೂ ರಕ್ತವನ್ನು ತಿನ್ನುವುದನ್ನು ತಡೆಯಬೇಕೆಂದು ಆಜ್ಞಾಪಿಸಲಾಗಿತ್ತು. ಪ್ರಾಣಿಗಳ ಮಾಂಸವನ್ನು ತಿನ್ನಲು ಅನುಮತಿಸುವ ಮೊದಲು ಅವುಗಳ ರಕ್ತವನ್ನು ಕೆಳಗೆ ಸುರಿಸಬೇಕಾಗಿತ್ತು. ಅವರೊಂದಿಗೆ ವಾಸಿಸುವ ಯಾವುದೇ ಅಪರಿಚಿತರು ರಕ್ತವನ್ನು ತಿನ್ನುವಂತಿರಲಿಲ್ಲ. (ಯಾಜಕಕಾಂಡ 17 : 10-14). ಈ ರೀತಿಯಾಗಿ ದೇವರು, ಜೀವವು ಬಹಳ ಪವಿತ್ರವಾದ ವಿಷಯ ಎಂದು ಹೇಳುವಂತೆ ತೋರುತ್ತದೆ. ದೇವರು ಮನುಷ್ಯನಿಗೆ ನೀಡಿದ ಈ ಜೀವ ತತ್ವವು ರಕ್ತದಲ್ಲಿ ವಾಸಿಸುತ್ತದೆ ಎಂದು ತೋರುತ್ತದೆ. ರಕ್ತವು ರಕ್ತಪರಿಚಲನೆಯ ಅಂಗಗಳ ಮೂಲಕ ಹಾದು ಹೋಗುವವರೆಗೆ, ಜೀವವಿರುತ್ತದೆ; ಆದರೆ ರಕ್ತ ಚೆಲ್ಲಿದಾಗ, ಆ ಜೀವಿಯು ಸಾಯುತ್ತದೆ.

ನಮ್ಮ ಕರ್ತನು ತನ್ನ ಲೌಕಿಕ (ಭೂಮಿಯ) ಜೀವನವನ್ನು ಅರ್ಪಿಸಿದಾಗ, ಆತನು ಅದನ್ನು ತನಗಾಗಿ ಬಳಸಿಕೊಳ್ಳುವ ಅರ್ಥದಲ್ಲಿ ಆ ಭೂಮಿಯ ಜೀವನದ ಹಕ್ಕನ್ನು ಉಳಿಸಿಕೊಂಡಿಲ್ಲ. "ಬಹು ಬೆಲೆಯುಳ್ಳ ಒಂದು ಮುತ್ತು" (ಮತ್ತಾಯ 13: 45, 46) ಗಳಿಸುವ ಎಲ್ಲರೂ ತಮ್ಮಲ್ಲಿರುವ ಎಲ್ಲವನ್ನೂ; ಅಂದರೆ ಅವರು ಲೌಕಿಕ ಜೀವನವನ್ನು ಅಥವಾ ಸವಲತ್ತುಗಳನ್ನು ಅನುಭವಿಸುವ ಎಲ್ಲವನ್ನೂ ಮಾರಬೇಕು ಎಂದು ಕರ್ತನು ಸಾಮ್ಯದಲ್ಲಿ ನಮಗೆ ಹೇಳುತ್ತಾನೆ. ನಮ್ಮ ಕರ್ತನು ಪರಿಪೂರ್ಣ ಭೂಮಿಯ ಜೀವನವನ್ನು ಹೊಂದಿದ್ದನು. ಆತನು ಆ ಜೀವನವನ್ನು ತ್ಯಜಿಸಿದನು. "ಆತನು ತನ್ನ ಪ್ರಾಣವನ್ನು ಮರಣದವರೆಗೆ ಹೊಯ್ದುಬಿಟ್ಟನು." (ಯೆಶಾಯ 53 :12) ಯಾವ ಆಧಾರದ ಮೇಲೆ? ಆತನು ನಮ್ಮ ಮುಂದೆ ಇಟ್ಟಿರುವ ಅದೇ ಆಧಾರದ ಮೇಲೆ; ನಾವು ಜೀವಿಸಬೇಕಾದರೆ ನಾವು ಸಾಯಲೇ ಬೇಕು; ನಾವು ಆಳ್ವಿಕೆ ಮಾಡಬೇಕಾದರೆ ನಾವು ಬಾಧೆಪಡಬೇಕು; ನಾವು ಆತನೊಂದಿಗೆ ಸಾಯಲೇಬೇಕು. (2 ತಿಮೊಥೆ 2 :11,12). ಆದ್ದರಿಂದ ಆತನ ಹೆಜ್ಜೆಯ ಜಾಡನ್ನು ಹಿಂಬಾಲಿಸುವ ನಾವು ಆತನು ಮಾಡಿದಂತೆಯೇ ಮಾಡಬೇಕು.

ನಾವು ಆತನ ಶಿಷ್ಯರಾಗಿ, ನಮ್ಮ ಸಹೋದರರಿಗಾಗಿ ನಮ್ಮ ಜೀವವನ್ನು ಅರ್ಪಿಸಿದರೆ, ಯೇಸು ಮಾಡಿದ್ದನ್ನೇ ನಾವು ಮಾಡುತ್ತಿದ್ದೇವೆ ಎಂದರ್ಥ. ಇದೆಲ್ಲವನ್ನು ಲೋಕಕ್ಕಾಗಿ ಅನ್ವಯಿಬೇಕು. ಆತನು ಆ ಲೌಕಿಕ (ಭೂಮಿಯ) ಜೀವನವನ್ನು ತೆಗೆದುಕೊಂಡನು, ಅದನ್ನು ಉಳಿಸಿಕೊಳ್ಳಲು ಅಲ್ಲ, ಅದಕ್ಕೆ ಬದಲಾಗಿ ಅಂತಿಮವಾಗಿ ಎಲ್ಲಾ ಮನುಕುಲಕ್ಕೆ ನೀಡುವುದಕ್ಕಾಗಿ ಆ ಲೌಕಿಕ ಜೀವನವನ್ನು ತೆಗೆದುಕೊಂಡನು. ಮನುಷ್ಯ ಜೀವನದ ಹಕ್ಕು ಇನ್ನೂ ಆತನ ನಿಯಂತ್ರಣದಲ್ಲಿದೆ. ಮಹಾನ್ ಮಧ್ಯಸ್ಥನಾಗಿ, ತಾನು ಸುರಿಸಿದ ಜೀವವನ್ನು ಲೋಕದ ಮನುಕುಲಕ್ಕೆ ನೀಡುವವನು ಆತನೇ.

ಈಗ ಆತನು ತನ್ನ ಪುಣ್ಯವನ್ನು(Merit) ಸಭೆಗೆ ಹೊರಿಸುತ್ತಾನೆ (ವಿಧಿಸುತ್ತಾನೆ), ಇದರಿಂದ ನಾವು ಆತನೊಂದಿಗೆ ಆತನ ಬಾಧೆಗಳಲ್ಲಿ ಮತ್ತು ಆತನು ಹೊಂದಿದ ಮಹಿಮೆಯನ್ನು ರಾಜ್ಯದಲ್ಲಿ, ಆತ್ಮೀಕ ಸಮತಲದಲ್ಲಿ ಹಂಚಿಕೊಳ್ಳಬಹುದು. ಆದ್ದರಿಂದ ಈ ಪಾತ್ರೆಯು ಲೌಕಿಕ ಜೀವನವನ್ನು ಸಂಪೂರ್ಣವಾಗಿ ತ್ಯಜಿಸುವುದನ್ನು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಹಕ್ಕುಗಳನ್ನು ತ್ಯಜಿಸುವುದನ್ನು ಸೂಚಿಸುತ್ತದೆ. ನಮ್ಮ ಕರ್ತನು ಲೌಕಿಕ (ಭೂಮಿಯ ) ಜೀವನವನ್ನು ಕಳೆದುಕೊಳ್ಳಲಿಲ್ಲ, ಆದರೆ ಅದನ್ನು ಒಪ್ಪಿಸಿ ಕೊಟ್ಟನು. (ಯೋಹಾನ 10 : 17, 18) ಅದನ್ನು ಕೊಡುವ ಉದ್ದೇಶವು ಮನುಕುಲವು ಅದನ್ನು ಪಡೆಯುವಂತೆ ವೈಯಕ್ತಿಕವಾಗಿ, ಶಾಶ್ವತವಾಗಿ ತ್ಯಾಗ ಮಾಡುವದಾಗಿತ್ತು. ಇದನ್ನು ಆತನು ಇನ್ನೂ ಸಾಧಿಸಲಿಲ್ಲ, ಆದರೆ ಆತನ ಜೀವವನ್ನು ಅವರಿಗೆ ಹಸ್ತಾಂತರಿಸುವ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಆತನು ತನ್ನ ಜೀವವನ್ನು (ಪ್ರಾಣವನ್ನು) ತ್ಯಜಿಸಿದನು.

## ಕಳೆದುಕೊಳ್ಳದ ಭೂಮಿಯ (ಲೌಕಿಕ) ಜೀವನದ – ಹಕ್ಕು
### UNFORFEITED EARTHLY LIFE-RIGHT

ನಮ್ಮ ಕರ್ತನು ಈ ಲೋಕದ ವಿಮೋಚನೆಯ ವಿಚಾರದಲ್ಲಿ ದೈವಿಕ ಚಿತ್ತವನ್ನು ನೆರವೇರಿಸಲು ಕೈಕೊಂಡನು, ಮತ್ತು ಆತನು ಸಾಧಿಸುವಲ್ಲಿ ಮುಂದುವರೆದನು, ಆದರೆ ಇನ್ನೂ ಆ ಉದ್ದೇಶವನ್ನು ಪೂರ್ಣಗೊಳಿಸಿಲ್ಲ. ಆತನು ತನ್ನ ಜೀವವನ್ನು (ಪ್ರಾಣವನ್ನು) ಅರ್ಪಿಸಿದನು, ಆದರೆ ಅದನ್ನು ಕಳೆದುಕೊಳ್ಳಲಿಲ್ಲ. ಆತನು ಸತ್ತವರರೊಳಗಿಂದ ಎಬ್ಬಿಸಲ್ಪಟ್ಟಾಗಲೂ ಆತನಿಗೆ ಆ ಲೌಕಿಕ ಜೀವನದ ಹಕ್ಕಿತ್ತು, ಆದರೂ ಆತನು ಅದನ್ನು ತನಗಾಗಿ ಉಪಯೋಗಿಸಬಾರದು, ಆದರೆ ಆ ಜೀವವನ್ನು ಸ್ವೀಕರಿಸಲು ಸಿದ್ದವಾಗಿರುವ ಎಲ್ಲಾ ಲೋಕದ ಜನರಿಗೆ ಆತನು ನೀಡುತ್ತಾನೆ, ಆತನ ಸಾವಿರ ವರ್ಷಗಳ ಆಳ್ವಿಕೆಯ ಕೊನೆಯಲ್ಲಿ ಅದನ್ನು ನಿಯೋಜಿಸುತ್ತಾನೆ, ಆ ಸಮಯದಲ್ಲಿ ಆತನ ಸಭೆಯು ಅವನೊಂದಿಗೆ ಆಳ್ವಿಕೆ ನಡೆಸುತ್ತಾರೆ.

ಆದ್ದರಿಂದ ಆತನ ಪ್ರಾಣವನ್ನು ಆತನಿಂದ ತೆಗೆಯಲಾಗಲಿಲ್ಲ; ಏಕೆಂದರೆ ಆತನು ಅವಿಧೇಯನಾದರೆ ಮಾತ್ರ ಆತನ ಜೀವವನ್ನು (ಪ್ರಾಣವನ್ನು) ಆತನಿಂದ ತೆಗೆಯಲು ಸಾಧ್ಯವಾಗುತ್ತದೆ. (ಯಾಜಕಕಾಂಡ 18 : 5; ಯೆಹೆಜ್ಕೇಲನು 20 : 11; ಲೂಕ 10 : 28; ರೋಮಾಪುರದವರಿಗೆ 10 : 5). ಆತನು ಸ್ವಯಂ ಪ್ರೇರಣೆಯಿಂದ ದೈವಿಕ ಚಿತ್ತಕ್ಕನುಸಾರವಾಗಿ ಅದನ್ನು ನೀಡಿದನು. ಆತನು ಅದನ್ನು ನ್ಯಾಯಾಧೀಶನ ಕೈಯಲ್ಲಿ ಒಂದು ಆಸ್ತಿಯಾಗಿರಲು ಕೊಟ್ಟನು, ತಕ್ಕ ಸಮಯ ಬರುವಾಗ ಆತನು ಆ ಆಸ್ತಿಯನ್ನು ಮನುಕುಲಕ್ಕಾಗಿ ಉಪಯೋಗಿಸುವಂತೆ ಅದನ್ನು ತಂದೆಯ ಕೈಯಲ್ಲಿ ಕೊಟ್ಟನು. –ಯೋಹಾನ 6 : 51

ಆರಂಭದಲ್ಲಿ ನಮ್ಮ ಕರ್ತನ ಮನುಷ್ಯ ಜೀವವು ಶಾಶ್ವತವಾಗಿ ಕೊಡಲ್ಪಡಬೇಕು, ಆತನು ಅದನ್ನು ಮತ್ತೆ ತೆಗೆದುಕೊಳ್ಳಬಾರದು ಎಂಬುದು ದೈವಿಕ ಉದ್ದೇಶವಾಗಿತ್ತು. ಆತನು ಯೋರ್ದಾನ್ನಲ್ಲಿ ತನ್ನ ಜೀವನವನ್ನು ಪ್ರತಿಷ್ಠೆ ಪಡಿಸಿದನು ಮತ್ತು ಕಲ್ವಾರಿಯಲ್ಲಿ ತನ್ನ ಬಲಿಯನ್ನು ಮುಗಿಸಿದನು. ಸುವಾರ್ತೆ ಯುಗದಾದ್ಯಂತ ಆತನು ತನ್ನ ರಹಸ್ಯ ಶರೀರವನ್ನು ಬಲಿ ಸಲ್ಲಿಸುತ್ತಿದ್ದಾನೆ. ಈ ಎಲ್ಲಾ

ದೇಹದ ಅಂಗಗಳ ಬಲಿಯನ್ನು ಆತನು ಮುಗಿಸಿದ ತಕ್ಷಣ, ಮಹಾನ್ ಮಹಾಯಾಜಕನಿಗೆ ಸೇರಿದ ಅವರ ಜೀವದ – ಹಕ್ಕನ್ನು ಹೊಸ ಒಡಂಬಡಿಕೆಯ ಮುದ್ರೆಯ ಮೂಲಕ ಕೊಂಡುಕೊಂಡು (ಖರೀದಿಸಿ), ವಿಮೋಚನೆಗಾಗಿ ಉಪಯೋಗಿಸಲಾಗುತ್ತದೆ. ಇದರ ನಂತರ ತಕ್ಷಣವೇ ಆತನ (ಕಣ್ಣಿಗೆ ಕಾಣುವ) ರಾಜ್ಯವು ಸ್ಥಾಪನೆಯಾಗುತ್ತದೆ. ಆತನ ಪುಣ್ಯವನ್ನು (Merit), ಆತನ ಜೀವದ-ಹಕ್ಕನ್ನು ಇಡೀ ಸಭೆಯು ತೆರೆಯ ಆ ಕಡೆ ದಾಟುವವರೆಗು ಅದನ್ನು ಲೋಕಕ್ಕೆ ಅನ್ವಯ ಮಾಡುವುದಿಲ್ಲ, ಇದನ್ನು ಕುರಿತು ಹೋತದ (ಆಡಿನ) ರಕ್ತವನ್ನು ಕೃಪಾಸನದ ಮೇಲೆ ಚಿಮುಕಿಸುವುದರಿಂದ ಸಂಕೇತಿಸಲಾಗಿದೆ. ನಮ್ಮ ಕರ್ತನ ರಕ್ತ ಮತ್ತು ಆತನ ದೇಹವಾಗಿರುವ ಸಭೆಯ ರಕ್ತ ಎರಡೂ ಸೇರಿ ಒಂದೇ ರಕ್ತವಾಗಿ ಎಣಿಸಲ್ಪಡುತ್ತದೆ. ಅನೇಕ ಸದಸ್ಯರಿಗೆ ಆತನೊಬ್ಬನೇ ಯಾಜಕನಾಗಿದ್ದಾನೆ. ಇಡೀ ಲೋಕದ ಪಾಪಗಳಿಗಾಗಿ – ಎಲ್ಲರಿಗೋಸ್ಕರ ಇದೊಂದೇ ಪ್ರಾಯಶ್ಚಿತ್ತವಾಗಿದೆ (ನಿವಾರಣೆಯಾಗಿದೆ).- 1 ಯೋಹಾನ 2 : 2.

ರಕ್ತವು ಕ್ರಿಸ್ತನ ಮರಣವನ್ನು ಮಾತ್ರವಲ್ಲದೆ, ಆತನ ದೇಹದ ಎಲ್ಲಾ ಅಂಗಗಳ ಮರಣವನ್ನೂ ಪ್ರತಿನಿಧಿಸುತ್ತದೆ, ಅವರಿಗೆ ಆ ಪುಣ್ಯವನ್ನು ಹೊರಿಸಲಾಗಿದೆ (ವಿಧಿಸಲಾಗಿದೆ). ಇದನ್ನು ಅಪೋಸ್ತಲನು ಅದೇ ಸಂಬಂಧದಲ್ಲಿ ವ್ಯಕ್ತಪಡಿಸುತ್ತಾನೆ. ಆತನು ಹೀಗೆ ಹೇಳುತ್ತಾನೆ; "ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ." (1 ಕೊರಿಂಥ 10 : 16) ಅಂದರೆ ಆತನೊಂದಿಗೆ ಒಂದೇ ರೀತಿಯ ಐಕ್ಯ, ಪಾಲುಗಾರಿಕೆ ಎಂಬುದನ್ನು ಪಾತ್ರೆ ಮತ್ತು ರೊಟ್ಟಿಯಲ್ಲಿ ಸೂಚಿಸಲಾಗಿದೆ. ಈ ಎಲ್ಲಾ ವಿಷಯವು ಕ್ರಿಸ್ತನಲ್ಲಿ ಆರಂಭಗೊಂಡಿದೆ. ಆದರೆ ನಾವು ಸಭೆಯ ಸದಸ್ಯರಾಗಿ ಶರೀರದ ಬಲಿಯಲ್ಲಿ, ಕ್ರಿಸ್ತನ ಬಾಧೆಗಳಲ್ಲಿ ಭಾಗವಹಿಸುವುದರ ಮೂಲಕ ನಮ್ಮ ಸ್ವಂತ ವೈಯಕ್ತಿಕ ಪಾಲನ್ನು ಆಚರಿಸುತ್ತಿದ್ದೇವೆ.

-------------------------

**R4461(sel)**

## ನಮ್ಮ ಪಶ್ಚಿಮ ಸಮಾವೇಶ ಪ್ರವಾಸ

### OUR WESTERN CONVENTION TOUR

ದೈವಿಕ ಯೋಜನೆಗೆ ಅನುಗುಣವಾಗಿ ನಮ್ಮ ಕರ್ತನಾದ ಯೇಸು, ಧರ್ಮಶಾಸ್ತ್ರ ಒಡಂಬಡಿಕೆಗೆ ವಿಧೇಯನಾದ ದ್ದರಿಂದ , ಬಾಧ್ಯಸ್ಥನಾಗಿ ತನಗೆ ಹಕ್ಕಿದ್ದ ಲೌಕಿಕ ಜೀವನ ಮತ್ತು ಸಾಮ್ರಾಜ್ಯವನ್ನು ಉಳಿಸಿಕೊಳ್ಳುವ ಬದಲು, ಅದನ್ನು ತ್ಯಾಗ ಮಾಡಿದನು- - ಅದನ್ನು ತನ್ನ ಮರಣದಲ್ಲಿ ಬಲಿಯಾಗಿ ಅರ್ಪಿಸಿದನು. ಇದು ತಂದೆಯ ಪ್ರಸ್ತಾಪವಾಗಿತ್ತು- ಕ್ರಿಸ್ತನು ತನ್ನ ಭೂಮಿಯ ಜೀವನ ಮತ್ತು ಹಕ್ಕುಗಳನ್ನು ಸಂಪೂರ್ಣವಾಗಿ ತ್ಯಾಗ ಮಾಡುವ ಮಟ್ಟಿಗೆ ತನ್ನ ನಂಬಿಕೆ ಮತ್ತು ವಿಧೇಯತೆಯನ್ನು ತೋರಿಸಿದರೆ, ತಂದೆಯು ಅವನನ್ನು ಸತ್ತವರಿಂದ ಮತ್ತೆ ಲೌಕಿಕ ಪರಿಸ್ಥಿತಿಗಳಿಗೆ ಅಲ್ಲ, ಆದರೆ ದೈವಿಕ ಶಕ್ತಿಯಿಂದ ಪರಲೋಕ ಪರಿಸ್ಥಿತಿಯಲ್ಲಿ (ಅಮರತ್ವದಲ್ಲಿ) ಎಬ್ಬಿಸುವವನು – "ಪರಲೋಕದೊಳಗೆ ಸಕಲ ರಾಜ್ಯತ್ವ ಅಧಿಕಾರ ಮಹತ್ವ ಪ್ರಭುತ್ವಾಧಿಗಳ ಮೇಲೆಯೂ" ಎಬ್ಬಿಸುವವನು. (ಎಫೆಸದವರಿಗೆ 1 : 21) ಹೀಗೆ ಕ್ರಿಸ್ತನು ಉನ್ನತಕ್ಕೆ ಏರಿಸಲ್ಪಟ್ಟ ನಂತರ ಆತನು ಬಲಿ ಸಲ್ಲಿಸಿದ ಭೂಮಿಯ ಹಕ್ಕುಗಳನ್ನು ಇನ್ನೂ ಹೊಂದಿರಬಹುದು ಎಂಬುದು ತಂದೆಯ ಪ್ರಸ್ತಾಪವಾಗಿದೆ – ಅವುಗಳನ್ನು ಆಸ್ತಿಯನ್ನಾಗಿ ಅಥವಾ ಬೆಲೆಯುಳ್ಳ ಸ್ವತ್ತಾಗಿ ಹೊಂದಿರಬಹುದು, ಅದನ್ನು ಕರ್ತನು ಆದಾಮ ಮತ್ತು ಆತನ ಸಂತತಿಗೆ ಆಶೀರ್ವಾದಕ್ಕಾಗಿ ನೀಡಬಹುದು, ಏಕೆಂದರೆ ಅವರು ಜೀವನ ಮತ್ತು ಭೂಮಿಯ ಹಕ್ಕುಗಳನ್ನು ಪಾಪಮಾಡಿ ಕಳೆದುಕೊಂಡಿದ್ದರು. ನಮ್ಮ ಪುನರುತ್ಥಾನಗೊಂಡ, ಮಹಿಮೆ ಹೊಂದಿದ ಕರ್ತನು ಪರಲೋಕಕ್ಕೆ ಏರಿ ಹೋದಾಗ, ಆದಾಮ ಮತ್ತು ಆತನ ಸಂತತಿಯ ಪ್ರತಿಯೊಬ್ಬ ಸದಸ್ಯರ ಮರುಸ್ಥಾಪನೆಯನ್ನು ತರಲು

ಆಶೀರ್ವಾದವನ್ನು ಹೊಂದಿದ್ದನು ಎಂದು ನಾವು ತೋರಿಸಿದ್ದೇವೆ, ಅಥವಾ ಈ ಪ್ರಯೋಜನವನ್ನು ಅನ್ವಯಿಸಲು ಅವನು ಆರಿಸಿಕೊಂಡಷ್ಟು ಜನರಿಗೆ ಕ್ರಿಸ್ತನ ಒಂದೇ ಬಲಿ ಎಲ್ಲರಿಗೂ ಸಾಕಾಗಿದೆ. ಯೇಸು ನೀಡಬೇಕಾದ ಅಶೀರ್ವಾದಗಳು ಯಾವುದೆಂದರೆ, ಅದು ಭೂಮಿಯ ಆಶೀರ್ವಾದಗಳು, ಭೂಮಿಯ ಜೀವನ, ಭೂಮಿಯ ಶಕ್ತಿ ಇತರೆ ಆಗಿದೆ. ಆದರೆ ಪರಲೋಕದ ವಿಷಯಗಳಲ್ಲ.

------------------------

**R4905**

## ನಮ್ಮ ಕರ್ತನ ಜೀವನ ಹಕ್ಕುಗಳ ಬಗ್ಗೆ ಪ್ರಶ್ನೆಗಳು.

## QUESTIONS ON OUR LORD'S LIFE-RIGHTS

### ತ್ಯಾಗ ಮಾಡದೆ ಇರುವ ಆತ್ಮೀಕ ಜೀವನ ಹಕ್ಕುಗಳು.

### SPIRIT LIFE-RIGHTS NOT SACRIFICED

**ಪ್ರಶ್ನೆ** – ನಮ್ಮ ಕರ್ತನು ಮನುಷ್ಯನಾಗುವ ಮೊದಲು ಆತ್ಮೀಕ ಜೀವಿಯಾಗಿದ್ದಾಗ ಯಾವ ಹಕ್ಕುಗಳನ್ನು ಹೊಂದಿದ್ದನು ಮತ್ತು ಅವನು ಮನುಷ್ಯನಾದಾಗ ಆ ಹಕ್ಕುಗಳು ಏನಾದವು?

**ಉತ್ತರ** – ನಮ್ಮ ಕರ್ತನು ಐಶ್ವರ್ಯವಂತನಾಗಿದ್ದನು ಮತ್ತು ನಮಗೋಸ್ಕರ ಬಡವನಾದನು. (2 ಕೊರಿಂಥ 8:9) ಇದನ್ನು ಪರಲೋಕದ ಹಕ್ಕುಗಳು ಮತ್ತು ಪರಿಪೂರ್ಣತೆಯನ್ನು ಈ ಭೂಮಿಯ ಹಕ್ಕುಗಳು ಮತ್ತು ಪರಿಪೂರ್ಣತೆಗಾಗಿ ಬದಲಾವಣೆ (Exchanging) ಮಾಡಿಕೊಂಡನು. ಈ ಬದಲಾವಣೆಯು ಒಂದು ಬಲಿ ಅಲ್ಲ (ಕಾಣಿಕೆ ಅಲ್ಲ); ಏಕೆಂದರೆ ಅದು ಮನುಷ್ಯನಾದ ಕ್ರಿಸ್ತ ಯೇಸುವೇ ಆ ಈಡುಬಲಿಯಾದನು. ಆತನು ಯಾವುದೇ ಮಾನವ ಪೂರ್ವ ಹಕ್ಕುಗಳನ್ನು (Pre-human rights) ತ್ಯಾಗ ಮಾಡಿದನು (ಬಲಿ ಸಲ್ಲಿಸಿದನು) ಎಂದು ಧರ್ಮಶಾಸ್ತ್ರಗಳಲ್ಲಿ (ಸತ್ಯವೇದದಲ್ಲಿ) ಯಾವುದೇ ಹೇಳಿಕೆಯಿಲ್ಲ. ಆದರೂ, "ತನ್ನ ಮುಂದೆ ಇಟ್ಟಿದ್ದ ಸಂತೋಷಕೋಸ್ಕರ" ಆತನು ಇವುಗಳನ್ನು ಬಿಟ್ಟುಬಿಟ್ಟನು (resign). – ಇಬ್ರಿಯ 12:2

ಮನುಷ್ಯನಿಗೆ ಅಗತ್ಯವಿರುವ ಹಕ್ಕುಗಳು ಯಾವುದೆಂದರೆ ಅದು ಮಾನವ ಹಕ್ಕುಗಳು, ಭೂಮಿಯ ಮೇಲಿನ ಹಕ್ಕುಗಳು; ಮತ್ತು ಯೇಸು ತನ್ನ ಭೂಮಿಯ ಜೀವನವನ್ನು ಬಲಿಯಾಗಿ ಸಲ್ಲಿಸುವುದರ ಮೂಲಕ ಆ ಹಕ್ಕುಗಳನ್ನು ಪುನಃ ಪಡೆದುಕೊಳ್ಳುತ್ತಾನೆ. ಒಬ್ಬ ಆತ್ಮೀಕ ಜೀವಿಯಾಗಿ ಆತನು ಆತ್ಮೀಕ ಜೀವಿಯ ಹಕ್ಕುಗಳನ್ನು ತ್ಯಾಗ ಮಾಡಲು ಸಾಧ್ಯವಿಲ್ಲ; ಏಕೆಂದರೆ ಮರಣ ದಂಡನೆಗೆ ಗುರಿಯಾದ ಯಾವುದೇ ಆತ್ಮೀಕ ಜೀವಿಗಳು ಇಲ್ಲ. ಯೇಸು ವಿಮೋಚನೆಗೊಳಿಸಬೇಕಾದದ್ದು ಮನುಷ್ಯನಾದ ಆದಾಮನನ್ನೇ. "ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು, ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು."- 1 ಕೊರಿಂಥ 15:21, 22.

### ಕಲ್ವಾರಿಯಲ್ಲಿ ಈಡು-ಬಲಿಯ ಬೆಲೆಯನ್ನು ಸಲ್ಲಿಸಲಾಗಿದೆ.

### RANSOM-PRICE FURNISHED AT CALVARY

**ಪ್ರಶ್ನೆ** – ನಮ್ಮ ಕರ್ತನು ಕಲ್ವಾರಿಯಲ್ಲಿ ಏನು ಸಾಧಿಸಿದನು?

**ಉತ್ತರ** – ನಮ್ಮ ಕರ್ತನ ಕಡೆಯಿಂದ ನೀಡಿದ ಈಡುಬಲಿಯು ನಾವು ತಿಳಿಸಿರುವಂತೆ ಮನುಕುಲವನ್ನು ವಿಮೋಚಿಸಲಿಲ್ಲ, ಆದರೆ ಅದು ಮನುಕುಲಕ್ಕೆ ಬಿಡುಗಡೆಯನ್ನು ಪರಿಣಾಮ ಬೀರುವ ಈಡು-ಬಲಿಯನ್ನು ಒದಗಿಸಿತು, ದೇವರು ತನ್ನ ತಕ್ಕ ಸಮಯದಲ್ಲಿ ಮತ್ತು ಕ್ರಮದಲ್ಲಿ ಒದಗಿಸುವನು;

"ಕ್ರಿಸ್ತನು ತನಗೆ ತಾನೇ ಆಂಟಿಲ್ಯೂಟ್ರಾನ್(ಸರಿಸಮವಾದ ಬೆಲೆ)ಯನ್ನು ಕೊಟ್ಟನು."--1 ತಿಮೊಥೆ 2: 5,6.

ನಮ್ಮ ಕರ್ತನ ಬಲಿ, ತನ್ನ ಸ್ವಇಚ್ಛೆಯಿಂದ ತನ್ನ ಜೀವನವನ್ನು ಮರಣಕ್ಕೆ ಒಪ್ಪಿಸಿದ್ದು, ದೈವಿಕ ದೃಷ್ಟಿಯಲ್ಲಿ ಪ್ರಶಂಸನೀಯವಾಗಿತ್ತು ಮತ್ತು ತಂದೆಯು ಆತನಿಗೆ ಹೊಸ ಜೀವವನ್ನು ಉನ್ನತ ತಲದಲ್ಲಿ (ಮಟ್ಟದಲ್ಲಿ) ನೀಡುವುದರ ಮೂಲಕ ಕ್ರಿಸ್ತನು ಪ್ರತಿಫಲವನ್ನು ಪಡೆದನು. ಆ ಹೊಸ ಜೀವವು ಆತನು ಯೊರ್ದನ್ ನಲ್ಲಿ ಭ್ರೂಣಾಂಕುರಗೊಳ್ಳುವುದರ (Begetting) ಮೂಲಕ ಆರಂಭವಾಗಿ, ಅದನ್ನು ಆತನ ಪುನರುತ್ಥಾನದಲ್ಲಿ ಪೂರ್ಣಗೊಳಿಸಿದನು. ಪಾಪ ಮಾಡಿ ಕಳೆದುಕೊಳ್ಳದೆ ಇರುವ ತನ್ನ ಭೂಮಿಯ ಜೀವನದ ಈ ಹಕ್ಕು ಇನ್ನೂ ನಮ್ಮ ಕರ್ತನಿಗೆ ಸೇರಿದೆ. ತನ್ನ ಸಂತತಿಯನ್ನು ಒಳಗೊಂಡ ಒಬ್ಬ ಮನುಷ್ಯನ (ಆದಾಮನ) ಪಾಪಕ್ಕೆ ಸರಿದೂಗಿಸುವಿಕೆಯಾಗಿ (ಸಮತೋಲನ ಅಥವಾ ಸರಿಸಮವಾದ) ಈ ಭೂಮಿಯ ಜೀವನ-ಹಕ್ಕನ್ನು ನ್ಯಾಯಾಧೀಶನ(ತಂದೆಯ) ಕೈಯಲ್ಲಿ ನೀಡಲು (ಯೇಸು) ಚಿತ್ತಗೊಂಡನು. ಆತನನ್ನು ಮಾಂಸ-ಆತ್ಮವಾಗಿ (Flesh -soul) ಕೊಲ್ಲಲಾಯಿತು. ಆತನಿಗೆ ಆತ್ಮೀಕ- ಆತ್ಮವಾಗಿ (Spirit-soul) ಪ್ರತಿಫಲ ನೀಡಲಾಯಿತು. ಆತನು ಮಾಂಸ- ಆತ್ಮದ(Flesh -soul) ಹಕ್ಕನ್ನು ಇನ್ನೂ ಹೊಂದಿದ್ದಾನೆ, ಅದನ್ನು ಆದಾಮ ಮತ್ತು ಆತನ ಸಂತತಿಗೆ ಹೊಸ ಒಡಂಬಡಿಕೆಯನ್ನು ಮುದ್ರೆ ಮಾಡುವ ಮೂಲಕ ಅದನ್ನು ಅವರಿಗೆ ಸೂಕ್ತವಾದ ಈಡುಬಲಿಯಾಗಿ ನೀಡುತ್ತಾನೆ.

## ಪುಣ್ಯ (ಅರ್ಹತೆ) ಮತ್ತು ಜೀವನ ಹಕ್ಕು

### THE MERIT AND THE LIFE-RIGHT

ಪ್ರಶ್ನೆ – ಲೋಕದ ಪಾಪಗಳಿಗಾಗಿ ಕ್ರಿಸ್ತನು ಹೊರಿಸುವ(ವಿಧಿಸುವ) ಪುಣ್ಯ (ಅರ್ಹತೆ/ Merit) ಮತ್ತು ಲೋಕದ ಪಾಪಗಳಿಗಾಗಿ ಕ್ರಿಸ್ತನು ಕೊಡುವ ಜೀವದ ಹಕ್ಕಿನ (life-right) ನಡುವೆ ನಾವು ವ್ಯತ್ಯಾಸವನ್ನು ಹೇಗೆ ಗುರುತಿಸಬಹುದು?

ಉತ್ತರ – ನಮ್ಮ ಕರ್ತನು ಮನುಷ್ಯನಾಗಿದ್ದಾಗ ಆತನಿಗೆ ಮಾನವ ತಲದಲ್ಲಿ (Plane N) ನೀತಿವಂತನಾಗಿದ್ದನು. ಈಗ (ದೈವಿಕ ಸ್ವಭಾವದಲ್ಲಿರುವದರಿಂದ) ಆತನಿಗೆ ಮನುಷ್ಯನಾಗಿದ್ದಾಗ ಇದ್ದ ನೀತಿವಂತಿಕೆ ಇಲ್ಲ. ತಂದೆಯ ದೃಷ್ಟಿಯಲ್ಲಿ, ನ್ಯಾಯಾಧೀಶನ ದೃಷ್ಟಿಯಲ್ಲಿ ಆ ನೀತಿವಂತಿಕೆಯ ಮನ್ನಣೆ (Credit) ಮಾತ್ರ ಯೇಸುವಿಗೆ ಇದೆ, ಇದು ಲೋಕಕ್ಕೆ ತಕ್ಕ ಸಮಯದಲ್ಲಿ ಈ ಪುಣ್ಯವನ್ನು ನೀಡಲಾಗುತ್ತದೆ, ಆದರೆ ಸುವಾರ್ತಾ ಯುಗದಲ್ಲಿ ಅದನ್ನು ಸಭೆಗೆ ಸಾಲವಾಗಿ ನೀಡಲಾಗುತ್ತದೆ.

ಯೇಸುವಿಗೆ ತಾನು ಸಾಯುವವರೆಗೂ ಮನುಷ್ಯ ಜೀವನ-ಹಕ್ಕಗಳು ಅವಶ್ಯವಿದೆ. ಸಾಯುವಾಗ ತಂದೆಯ ಏರ್ಪಾಡಿನ ಪ್ರಕಾರ, ಆತನು ಅವುಗಳನ್ನು ತಂದೆಗೆ ಒಪ್ಪಿಸಿದನು. ಆತನು, "ತಂದೆ ನನಗೆ ಕೊಟ್ಟಿರುವ ಪಾತ್ರೆಯಲ್ಲಿ ನಾನು ಕುಡಿಯಬಾರದೋ?" ಎಂದು ಹೇಳಿದನು. (ಯೋಹಾನ 18 : 11). ಒಬ್ಬ ಮನುಷ್ಯನಾಗಿದ್ದಾಗ ಆ ಜೀವನ- ಹಕ್ಕುಗಳು ಅವನದ್ದಾಗಿದ್ದವು ಮತ್ತು ಆತನಿಗೆ ಉಪಯೋಗವಾಗಿದ್ದವು; ಆದರೆ ಅವನಿಗೆ ಈಗ ಅವು ಅಗತ್ಯವಿಲ್ಲ; ಏಕೆಂದರೆ ಅವನಿಗೆ ಈಗ ಉತ್ತಮ ಹಕ್ಕುಗಳಿವೆ. ಆದರೆ ಅವನಿಗೆ ಮನುಷ್ಯ ಜೀವನದ ಹಕ್ಕಿದೆ, ಅದು ಆತನಿಗೆ ವೈಯಕ್ತಿಕವಾಗಿ ಅಗತ್ಯವಿಲ್ಲ-ಆದರೆ ಲೋಕದ ಮನುಕುಲಕ್ಕೆ ನೀಡಲು ಆತನಿಗೆ ಅದು ಅಗತ್ಯವಾಗಿರುತ್ತದೆ, ಇದರಿಂದ ಅವರು ಬಯಸಿದರೆ ಅವರು ನಿತ್ಯ ಜೀವವನ್ನು ಹೊಂದಬಹುದು.

ಕರ್ತನನ್ನು ಆತನ ಸ್ವಂತ ವ್ಯಕ್ತಿತ್ವದ ದೃಷ್ಟಿಕೋನದಿಂದ ನೋಡಬೇಕು. ಮೊದಲನೆಯದಾಗಿ ಆತನು ಆತ್ಮೀಕ ಜೀವಿಯಾಗಿದ್ದನು; ಎರಡನೆಯದಾಗಿ ಅವನನ್ನು ಮಾಂಸಿಕವಾಗಿ (ಶರೀರಧಾರಿಯಾಗಿ) –ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಗಿದ್ದನು; ಮೂರನೆಯದಾಗಿ, ಭೂಮಿಯ ಜೀವನವನ್ನು ಆತನಿಂದ ಕಸಿದುಕೊಳ್ಳಲು

ಅನುಮತಿಸಿದ್ದಕ್ಕಾಗಿ ದೇವರು ಅವನಿಗೆ ವೈಯಕ್ತಿಕವಾಗಿ ಉನ್ನತ ಸ್ಥಾನ ನೀಡಿದನು.–ಫಿಲಿಪ್ಪಿಯವರಿಗೆ 2:9.

ದೇವರು ಈ ಮಹಿಮೆಯುಳ್ಳ ವ್ಯಕ್ತಿಯ ಮೂಲಕ ಲೋಕದ ಮನುಕುಲಕ್ಕೆ ಕೆಲವು ಕೆಲಸಗಳನ್ನು ಮಾಡಲು ವ್ಯವಸ್ಥೆ ಮಾಡಿದ್ದಾನೆ. ಈ ಕೆಲಸಗಳನ್ನು ಮಾಡುವ ಶಕ್ತಿಯು ಅವನಿಗೆ ಇನ್ನೂ ಈ ಭೂಮಿಯ ಜೀವನದ ಹಕ್ಕಿದೆ ಎಂಬ ಅಂಶದಲ್ಲಿ ಅಡಗಿದೆ, ಅದು ಆತನಿಗೆ ಅಗತ್ಯವಿಲ್ಲ.ಯಾರೆಲ್ಲಾ ಸಾವಿರ ವರ್ಷದ ಯುಗದಲ್ಲಿ ಹೊಸ ಒಡಂಬಡಿಕೆಯ ನಿಯಮಗಳಿಗೆ ಹೊಂದಾಣಿಕೆಯಾಗುತ್ತಾರೋ, ಅವರಿಗೆ ಕ್ರಮೇಣವಾಗಿ ಅವನು ಅದನ್ನು ತನ್ನ ಕೈಯಲ್ಲಿ ಹಿಡಿದಿಟ್ಟುಕೊಳ್ಳುತ್ತಾನೆ. ತನ್ನ ಸದಸ್ಯರಾಗಲು( ಸಭೆಯ ಅಂಗವಾಗಲು) ಬಯಸುವವರಿಗೆ – ಅವರ ದೋಷಗಳನ್ನು ಮರೆಮಾಡಲು ಮತ್ತು ಅವರ ಬಲಿಗಳನ್ನು ತಂದೆಯು ಸ್ವೀಕರಿಸಲು – ಈಗ ಆ ಬೆಲೆಯ ಪಾಲನ್ನು ಆತನು ಅವರ ಮೇಲೆ ಹೊರಿಸುತ್ತಾನೆ (ವಿಧಿಸುತ್ತಾನೆ.)

ಕ್ರಿಸ್ತನ ಪುಣ್ಯವು(ಅರ್ಹತೆ/ Merit) ತಂದೆಯ ಚಿತ್ತವನ್ನು ನೆರವೇರಿಸುವುದರಲ್ಲಿತ್ತು. ಆ ಪುಣ್ಯದಿಂದಾಗಿ (ಅರ್ಹತೆ) ತಂದೆಯು ತೆರೆಯ ಆ ಕಡೆಯಲ್ಲಿ ಹೊಸ ಸ್ವಭಾವವನ್ನು ಪ್ರತಿಫಲವಾಗಿ ನೀಡಿದನು. ಮತ್ತು ಸಹಜವಾಗಿ ಆ ಪುಣ್ಯವು (ಅರ್ಹತೆಯು) ಇನ್ನೂ ಉಳಿದಿದೆ; ಮತ್ತು ಆತನು ಮನುಕುಲಕ್ಕಾಗಿ ಏನು ಮಾಡಿದರೂ, ದೇವರ ದೃಷ್ಟಿಯಲ್ಲಿ ಯಾವಾಗಲೂ ತನ್ನ ವೈಯಕ್ತಿಕ ಅರ್ಹತೆಯನ್ನು ಹೊಂದಿರುತ್ತಾನೆ. ಆದ್ದರಿಂದ ಅವನು ತನ್ನ ಪುಣ್ಯವನ್ನು(ಅರ್ಹತೆಯನ್ನು) ಬಿಟ್ಟುಕೊಡುತ್ತಾನೆ ಎಂದು ನಾವು ಭಾವಿಸಬಾರದು; ಹಾಗಿದಿದ್ದರೆ ಆತನು ಆ ಪುಣ್ಯವಿಲ್ಲದೆ (ಅರ್ಹತೆಯಿಲ್ಲದೆ) ಉಳಿಯುತ್ತಾನೆ. ಆದರೆ ಆತನು ಪ್ರತಿಫಲವನ್ನು ಪಡೆದ ನಂತರ, ಆತನಿಗೆ ಮನುಷ್ಯ ಜೀವನದ ಹಕ್ಕಿದೆ, ಅದು ದೇವರಿಂದ ಅಂಗೀಕರಿಸಲ್ಪಟ್ಟಿದೆ. ಮತ್ತು ಇದು ದೇವರ ದೃಷ್ಟಿಯಲ್ಲಿ ಪುಣ್ಯದ (ಅರ್ಹತೆಯ) ವಿಷಯವಾಗಿದೆ – ಆದಾಮ ಮತ್ತು ಅವನ ಮಕ್ಕಳಿಗೆ (ಸಂತತಿಗೆ) ವಿಮೋಚನೆಯ ಕ್ರಯ (ಬೆಲೆ) ಹಾಗೆ ಹೇಳಬೇಕೆಂದರೆ, ಆತನು ಕೊಂಡುಕೊಂಡ-ಬೆಲೆ. ಇದನ್ನು ಯೇಸು ಶೀಘ್ರದಲೇ ಲೋಕಕ್ಕೆ ಉಪಯೋಗಿಸುತ್ತಾನೆ ಮತ್ತು ಇದನ್ನು ಯೇಸು ಈಗ ನಮಗೆ ಹೊರಿಸುತ್ತಿದ್ದಾನೆ(ವಿಧಿಸುತ್ತಿದ್ದಾನೆ)(Now imputing to us).

## ಕ್ರಿಸ್ತನ ಪುಣ್ಯವನ್ನು (ಅರ್ಹತೆಯನ್ನು) ಹೊರಿಸುವುದು (ವಿಧಿಸುವುದು)

### THE IMPUTATION OF CHRIST'S MERIT

**ಪ್ರಶ್ನೆ** –"ಕ್ರಿಸ್ತನ ಪುಣ್ಯವನ್ನು (ಅರ್ಹತೆಯನ್ನು) ಹೊರಿಸುವುದು" ಎಂಬ ಹೇಳಿಕೆಯ ಅರ್ಥವೇನು?

**ಉತ್ತರ** - ಕ್ರಿಸ್ತನ ಪುಣ್ಯವನ್ನು (ಅರ್ಹತೆಯನ್ನು) ಹೊರಿಸುವುದರ (Imputed) ಬಗ್ಗೆ ಮಾತನಾಡುವಾಗ, ಆತನಿಗೆ ವೈಯಕ್ತಿಕ ಪುಣ್ಯ(ಅರ್ಹತೆ) ಇದೆ, ತನ್ನದೇ ಆದ ನೀತಿವಂತಿಕೆ ಇದೆ, ಅದನ್ನು ಎಂದಿಗೂ ಬಿಟ್ಟುಕೊಟ್ಟಿಲ್ಲ ಎಂಬುದನ್ನು ನಾವು ಸ್ಪಷ್ಟವಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆತನಿಗೆ ತನ್ನದೇ ಆದ ನೀತಿ ಬೇಕು. ಈ ಪದದ ಅರ್ಥದಲ್ಲಿ, ನೀತಿಯಲ್ಲಿ ಕೊರತೆಯಿಲ್ಲದೆ ಇರುವಾಗ ಮಾತ್ರ ಆತನು ತನ್ನ ನೀತಿಯನ್ನು ಕೊಡಲು ಸಾಧ್ಯ. ಆತನ ಜೀವನ ಹಕ್ಕಿನ ವಿಷಯದಲ್ಲೂ ಇದು ನಿಜವಾಗಿದೆ. ಆತನಿಗೆ ಬದುಕುವ (ಜೀವಿಸುವ) ಹಕ್ಕಿದೆ; ಆದರೆ ಆ ಜೀವದ ಹಕ್ಕನ್ನು ಆತನು ನಮ್ಮ ಮೇಲೆ ಹೊರಿಸುತ್ತಿಲ್ಲ; ಏಕೆಂದರೆ ಆತನಿಗೆ ಅದು ಸ್ವತಃ ಬೇಕು, ಆತನಿಗೆ ತನ್ನದೇ ಆದ ವೈಯಕ್ತಿಕ ಪುಣ್ಯ (Merit) ಬೇಕು.

ಹಾಗಾದರೆ ಯಾವ ಅರ್ಥದಲ್ಲಿ, ಆತನು ಸಾವಿರ ವರ್ಷದ ಯುಗದಲ್ಲಿ ಮನುಕುಲಕ್ಕೆ ಜೀವಿಸುವ ಹಕ್ಕನ್ನು ಮತ್ತು ಸುವಾರ್ತಾ ಯುಗದಲ್ಲಿ ಸಭೆಗೆ ಕ್ರಮವಾಗಿ ನೀತಿಯನ್ನು ನೀಡುತ್ತಾನೆ ಎಂದು ನಾವು ಹೇಳುತ್ತೇವೆ. ಈ ರೀತಿಯಾಗಿ ಆತನು ಮನುಷ್ಯ ಜೀವನ ಹಕ್ಕನ್ನು ನೀಡುತ್ತಾನೆ: ಆ ಪುಣ್ಯವು(ಅರ್ಹತೆಯು)

ಮನುಷ್ಯನಾದ ಕ್ರಿಸ್ತ ಯೇಸುವಾಗಿ ತಾನು ತೋರಿಸಿದ ವಿಧೇಯತೆಗಾಗಿ ಸಿಕ್ಕಿದ ಪ್ರತಿಫಲವಾಗಿದೆ ಅಥವಾ ಅದು ಹಕ್ಕು, ಮನುಷ್ಯ ಜೀವಿಯಾಗಿ ಜೀವಿಸುವ ಹಕ್ಕಾಗಿದೆ. ಆ ಹಕ್ಕನ್ನು ಧರ್ಮಶಾಸ್ತ್ರಕ್ಕೆ ವಿಧೇಯತೆ ತೋರಿಸಿದ್ದಕ್ಕಾಗಿ ಸಿಕ್ಕಿದ ಹಕ್ಕು.(ರೋಮಾಪುರ 10 : 5; ಗಲಾತ್ಯ 3 : 12). ಈಗ ಆತನು ಅತಿ ಉನ್ನತ್ತಕ್ಕೆ ಏರಿದ್ದಾನೆ, ದೈವಿಕ ಸ್ವಭಾವದಲ್ಲಿ ಪಾಲುಗೊಂಡಿದ್ದಾನೆ, ಮತ್ತು ಇನ್ನು ಮುಂದೆ ಮನುಷ್ಯ ಜೀವನದ ಹಕ್ಕು ಮತ್ತು ನೀತಿವಂತಿಕೆಯ ಹಕ್ಕು ಆತನಿಗೆ ಅಗತ್ಯವಿಲ್ಲ. ಆತನು ತನ್ನ ಪ್ರಸ್ತುತ (ಈಗಿನ) ಸ್ಥಿತಿಯಲ್ಲಿ ಸಾಕಷ್ಟು ತೃಪ್ತನಾಗಿದ್ದಾನೆ ಮತ್ತು ಸಂಪೂರ್ಣನಾಗಿದ್ದಾನೆ. ಆತನು ಲೋಕಕ್ಕೆ ಮನುಷ್ಯ ಜೀವನದ ಹಕ್ಕನ್ನು ಮತ್ತು ಆ ಹಕ್ಕಿನೊಂದಿಗೆ ಬರುವ ನೀತಿಯನ್ನು, ಲೌಕಿಕ ಬಲಿಯ ಪುಣ್ಯವನ್ನು (ಅರ್ಹತೆಯನ್ನು) ನೀಡಬೇಕಾಗಿದೆ. ಇದರಲ್ಲಿ ಪ್ರಸ್ತುತ( ಈಗಿನ) ಸಮಯದಲ್ಲಿ ಸಭೆಗೆ ಅವರ ಅಪೂರ್ಣತೆಗೆ ಸಾಕಾಗುವಷ್ಟು ಪುಣ್ಯವನ್ನು ಆತನು ಹೊರಿಸುತ್ತಾನೆ (Imputes). ನಾವು ಆತನಲ್ಲಿ ಪರಿಪೂರ್ಣರಾಗಿದ್ದೇವೆ, ಆದ್ದರಿಂದ ನಾವು ನಮ್ಮನ್ನು ಅರ್ಪಿಸಿಕೊಳ್ಳುವ ಅರ್ಪಣೆ ಆತನ ಮೂಲಕ ದೇವರಿಗೆ ಅಂಗೀಕಾರವಾದ ಬಲಿಯಾಗಿ ಮತ್ತು ಪರಿಶುದ್ಧವೆಂದು ಎಣಿಸಲ್ಪಡುತ್ತದೆ.

## ಹೊಸ ಒಡಂಬಡಿಕೆಯಲ್ಲಿ ಪ್ರತಿನಿಧಿಸಲ್ಪಟ್ಟ ಜೀವನ ಹಕ್ಕುಗಳು.

### LIFE-RIGHTS REPRESENTED IN NEW COVENANT

**ಪ್ರಶ್ನೆ** - ಸಾವಿರ ವರ್ಷದ ಯುಗದಲ್ಲಿ ಯೇಸು ಕಲ್ವಾರಿಯಲ್ಲಿ ನೀಡಿದ ಜೀವನ ಹಕ್ಕುಗಳು ಎಲ್ಲಿರುತ್ತದೆ?

**ಉತ್ತರ** – ನಾವು ಮಹಾನ್ ವಿಮೋಚಕನ ಜೀವದ ಹಕ್ಕು ಎಂದು ಮಾತನಾಡುವುದು, ಪ್ರಾಯಶ್ಚಿತ್ತದ ರಕ್ತದಿಂದ ನಿರೂಪಿಸಲ್ಪಟ್ಟಿದೆ ಎಂದು ನಾವು ಅರ್ಥಮಾಡಿಕೊಂಡಿದ್ದೇವೆ. ಛಾಯೆಯ ಪ್ರಕಾರ, ಈ ನಿಜರೂಪದ ಪ್ರಾಯಶ್ಚಿತ್ತ ದಿನದ ಕೊನೆಯಲ್ಲಿ, ಪ್ರಾಯಶ್ಚಿತ್ತ ಮಾಡುವ ರಕ್ತವನ್ನು ಇಡೀ ಮನುಕುಲದ ಪರವಾಗಿ ನ್ಯಾಯಾಧಿಪತಿಗೆ (ಅನ್ವಯಿಸಲಾಗುತ್ತದೆ) ಮತ್ತು ಅವರ ಪರವಾಗಿ ಸ್ವೀಕರಿಸಲಾಗುತ್ತದೆ- ಅಂದರೆ ಅಪೋಸ್ತಲನು ವ್ಯಕ್ತಪಡಿಸುವಂತೆ, "ಜನರ ಪಾಪಗಳನ್ನು ನಿವಾರಣೆ ಮಾಡುವದಕ್ಕಾಗಿ" ಆಗಿದೆ. (ಇಬ್ರಿಯ 2 : 17) ಜನರು ತಮ್ಮ ಮರಣ-ದಂಡನೆಯಿಂದ ಬಿಡುಗಡೆಯಾದ ತಕ್ಷಣ, ಅವರು ಆಶೀರ್ವಾದಗಳನ್ನು ಪಡೆಯಲು ಪ್ರಾರಂಭಿಸುವ ಸ್ಥಿತಿಯಲ್ಲಿರುತ್ತಾರೆ, ಆದರೆ ಅದಕ್ಕೆ ಮೊದಲು ಆಶೀರ್ವಾದಗಳನ್ನು ಪಡೆಯಲು ಸಾಧ್ಯವಿಲ್ಲ. ಮಹಾನ್ ಮಹಾಯಾಜಕನಂತೆ, ನಮ್ಮ ಕರ್ತನು ಸುವಾರ್ತಾ ಯುಗದ ಕೊನೆಯಲ್ಲಿ, ದೇವರು ಮತ್ತು ಶಾರೀರಿಕ (ಸ್ವಾಭಾವಿಕ) ಇಸ್ರಾಯೇಲ್ಯರಾದ ಅಬ್ರಹಾಮನ ಸಂತತಿಯ ನಡುವೆ ಪ್ರಾಯಶ್ಚಿತ್ತದ ರಕ್ತದಿಂದ ಹೊಸ ಒಡಂಬಡಿಕೆಯನ್ನು ಮುದ್ರೆ ಮಾಡಲು ಕೈಗೊಳ್ಳುತ್ತಾನೆ; ಮತ್ತು ಆತನು "ಅವನ ದೇಹವಾಗಿರುವ ಸಭೆ"ಯೊಂದಿಗೆ ಸೇರಿ ಆ ಒಡಂಬಡಿಕೆಯ ಮಧ್ಯಸ್ಥನಾಗಿ ನಿಲ್ಲಲು ಕೈಗೊಳ್ಳುತ್ತಾನೆ. ಆ (ಹೊಸ) ನ್ಯಾಯ ಪ್ರಮಾಣಕ್ಕೆ ಅನುಗುಣವಾಗಿ ನಡೆಯುವ ಎಲ್ಲರೂ ನಿತ್ಯ ಜೀವವನ್ನು ಹೊಂದುತ್ತಾರೆ. ಆ ಎಲ್ಲಾ ವರ್ಷಗಳಲ್ಲಿ ಮಧ್ಯಸ್ಥನು ಆ ಒಡಂಬಡಿಕೆಯ ನಿಬಂಧನೆಗಳನ್ನು ಮಾತ್ರ ಒದಗಿಸುತ್ತಾನೆ, ಅದು ಅವರಿಗೆ ಮರುಸ್ಥಾಪನೆಯ ಸವಲತ್ತುಗಳನ್ನು ಹೊಂದಿರುತ್ತದೆ ಎಂದು ಭರವಸೆ ನೀಡುತ್ತದೆ. ಅವರು ಆ ಅವಕಾಶಗಳನ್ನು ಉಪಯೋಗಿಸಿಕೊಂಡರೆ ಅವರು ನಿತ್ಯ ಜೀವವನ್ನು ಹೊಂದಿಕೊಳ್ಳುತ್ತಾರೆ.

ಆ ಸಮಯದಲ್ಲಿ ಮನುಷ್ಯ ಜೀವನದ ಹಕ್ಕು ನಮ್ಮ ವಿಮೋಚಕನಾದ ಕರ್ತನ ಕೈಯಿಂದ ಹಾದು ಹೋಗುತ್ತದೆ, ಮತ್ತು ಅಲ್ಲಿಂದ ಮುಂದೆ ಎಲ್ಲವನ್ನೂ ಒಡಂಬಡಿಕೆಯಲ್ಲಿಯೇ ಪ್ರತಿನಿಧಿಸಲಾಗುತ್ತದೆ, ಇದು ದೇವರು ಮನುಷ್ಯನಿಗೆ ಸಿಗಬೇಕೆಂದು ಘೋಷಿಸಿದ ಎಲ್ಲಾ ವಿಷಯಗಳನ್ನು ಖಾತರಿಪಡಿಸುತ್ತದೆ. ಮನುಕುಲದ ಕಲ್ಲಿನ ಹೃದಯವು ಹೋಗಿ ಮಾಂಸದ ಹೃದಯಕ್ಕೆ ಸ್ಥಾನವನ್ನು ನೀಡುತ್ತದೆ; ಈ ಒಡಂಬಡಿಕೆಯ ನಿಯಮಗಳಿಗೆ ಅನುಸಾರವಾಗಿ ಬದುಕುವ ಎಲ್ಲರಿಗೂ

ನಿತ್ಯಜೀವವಿರುತ್ತದೆ. ಸಾವಿರ ವರ್ಷದ ಯುಗದಲ್ಲಿ ಹೊಸ ಒಡಂಬಡಿಕೆಯು ನಮ್ಮ ಕರ್ತನು ನೀಡಿದ ಜೀವನ ಹಕ್ಕುಗಳನ್ನು ಪ್ರತಿನಿಧಿಸುತ್ತದೆ. ಯಾರೆಲ್ಲಾ ಆ (ಹೊಸ ಒಡಂಬಡಿಕೆಯ) ಪ್ರಮಾಣವನ್ನು ಪಾಲಿಸಲು ವಿಫಲರಾಗುತ್ತಾರೋ, ಅವರಿಗೆ ಶಿಕ್ಷೆಯನ್ನು ಕೊಡಲಾಗುತ್ತದೆ. ಈ ವ್ಯವಸ್ಥೆಯಿಂದ ಕ್ರಿಸ್ತನು, ಹೊಸ ಒಡಂಬಡಿಕೆಯ ಮಧ್ಯಸ್ಥನಾಗಿ, ಸಾವಿರ ವರ್ಷಗಳ ಕಾಲ ಆಶೀರ್ವಾದಗಳನ್ನು ನೀಡುತ್ತಾನೆ. ಈ ಸುವಾರ್ತಾ ಯುಗದಲ್ಲಿ ನಮ್ಮ ಕರ್ತನು ಜೀವಿಸುವ ಹಕ್ಕನ್ನು ತನ್ನ ಸ್ವಂತ ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತಾನೆ, ಈ ಮೂಲಕ ಲೋಕದ ಪಾಪಗಳಿಗಾಗಿ ನೀಡಿದ ಈಡುಬಲಿಯ ಬೆಲೆಯನ್ನು, ಲೋಕದ ವಿಮೋಚನೆಗಾಗಿ ಅದನ್ನು ನ್ಯಾಯಾಧೀಶನ (ತಂದೆಯ) ಕೈಗೆ ನೀಡುತ್ತಾನೆ. ಈ ಯುಗದ ಅಂತ್ಯದಲ್ಲಿ ಯೇಸು ಈ ಹಕ್ಕನ್ನು ಬಿಟ್ಟುಕೊಟ್ಟ ತಕ್ಷಣ, ನ್ಯಾಯಾಧೀಶನು (ತಂದೆಯು), ಮೇಲೆ ತೋರಿಸಿದಂತೆ, ಅದನ್ನು ಬಿಟ್ಟುಕೊಡುವಾಗ ಮನುಕುಲವು ಅದನ್ನು ಪಡೆದುಕೊಳ್ಳುತ್ತದೆ.

---

**R4587**

## ನಮ್ಮ ಈಸ್ಟರ್ ಪಾಠ

### OUR EASTER LESSON

ಯೇಸುವಿನ ಮರಣವು ಲೋಕವನ್ನು ವಿಮೋಚಿಸಲಿಲ್ಲ, ಆದರೆ (R5488 : ಪುಟ 108) ಅದನ್ನು ಲೋಕಕ್ಕೆ ಅನ್ವಯಿಸಿದಾಗ ಅದೊಂದು ಈಡುಬಲಿಯ ಮೌಲ್ಯವಾಗುವುದು. ನಮ್ಮ ರಕ್ಷಕನು ತನ್ನ ಜೀವವನ್ನು ಅರ್ಪಿಸಿದನು, ದೈವಿಕ ಸಲಹೆಗೆ ವಿಧೇಯತೆ ತೋರಿಸಿ ಅದನ್ನು ತಂದೆಗೆ ಒಪ್ಪಿಸಿದನು. ಅದಕ್ಕೆ ಪ್ರತಿಫಲವಾಗಿ ಆತನನ್ನು ಉನ್ನತಕ್ಕೆ ಏರಿಸಲಾಯಿತು, ಆತ್ಮೀಕ ಸಮತಲದಲ್ಲಿ (Spirit plane) ಎಲ್ಲಾ ನಾಮಕ್ಕಿಂತಲೂ ಮೇಲಾದ ನಾಮವನ್ನು ಕೊಡಲಾಯಿತು. ಪಾಪ ಮಾಡಿ ತನ್ನ ಮನುಷ್ಯನ ಹಕ್ಕುಗಳನ್ನು ಕಳೆದುಕೊಳ್ಳಲಿಲ್ಲ, ಆದರೆ ತಂದೆಯ ಚಿತ್ತಕ್ಕೆ ವಿಧೇಯನಾಗಿ ಅದನ್ನು ಒಪ್ಪಿಸಿಕೊಟ್ಟನು, ಆತನು ಇವುಗಳನ್ನು ಮನುಕುಲಕ್ಕೆ ಉಯಿಲು ಅಥವಾ ಸಾಕ್ಷಿಯಾಗಿ ನೀಡಬೇಕು.

---

**R4642**

## ಜೀವವನ್ನು ಅರ್ಪಿಸಲಾಯಿತು, ಇನ್ನು ಪಾವತಿಸಲಾಗಲಿಲ್ಲ

### LIFE LAID DOWN, NOT PAID OVER

ಯೇಸು ಏನನ್ನು ಬಲಿ ಸಲ್ಲಿಸಿದನು, ಏನನ್ನು ಅರ್ಪಿಸಿದನು ಎಂಬದನ್ನು ನಾವು ಸ್ಪಷ್ಟವಾಗಿ ನೋಡುತ್ತೇವೆಯೇ? ಆತನು ತನ್ನನ್ನು ತಾನೇ ಅರ್ಪಿಸಿಕೊಂಡನು, ತಂದೆಯ ಚಿತ್ತ ಏನೇ ಇರಲಿ ಅದಕ್ಕೆ ತನ್ನನ್ನು ಒಪ್ಪಿಸಿಕೊಟ್ಟನು, ಆದರೆ ಪಾಪವನ್ನು ಮಾಡಿ ತನ್ನ ಭೂಮಿಯ ಜೀವನವನ್ನು ಕಳೆದುಕೊಳ್ಳಲಿಲ್ಲ. ಪರಲೋಕ ಸ್ವಭಾವವನ್ನು ಹೊಂದಿಕೊಳ್ಳುವುದಕ್ಕಾಗಿ ಆತನು ತನ್ನ ಭೂಮಿಯ ಜೀವವನ್ನು ವಿನಿಮಯ (Exchange) ಮಾಡಿಕೊಳ್ಳಲಿಲ್ಲ. ಆತನು ತನ್ನ ಸ್ವಂತ ಮಾತುಗಳಿಗೆ ಅನುಗುಣವಾಗಿ. "ನನ್ನ ಪ್ರಾಣವನ್ನು ಕೊಡುವದಕ್ಕೆ, ಅದನ್ನು ತಿರಿಗಿ ಪಡೆದುಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು; ಈ ಅಪ್ಪಣೆಯನ್ನು ತನ್ನ ತಂದೆಯಿಂದ ಹೊಂದಿದ್ದೇನೆ." ಎಂದು ಹೇಳುತ್ತಾ ತನ್ನ ಲೌಕಿಕ ಹಕ್ಕುಗಳನ್ನು ಒಪ್ಪಿಸಿದನು ಅಥವಾ ನೀಡಿದನು. ಯಾವ ಮನುಷ್ಯನೂ ಯೇಸುವಿನಿಂದ ಅದನ್ನು ಕಸಿದುಕೊಳ್ಳಲಿಲ್ಲ, ಅಂದರೆ ಯಾರಿಗೂ ಆ ಶಕ್ತಿ ಇರಲಿಲ್ಲ, ಏಕೆಂದರೆ ದೇವರು, "ನನ್ನ ಆಜ್ಞಾವಿಧಿಗಳ ಪ್ರಕಾರ ನಡೆದುಕೊಳ್ಳುವವರು ಆ ಆಜ್ಞಾವಿಧಿಗಳ ಮೂಲಕ ಬದುಕುವರು." ಎಂದು ವಾಗ್ದಾನ ಮಾಡಿದ್ದಾನೆ. ಆದ್ದರಿಂದ ನಮ್ಮ ಕರ್ತನು ಸ್ವಯಂ ಪ್ರೇರಣೆಯಿಂದ ಸಲ್ಲಿಸದೆ ಇದ್ದಿದ್ದರೆ ಆತನ ಜೀವವನ್ನು ಸಂರಕ್ಷಿಸಲಾಗುತ್ತಿತ್ತು.

ಆತನು ತನ್ನ ಜೀವವನ್ನು ಮತ್ತೆ ಪಡೆಯುವಂತೆ ಅದನ್ನು ಅರ್ಪಿಸಿದನು. ಆತನು ಅದನ್ನು ತನ್ನ ತಂದೆಯ ಕೈಯಲ್ಲಿ ಒಪ್ಪಿಸಿಕೊಟ್ಟು, ಹೀಗೆಂದನು "ತಂದೆಯೇ, ನನ್ನ ಆತ್ಮವನ್ನು(ಪ್ರಾಣವನ್ನು) ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ." ನಂತರ ಯೇಸು ಸತ್ತವರೊಳಗಿಂದ ಎದ್ದಾಗ ಆತನ ಲೌಕಿಕ ಜೀವನ, ಲೌಕಿಕ ರಕ್ಷಣೆ, ಲೌಕಿಕ ಗೌರವ ಮತ್ತು ಮಹಿಮೆ, ಲೌಕಿಕ ಪ್ರಭುತ್ವ ಮತ್ತು ಅಧಿಕಾರದ ಹಕ್ಕುಗಳು ಆತನಿಗೆ ನೂತನ ಸೃಷ್ಟಿಯಾಗಿ ಸೇರಿದ್ದವು. ಆತನು ತನ್ನ ಯಾವುದೇ ಲೌಕಿಕ ಹಕ್ಕುಗಳನ್ನು ಕಳೆದುಕೊಂಡಿರಲಿಲ್ಲ. ಆ ಲೌಕಿಕ ಹಕ್ಕುಗಳು ಆದಾಮ ಮತ್ತು ಆತನ ಎಲ್ಲಾ ಸಂತತಿ ಯೇಸುವಿನ ಮೂಲಕ ದೇವರು ನೀಡುವ ಎಲ್ಲಾ ಆಶೀರ್ವಾದಗಳಿಗೆ ಆಧಾರವಾಗಿದೆ. ಯೇಸುವಿಗೆ ಬಿಟ್ಟುಕೊಡಲು ಬೇರೆ ಏನೂ ಇಲ್ಲ. ಆತನಿಗೆ ಕೊಡಲು ಬೇರೇನೂ ಅಗತ್ಯವಿಲ್ಲ; ಏಕೆಂದರೆ, ಈ ಬಲಿಯ ಪುಣ್ಯದಲ್ಲಿ (ಅರ್ಹತೆಯಲ್ಲಿ\Merit) ಮೊದಲ ಆದಾಮನಿಗೆ ನೀಡಬೇಕಾದ ಸರಿಸಮಾನವಾದ ಬೆಲೆ ಇದೆ, ಮತ್ತು ಎಲ್ಲರಿಗೂ ಅದು ಸಾಕಾಗಿದೆ (ತೃಪ್ತಿ ಇದೆ).

# ಪಾಸ್ಟರ್ ರಸ್ಸೆಲ್ ಹೇಳಿದ್ದೇನು?

**What Pastor Russell Said.**

## 1. ಯೇಸುವಿನ – ಜೀವನ ಹಕ್ಕುಗಳು

**Q 372 : 2 - ಪ್ರಶ್ನೆ (1911) – 2 –** ಯೇಸು ತನ್ನ ಜೀವ ಹಕ್ಕುಗಳನ್ನು ಪ್ರತಿಷ್ಠೆಯ ಸಮಯದಲ್ಲಿ ಅರ್ಪಿಸಿದ್ದರೆ, ಆತನು ಪುನರುತ್ಥಾನದ ಸಮಯದಲ್ಲಿ ಅವುಗಳನ್ನು ಇನ್ನೂ ಹೇಗೆ ಹೊಂದಲು (ಉಳಿಸಿಕೊಳ್ಳಲು) ಸಾಧ್ಯ?

ಉತ್ತರ – ನಾವು ಇಂಗ್ಲಿಷ್ ಭಾಷೆಯನ್ನು ಸರಿಯಾಗಿ ಕಲಿತಿಲ್ಲ ಎಂದು ತೋರುತ್ತದೆ ಅಥವಾ ಕನಿಷ್ಠ ಪಕ್ಷ, ನಾವು ಬೇರೆ ಬೇರೆ ಶಾಲೆಗಳಲ್ಲಿ ಕಲಿತಿದ್ದೇವೆ ಮತ್ತು ವಿಭಿನ್ನ ನಿಘಂಟುಗಳನ್ನು(Dictionaries) ಹೊಂದಿದ್ದೇವೆ-- ಏಕೆಂದರೆ ಸ್ಪಷ್ಟವಾಗಿ, ಕರ್ತನ ಜನರು, ಒಂದೇ ರೀತಿಯ ಆಲೋಚನೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಆ ಆಲೋಚನೆಯನ್ನು ವ್ಯಕ್ತಪಡಿಸಲು ವಿಭಿನ್ನ ರೂಪಗಳನ್ನು (ಭಾವನೆಗಳನ್ನು) ಬಳಸುತ್ತಾರೆ. ಈಗ, ಜೀವ- ಹಕ್ಕುಗಳನ್ನು ತ್ಯಜಿಸುವುದು ಎಂದರೇನು? ಯೇಸು ತನ್ನ ಪ್ರತಿಷ್ಠೆಯ ಸಮಯದಲ್ಲಿ, "ಇಗೋ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ." ಎಂದು ಹೇಳಿದಾಗ, ಆತನು ಏನ್ನನ್ನು ಅರ್ಪಿಸಿದನು? ಆತನು ತನ್ನ ಚಿತ್ತವನ್ನು ಅರ್ಪಿಸಿದನು. ಆತನ ಚಿತ್ತದಲ್ಲಿ ಏನೆಲ್ಲಾ ಒಳಗೊಂಡಿತ್ತು? ದೇವರ ಚಿತ್ತದಲ್ಲಿ ಆತನಿಗೆ ಸಂಭವಿಸಬಹುದಾದ ಎಲ್ಲವೂ ಒಳಗೊಂಡಿತ್ತು – ಆತನ ಜೀವನ ಮತ್ತು ಎಲ್ಲಾ ರೀತಿಯ ಆತನ ಹಕ್ಕುಗಳು ಒಳಗೊಂಡಿತ್ತು; ಆತನು ತನ್ನ ಸಂಪೂರ್ಣ ಚಿತ್ತವನ್ನು, ಪೂರ್ಣ ಹೃದಯವನ್ನು ದೇವರಿಗೆ ಒಪ್ಪಿಸಿದಾಗ, ಅದರಲ್ಲಿ ಎಲ್ಲವೂ ಒಳಗೊಂಡಿತ್ತು. ಹಾಗಾದರೆ ಆತನಿಗೆ ಯಾವುದೇ ರೀತಿಯಾದ ಜೀವ–ಹಕ್ಕುಗಳು ಉಳಿದಿಲ್ಲವೇ? ಆತನ ಹೃದಯದಲ್ಲಿ ಇನ್ನೂ ಉಳಿದಿತ್ತು, ಯೇಸು ಶಿಲುಬೆಯಲ್ಲಿ "ತೀರಿತು" ಎಂದು ಕೂಗುವವರೆಗೂ ಆತನಿಗೆ ಆ ಜೀವವನ್ನು ತ್ಯಜಿಸಲು ಆ ಜೀವ–ಹಕ್ಕುಗಳು ಉಳಿದಿತ್ತು, ಆದ್ದರಿಂದ ಆತನು ಒಂದು ಅರ್ಥದಲ್ಲಿ ತನ್ನ ಜೀವವನ್ನು ತ್ಯಜಿಸಿದನು ಮತ್ತು ಇನ್ನೊಂದು ಅರ್ಥದಲ್ಲಿ ಆತನು ತನ್ನ ಜೀವವನ್ನು ತ್ಯಜಿಸಲಿಲ್ಲ; ತಂದೆಯ ಚಿತ್ತದಲ್ಲಿ ಯಾವುದನ್ನೂ ತಡೆಹಿಡಿಯುವುದಿಲ್ಲ ಎಂದು ಆತನು ಒಪ್ಪಿಕೊಂಡಿದ್ದನು ಎಂಬ ಅರ್ಥದಲ್ಲಿ ಆತನು ಅದನ್ನು ಅರ್ಪಿಸಿದ್ದನು – ತಂದೆಯ ಚಿತ್ತ ಏನೇ ಇರಲಿ, ಆತನು ಅದನ್ನು ಮಾಡುತ್ತಾನೆ. ಆ ಅರ್ಥದಲ್ಲಿ ಅವನು ತನ್ನ ಎಲ್ಲವನ್ನೂ ಪ್ರತಿಷ್ಠೆಪಡಿಸಿದ್ದನು. ಆದರೆ ಅದನ್ನು ಅರ್ಪಿಸುವುದು ಒಂದು ವಿಷಯ ಮತ್ತು ಅದನ್ನು ಅನ್ವಯಿಸುವುದು ಇನ್ನೊಂದು ವಿಷಯ. ನಾನು ನನ್ನ ಟೋಪಿಯನ್ನು ಇಲ್ಲಿ ಎಲ್ಲೋ ಹಾಕಿದೆ, ಆದರೆ ನನ್ನ ಟೋಪಿ ನನ್ನದಲ್ಲ ಎಂದು ಅರ್ಥವಲ್ಲ, ಅಲ್ಲವೇ? ನನ್ನ ಟೋಪಿ ಈಗ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ, ಆದರೆ ನಾನು ನನ್ನ ಟೋಪಿಯನ್ನು ಹಾಕಿದೆ, ನಾನು ಇನ್ನೊಬ್ಬರ

ವಶದಲ್ಲಿ ನೀಡಿದೆ. ಈಗ, ಆ ಟೋಪಿಯೊಂದಿಗೆ ನನಗೆ ಯಾವುದೇ ಸಂಬಂಧವಿಲ್ಲ ಎಂದು ಅರ್ಥವಲ್ಲ. ನಾನು ಟೋಪಿಯನ್ನು ಯಾರ ಕೈಗೆ ಕೊಟ್ಟೆನೋ ಆ ವ್ಯಕ್ತಿಯನ್ನು ನಿಮಗೆ ಕೊಡಲು ನಾನು ನಿರ್ದೇಶಿಸಬಾರದು ಎಂದು ಅರ್ಥವಲ್ಲ. ನಾನು ಅದನ್ನು ಇಟ್ಟಿದ್ದೇನೆ, ನಾನು ಅದನ್ನು ಅವನ ಕೈಯಲ್ಲಿ ಕೊಟ್ಟಿದ್ದೇನೆ; ಅದನ್ನು ನಿಮಗೆ ಕೊಡಬಹುದೆಂದು ನಾನು ನಿರ್ದೇಶಿಸಬಲ್ಲೆ. ಹಾಗೆಯೇ, ಈಗ ನಮ್ಮ ಕರ್ತನಾದ ಯೇಸು ತನ್ನ ಇಡೀ ಜೀವನವನ್ನು ತಂದೆಯ ಕೈಯಲ್ಲಿ ಒಪ್ಪಿಸಿದನು ಮತ್ತು ಪ್ರತಿಯೊಂದು ವಿಷಯದಲ್ಲೂ ತಂದೆಯ ಚಿತ್ತವನ್ನು ನೆರವೇರಿಸಲು ಸಿದ್ಧನಿದ್ದೇನೆ ಮತ್ತು ಮಾಡಲು ಚಿತ್ತಗೊಂಡಿದ್ದೇನೆ ಎಂದು ಘೋಷಿಸಿದನು, ಏನನ್ನೂ ಹಿಂದೆ ಹಿಡಿದಿಟ್ಟುಕೊಳ್ಳಲಿಲ್ಲ. ಈಗ, ತಂದೆಯ ಚಿತ್ತವನ್ನು ನೆರವೇರಿಸುವಾಗ ಆತನಿಗೆ ಪರೀಕ್ಷೆಗಳು ಮತ್ತು ಅನುಭವಗಳು ಬಂದವು, ಕೊನೆಯದಾಗಿ ಬಂದದ್ದು ಶಿಲುಬೆಯ ಮರಣ, ಮತ್ತು ಆತನು ಅದರಲ್ಲೂ ನಂಬಿಗಸ್ತನಾಗಿದ್ದನು; ಆತನು ತನ್ನ ಜೀವವನ್ನು ಕೊನೆಯವರೆಗೂ ಅರ್ಪಿಸಿದನು, ಏನನ್ನೂ ಉಳಿಸಿಕೊಂಡಿಲ್ಲ, ಮತ್ತು ಅದನ್ನು ಅರ್ಪಿಸುವ ಕೆಲಸವನ್ನು ಮಾಡಿ ಮುಗಿಸಿದನು; ಆದರೆ ಆತನಿಗೆ ಆ ಜೀವಕ್ಕೆ ಯಾವುದೇ ಹಕ್ಕಿಲ್ಲ ಎಂದು ಅರ್ಥವಲ್ಲ; ಆತನು ತನ್ನ ಜೀವವನ್ನು ಬಿಟ್ಟು ಕೊಟ್ಟಿಲ್ಲ. ಒಂದು ವಸ್ತುವನ್ನು ಕೊಡುವದು ಅಥವಾ ಅದನ್ನು ಇನ್ನೊಬ್ಬರ ಕೈಗೆ ಕೊಡುವದು ಎಂದರೆ ಅದನ್ನು ಬಿಟ್ಟುಕೊಡುವುದು ಎಂದರ್ಥವಲ್ಲ. ಆದ್ದರಿಂದ ಯೇಸುವಿಗೆ ಇದ್ದ ಈ ಜೀವನ ಹಕ್ಕುಗಳು ಮತ್ತು ಅದನ್ನು ತಂದೆಗೆ ಒಪ್ಪಿಸಿದ ಈ ಹಕ್ಕುಗಳನ್ನು ಬಿಟ್ಟುಕೊಡಲಾಗಲಿಲ್ಲ ಆದರೆ ಅವನು ಇನ್ನೂ (ಮನುಕುಲಕ್ಕೆ) ಕೊಡಬೇಕಾಗಿದೆ. ಆತನಿಗೆ ಈ ಜೀವದ ಹಕ್ಕುಗಳು ಇಲ್ಲದಿದ್ದರೆ, ಅವುಗಳ ಮೇಲೆ ಯಾವುದೇ ಹಿಡಿತವಿಲ್ಲದಿದ್ದರೆ, ಅವುಗಳ ಮೇಲೆ ಯಾವುದೇ ಹಕ್ಕಿಲ್ಲದಿದ್ದರೆ, ಅವನು ಎಂದಿಗೂ ಲೋಕ ರಕ್ಷಕನಾಗಿರಲು ಸಾಧ್ಯವಿಲ್ಲ, ಏಕೆಂದರೆ ಆತನ ಈ ಜೀವ–ಹಕ್ಕುಗಳನ್ನು ಬಲಿಯಾಗಿ ಅರ್ಪಿಸಿದನು, ಅಥವಾ ದುಷ್ಟ ಮನುಷ್ಯರಿಂದ ಕಲ್ವಾರಿಯಲ್ಲಿ ಅವನಿಂದ ಕಸಿದುಕೊಳ್ಳಲು ಅನುಮತಿಸಲಾಯಿತು ಈ ಜೀವದ–ಹಕ್ಕುಗಳೇ ಲೋಕಕ್ಕೆ ಬೇಕಾಗಿದೆ, ಮತ್ತು ದೇವರು ಹಾಗೂ ಮನುಷ್ಯರ ನಡುವೆ ಮಹಾನ್ ಮಧ್ಯಸ್ಥನಾಗಿ, ಹೊಸ ಒಡಂಬಡಿಕೆಯ ಅಡಿಯಲ್ಲಿ ಈ ಲೋಕದ ಮನುಕುಲಕ್ಕೆ ನೀಡಲು ಉದ್ದೇಶಿಸಿದ್ದಾನೆ. ಮತ್ತು ಆ ಉದ್ದೇಶಕ್ಕಾಗಿಯೇ ಆತನು ಈ ಲೌಕಿಕ ಜೀವ–ಹಕ್ಕುಗಳನ್ನು ಈ ಲೋಕಕ್ಕೆ ನೀಡಬಹುದು, ಆದ್ದರಿಂದ ದೇವರು ಆತನಿಗೆ ಒಂದು ರಾಜ್ಯವನ್ನು ನೀಡಲು, ಮತ್ತು ಆ ರಾಜ್ಯವನ್ನು ಆಳ್ವಿಕೆ ಮಾಡಲು, ಲೋಕದ ಜನರಿಗೆ ಸೂಚನೆ ನೀಡಲು ಮತ್ತು ತಾನು ಅವರಿಗೆ ಏನು ನೀಡಬೇಕೆಂಬುದರ ಬಗ್ಗೆ ಅವರು ತಿಳಿದುಕೊಂಡು, ಮೆಚ್ಚುಗೆಯನ್ನು ವ್ಯಕ್ತಪಡಿಸಲು ಆ ರಾಜ್ಯವನ್ನು ನೇಮಿಸಿದ್ದಾನೆ, ಆದ್ದರಿಂದ ಅವರು ಕ್ರಿಸ್ತನ ಷರತ್ತುಗಳ ಮೇಲೆ ಸ್ವೀಕರಿಸಲು ಸಿದ್ಧರಾಗುತ್ತಾರೆ.

## 2. ಯೇಸು—ಜೀವ-ಹಕ್ಕುಗಳನ್ನು ಒಪ್ಪಿಸುವುದು.

**Q 373 :1:: ಪ್ರಶ್ನೆ (1911)--1--**ಯೊರ್ದನ್‌ನಲ್ಲಿ ಮತ್ತು ಪಂಚಶತ್ತಮ ದಿನದಲ್ಲಿ (ಪೆಂಟಕೋಸ್ಟ್ ಡೇ) ಯೇಸು ತನ್ನ ಜೀವದ ಹಕ್ಕುಗಳನ್ನು ಎರಡು ಬಾರಿ ಹೇಗೆ ಅರ್ಪಿಸಲು ಸಾಧ್ಯ?

**ಉತ್ತರ.--**ಕ್ರಿಸ್ತನು ಪಂಚಶತ್ತಮದ ದಿನದಂದು (ಪೆಂಟಕೋಸ್ಟ್ ಡೇ) ಯಾವುದೇ ಹಕ್ಕುಗಳನ್ನು ಅರ್ಪಿಸಲಿಲ್ಲ. ಆತನು ಯೋರ್ದಾನ್ನಲ್ಲಿ ತನ್ನ ಜೀವನ–ಹಕ್ಕುಗಳನ್ನು ಅರ್ಪಿಸಿದನು. ತಂದೆಯ ಚಿತ್ತವನ್ನು ನೆರವೇರಿಸಲು ತನ್ನ ಜೀವನದ ಹಕ್ಕುಗಳನ್ನು ಅರ್ಪಿಸುವುದನ್ನು ಕಲ್ವಾರಿಯಲ್ಲಿ ಪೂರ್ಣಗೊಳಿಸಿದನು. ಆತನು ಕಲ್ವಾರಿಯಲ್ಲಿ ತನ್ನನ್ನು ತಾನು ಅರ್ಪಿಸಿಕೊಳ್ಳುವ ವಿಷಯವನ್ನು ಮುಗಿಸಿದನು, ಆದರೆ ಹೀಗೆ ಆತನು ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿರುವಾಗ, ಅದು ತನ್ನ ಪುಣ್ಯವನ್ನು (ಅರ್ಹತೆಯನ್ನು) (Merit) ಅನ್ವಯಿಸುವುದಕ್ಕಿಂತ ಸಂಪೂರ್ಣವಾಗಿ ಭಿನ್ನವಾದ ವಿಷಯವಾಗಿದೆ. ಕೆಲವರ ಮನಸ್ಸುಗಳಲ್ಲಿ ಗ್ರಹಿಸಲು ಅದು ತುಂಬಾ ಕಷ್ಟಕರವೆಂದು ತೋರುತ್ತದೆ. ಏಕೆ ಎಂದು ನನಗೆ ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಇದು ಬೇರೆ ವಿಚಾರವನ್ನು ಸುಲಭವಾಗಿ ಅರಿತುಕೊಳ್ಳುವಂತೆ ಇದನ್ನು ಅರಿತುಕೊಳ್ಳುವುದು ಸುಲಭವಾಗಿದೆ.

ಯಾವುದೇ ಆಗಿರಬಹುದು, ಆದರೆ ನನಗೆ ತಿಳಿದ ಹಾಗೆ ಬೇರೆ ಕೆಲವರ ಮನಸ್ಸುಗಳಿಗೆ ನಮ್ಮ ಕರ್ತನು ತನ್ನ ಜೀವವನ್ನು ಪ್ರತಿಷ್ಠೆಯಲ್ಲಿ ಅರ್ಪಿಸುವುದು ಹಾಗೂ ವಾಸ್ತವವಾಗಿ ಅದನ್ನು ಕಲ್ವಾರಿಯಲ್ಲಿ ಅರ್ಪಿಸಿ ಮುಗಿಸುವುದು ಮತ್ತು "ಅತಿ ಪವಿತ್ರ" ಸ್ಥಳದಲ್ಲಿ ಆತನು ತನ್ನ ಬಲಿಯ ಪುಣ್ಯವನ್ನು (Merit) ಅನ್ವಯಿಸುವುದರ ನಡುವಿನ ವ್ಯತ್ಯಾಸವನ್ನು ನೋಡುವುದು ತುಂಬಾ ಕಷ್ಟಕರವಾದ ವಿಷಯವಾಗಿದೆ. ನಿಮಗೆ ಸಹಾಯ ಮಾಡಬಹುದಾದ ಲೌಕಿಕ ವಿವರಣೆಯನ್ನು ನಾನು ಬರೆಯಬಹುದೇ ಎಂದು ನೋಡೋಣ: ನಿಮ್ಮ ಬಳಿ ಒಂದು ಆಸ್ತಿ ಇದೆ ಮತ್ತು ನೀವು ಅದನ್ನು $10,000ಗೆ ಮಾರಿದ್ದೀರಿ ಅಂದುಕೊಳ್ಳೋಣ ಮತ್ತು ನೀವು, "ನನಗೆ $10,000ಗೆ ವಿಶೇಷವಾದ ಉದ್ದೇಶ ಅಥವಾ ಉಪಯೋಗ ಇದೆ ಮತ್ತು ನಾನು ಆ ಆಸ್ತಿಯನ್ನು ಮಾರಾಟ ಮಾಡುತ್ತೇನೆ." ಎಂದು ಹೇಳಿದ್ದೀರಿ. ನೀವು ಮೊದಲು ಏಜೆಂಟ್ನೊಂದಿಗೆ ಒಂದು ಪತ್ರವನ್ನು ನೀಡುವ ಒಪ್ಪಂದವನ್ನು (Deed) ಮಾಡಿಕೊಂಡಿದ್ದೀರಿ. ಅದು ಯೋರ್ದಾನ್ನಲ್ಲಿ ನಮ್ಮ ಕರ್ತನ ಒಡಂಬಡಿಕೆಗೆ ಅನುಗುಣವಾಗಿರುತ್ತದೆ. ನಂತರ ಸರಿಯಾದ ಸಮಯದಲ್ಲಿ, ಒಂದು ತಿಂಗಳ ನಂತರ (ಅಂದುಕೊಳ್ಳೋಣ), ನೀವು ಆಸ್ತಿಯ ಮೇಲಿರುವ ಎಲ್ಲಾ ಹಕ್ಕುಗಳ ಮೇಲೆ ಪತ್ರಕ್ಕೆ ಸಹಿ ಹಾಕಿದ್ದೀರಿ (ಮಾರಿದ್ದೀರಿ) ಮತ್ತು $10,000 ಪಡೆದುಕೊಂಡಿದ್ದೀರಿ ಮತ್ತು ಅದನ್ನು ಬ್ಯಾಂಕಿನಲ್ಲಿ ಠೇವಣಿ(Deposit) ಮಾಡಿದ್ದೀರಿ. ಈಗ ಬ್ಯಾಂಕಿನಲ್ಲಿರುವ ಹಣವು ಆ ಆಸ್ತಿಯ ಮಾರಾಟದಿಂದ ಬಂದ ಹಣವಾಗಿದೆ. ಈಗ ಆ ಹಣವು ವಾಸ್ತವವಾಗಿ ಇನ್ನೂ ನಿಮ್ಮದಾಗಿದೆ; ನೀವು ಆಸ್ತಿಯನ್ನು ಮಾರಾಟ ಮಾಡಿದ್ದೀರಿ, ಅದರ ಫಲಿತಾಂಶವಾಗಿ ನೀವು ಕೆಲವು ಕೆಲಸಗಳನ್ನು ಮಾಡಬಹುದು ಮತ್ತು ಆ ಫಲಿತಾಂಶವು ಈಗ ನಿಮ್ಮ ಬ್ಯಾಂಕಿನಲ್ಲಿರುವ $10,000ನಲ್ಲಿ ಪ್ರತಿನಿಧಿಸಲಾಗಿದೆ. ನಂತರ ಆ ಹಣವನ್ನು ಕೆಲವು ನಿರ್ದಿಷ್ಟ ಉದ್ದೇಶಕ್ಕಾಗಿ ನೀವು ಇನ್ನೂ ಬ್ಯಾಂಕಿಗೆ ಆದೇಶ (order)ನೀಡುವುದು ಅಥವಾ ಚೆಕ್(cheque) ನೀಡುವದು ನಿಮ್ಮ ಕೈಯಲ್ಲಿದೆ.

ಈಗ ಈ ನಾಲ್ಕು ಕಾರ್ಯವಿಧಾನಗಳು ನಮ್ಮ ಕರ್ತನ ನಾಲ್ಕು ವಹಿವಾಟುಗಳಿಗೆ ಸಂಬಂಧಿಸಿದೆ. ಮೊದಲು, ಆತನು ತನ್ನನ್ನು ಪ್ರತಿಷ್ಠೆ ಮಾಡಿಕೊಂಡನು, ಅದು ರಿಯಲ್ ಎಸ್ಟೇಟ್ ಏಜೆಂಟ್(ದಳ್ಳಾಳಿ) ಜೊತೆ ಒಪ್ಪಂದಕ್ಕೆ ಸಹಿ ಹಾಕಿದಂತಿದೆ. ಎರಡನೆಯದಾಗಿ, ಅವನು ಕಲ್ವಾರಿಯಲ್ಲಿ ಆ ವಿಷಯವನ್ನು ಮುಗಿಸಿದನು, ಮತ್ತು ಅದು ಪತ್ರಕ್ಕೆ ಸಹಿ ಹಾಕುವುದು ಮತ್ತು ಪತ್ರವನ್ನು ಪೂರ್ಣ ವಿತರಣೆ ಮಾಡುವುದಕ್ಕೆ ಅನುರೂಪವಾಗಿದೆ.

ಮೂರನೆಯದಾಗಿ, ಆತನು ಹಣವನ್ನು ಬ್ಯಾಂಕಿನಲ್ಲಿ ತನ್ನ ಖಾತೆಯಲ್ಲಿ ಇಡುತ್ತಾನೆ, ಮತ್ತು ಅದು ಆತನು ತನ್ನನ್ನು ತಂದೆಯ ಕೈಗೆ ಹೇಗೆ ಒಪ್ಪಿಸಿದನೆಂದು ಪ್ರತಿನಿಧಿಸುತ್ತದೆ – "ತಂದೆಯೇ, ನಾನು ನನ್ನ ಆತ್ಮವನ್ನು(ಪ್ರಾಣವನ್ನು) ನಿನ್ನ ಕೈಗಳಲ್ಲಿ ಒಪ್ಪಿಸುತ್ತೇನೆ." ಮತ್ತು ನಾಲ್ಕನೆಯದಾಗಿ, ಬ್ಯಾಂಕಿನಲ್ಲಿರುವ ಹಣದ ಬಳಕೆ ಅಥವಾ ವಿಲೇವಾರಿ ನಿಮಗೆ ಇರುವಂತೆಯೇ ಆತನು ತಂದೆಯ ಕೈಯಲ್ಲಿ ಆ ಪುಣ್ಯದ (ಅರ್ಹತೆಯನ್ನು\Merit) ವಿಲೇವಾರಿ ಅಥವಾ ಬಳಕೆಯನ್ನು ಹೊಂದಿದ್ದನು. ಅದು ನಿಮ್ಮ ಖಾತೆಗೆ ಸೇರಿದೆ. ಚೆಕ್ ಅನ್ನು ಸ್ವೀಕರಿಸಬಲ್ಲವರು ನೀವೇ. ಆದ್ದರಿಂದ ನಮ್ಮ ಕರ್ತನ ಪುಣ್ಯವು (ಅರ್ಹತೆಯನ್ನು\Merit) ತಂದೆಯ ಕೈಯಲ್ಲಿ ಕರ್ತನ ಖಾತೆಗೆ ಸೇರಿತ್ತು, ಮತ್ತು ಆತನು ಚೆಕ್ಕನ್ನು (cheque) ಸ್ವೀಕರಿಸಬಲ್ಲನು, ಮತ್ತು ಆ ಪುಣ್ಯದ (ಅರ್ಹತೆಯನ್ನು\Merit) ಅನ್ವಯವನ್ನು ಮಾಡಬಹುದು ಮತ್ತು ಈಗ (ಸಭೆಗೆ) ಆತನು ಆ ಪುಣ್ಯದ (ಅರ್ಹತೆಯನ್ನು\Merit) ಅನ್ವಯವನ್ನು ಮಾಡುತ್ತಿದ್ದಾನೆ ಎಂದು ಅಪೋಸ್ತಲನು ನಮ್ಮ ಪರವಾಗಿ ಹೇಳುತ್ತಾನೆ. ಮತ್ತು ನಮ್ಮ ಪರವಾಗಿ ಅದನ್ನು ಮಾಡಲಾಗಿದೆ ಎಂಬುದಕ್ಕೆ ಪುರಾವೆಯನ್ನು (ಸಾಕ್ಷಿಯನ್ನು) ಪಂಚಶತ್ತಮ ದಿನದಂದು (ಪೆಂಟಕೋಸ್ಕ -ನಲ್ಲಿ) ಸೂಚಿಸಲಾಯಿತು, ಕ್ರಿಸ್ತನ ದೇಹವಾಗಿರುವ ಕೆಲವು ಸದಸ್ಯರ ಮೇಲೆ ಆ ಆಶೀರ್ವಾದ ಬಂದದಕ್ಕೆ ಸೂಚನೆಯಾಗಿದೆ.

## 3. ಜೀವ–ಹಕ್ಕುಗಳು–ಅಗತ್ಯವಾಗಿದೆ.

**Q 444:1 :: ಪ್ರಶ್ನೆ (1911–Z)--1--** ಕ್ರಿಸ್ತನು ತನ್ನ ಬಳಿ ಲೌಕಿಕ ಜೀವನದ ಹಕ್ಕುಗಳನ್ನು

ಹೊಂದಿಲ್ಲದಿದ್ದರೆ, ಆತನು ಲೋಕಕ್ಕೆ ನಿತ್ಯನಾದ ತಂದೆಯಾಗಲು ಸಾಧ್ಯವೇ?

**ಉತ್ತರ.--**ನಮ್ಮ ಕರ್ತನಾದ ಯೇಸು ಸಾವಿರ ವರ್ಷದ ಆಳ್ವಿಕೆಯಲ್ಲಿ ಆದಾಮ ಮತ್ತು ಆತನ ಸಂತತಿಗೆ ಆ ಹಕ್ಕನ್ನು ನೀಡುವ ಸಲುವಾಗಿ ಭೂಮಿಯ ಜೀವನದ ಹಕ್ಕನ್ನು ಆಸ್ತಿಯಾಗಿ ಹೊಂದಿಲ್ಲದಿದ್ದರೆ, ಕರ್ತನನ್ನು ಆ ಸಂತತಿಯ ತಂದೆ ಎಂದು ಸರಿಯಾಗಿ ಹೇಳಲಾಗುವುದಿಲ್ಲ. ಆತನಿಗೆ ನೀಡಲು ಜೀವ, ಈ ಭೂಮಿಯ ಜೀವನ ಇಲ್ಲದಿದ್ದರೆ ಆತನು ಸಂತತಿಯನ್ನು ಮರುಸ್ಥಾಪಿಸಲು ಸಾಧ್ಯವಿಲ್ಲ.

## 4. ಜೀವನ ಹಕ್ಕುಗಳು -- ಯೇಸುವಿನ ಹಕ್ಕುಗಳು ಸಭೆಗೆ ಹೊರಿಸಲ್ಪಟ್ಟಿದೆಯೇ (Imputed)?

**Q445:1 :: ಪ್ರಶೆ (1912)--**1--ಯೇಸುವಿನ ಜೀವ ಹಕ್ಕುಗಳನ್ನು ಸಭೆಗೆ ಹೊರಿಸ (ವಿಧಿಸ)ಲಾಗಿದೆ ಎಂದು ನೀವು ಬೋಧಿಸುವುದನ್ನು ನಾವು ಅರ್ಥಮಾಡಿಕೊಂಡಿದ್ದೇವೆಯೇ?

**ಉತ್ತರ.--**ಗಣನೀಯವಾಗಿ ಹಾಗೆಯೇ! ಯೇಸುವಿಗೆ ಎರಡು ಜೀವಿಸುವ ಹಕ್ಕುಗಳಿವೆ. ಆತನಿಗೆ ಮನುಷ್ಯನಾಗಿ ಜೀವಿಸುವ ಹಕ್ಕಿದೆ. ಆತನು ತನ್ನ ಲೌಕಿಕ(ಭೂಮಿಯ) ಜೀವನವನ್ನು ಅರ್ಪಿಸಿದನು; ಅದನ್ನು ಆತನಿಂದ ಕಸಿದುಕೊಳ್ಳಲಿಲ್ಲ. ಆತನು ಅದನ್ನು ದೈವಿಕ ವ್ಯವಸ್ಥೆಗೆ ಅನುಗುಣವಾಗಿ ಅರ್ಪಿಸಿದನು: “ಮರಣದ ವರೆಗೂ” ಅದನ್ನು ಅರ್ಪಿಸಿದನು. ಆತನು ಅರ್ಪಿಸಿದ್ದು ಇನ್ನೂ ಆತನಿಗೇ ಸೇರಿದೆ. ನಾನು ನನ್ನ ಪುಸ್ತಕವನ್ನು ಇಲ್ಲಿ ಮೇಜಿನ ಮೇಲೆ ಇಟ್ಟು ಸ್ವಲ್ಪ ಸಮಯದವರೆಗೆ ಅಲ್ಲಿಯೇ ಬಿಟ್ಟರೆ, ಅದು ಇನ್ನೂ ನನ್ನದು ಮತ್ತು ನನ್ನ ಪುಸ್ತಕವನ್ನು ತೆಗೆದುಕೊಳ್ಳಲು ನನಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ನನಗೆ ಸ್ವಾತಂತ್ರ್ಯವಿಲ್ಲವೇ? ಯೇಸು ತನ್ನ ಜೀವವನ್ನು ಕಳೆದುಕೊಳ್ಳಲಿಲ್ಲ. ಅವನು ಅದನ್ನು ತಾನಾಗಿಯೇ ಅರ್ಪಿಸಿದನು. “ನಾನು ಅದನ್ನು ಕೊಡುವುದಕ್ಕೆ ನನಗೆ ಅಧಿಕಾರವಿದೆ; ಅದನ್ನು ತಿರಿಗಿ ಪಡಕೊಳ್ಳುವದಕ್ಕೆ ನನಗೆ ಅಧಿಕಾರವಿದೆ.” ಸತ್ತವರೊಳಗಿಂದ ಪುನರುತ್ಥಾನಗೊಳ್ಳುವ ಸಮಯ ಬಂದಾಗ, ಆತನು ದೈವಿಕ ಸಮತಲದಲ್ಲಿ ದೇವರ ಮಗನಾಗಿ ಅತ್ಯುನ್ನತ ತಲದಲ್ಲಿ ಜೀವವನ್ನು ಪಡೆದುಕೊಂಡನು. ಅದು ಆತನು ತನ್ನ ಜೀವವನ್ನು ಅರ್ಪಿಸಿದ್ದಕ್ಕಾಗಿ ದೊರೆತ ಪ್ರತಿಫಲವಾಗಿತ್ತು. ಇದು “ಪ್ರತಿಫಲ ಹೊಂದಿದ ಜೀವ”ವಾಗಿತ್ತು. ಇದು ದೇವರು ಆತನಿಗೆ ನೀಡಿದ ಉಡುಗೊರೆಯಾಗಿತ್ತು (Gift). ಇದು ಆತನು ಮರಣದವರೆಗೂ ವಿಧೇಯತೆ ತೋರಿಸಿದಕ್ಕೆ ದೊರೆತ ಫಲವಾಗಿತ್ತು. ಆತನಿಗೆ ಇನ್ನೂ ಲೌಕಿಕ ಜೀವನದ ಹಕ್ಕಿದೆ, ಆದರೆ ಆತನಿಗೆ ದೈವಿಕ ಜೀವನವನ್ನು ಪ್ರತಿಫಲವಾಗಿ ನೀಡಲಾಯಿತು. ಆತನು ಈ ದೈವಿಕ ಜೀವನವನ್ನು ಹೊಂದಿದ್ದರೂ, ಆತನು ಲೌಕಿಕ ಜೀವನದ ಈ ಲೌಕಿಕ ಹಕ್ಕನ್ನು ಸಹ ಹೊಂದಿದ್ದಾನೆ, ಮತ್ತು ಆತನು ಬಯಸಿದಂತೆ ಇದನ್ನು(ಮನುಕುಲಕ್ಕೆ) ಕೊಡಲು ಆತನಿಗೆ ಅವಕಾಶವಿದೆ. ಅದು ದೇವರ ಕೈಯಲ್ಲಿದೆ, “ತಂದೆಯೇ, ನಾನು ನನ್ನ ಆತ್ಮವನ್ನು(ಪ್ರಾಣವನ್ನು) ನಿನ್ನ ಕೈಗಳಲ್ಲಿ ಒಪ್ಪಿಸುತ್ತೇನೆ.” ಆತನು ಅದನ್ನು ಯಾರಿಗಾದರೂ ಅನ್ವಯಿಸಿದ್ದಾನೆಯೇ? ಇಲ್ಲ! ಯೇಸುವಿಗೆ ಇನ್ನೂ ಆತನ ಲೌಕಿಕ (ಭೂಮಿಯ) ಹಕ್ಕುಗಳಿವೆ, ಹಾಗೆಯೇ ಆತನು ದೈವಿಕ ಜೀವವನ್ನು ಸಹ ಹೊಂದಿದ್ದಾನೆ. ಆತನು ಲೌಕಿಕ ಜೀವನದ- ಹಕ್ಕುಗಳನ್ನು ಲೋಕಕ್ಕೆ ನೀಡಲು ಉದ್ದೇಶಿಸಿದ್ದಾನೆ. ದೇವರು ಈ ವ್ಯವಸ್ಥೆಯನ್ನು ಮಾಡಿದ ಉದ್ದೇಶವೇನೆಂದರೆ, ಆತನು ಈ ಭೂಮಿಯ ಜೀವನ ಹಕ್ಕುಗಳನ್ನು ಆದಾಮ ಮತ್ತು ಆತನ ಮಕ್ಕಳಿಗೆ ನೀಡುವದಾಗಿದೆ. ಆದರೆ ಈಗ ಅಲ್ಲ! ಆತನು ಈಗ ಕುರಿಮರಿಯ ವಧುವಾದ ಸಭೆಯನ್ನು ಆಯ್ಕೆ ಮಾಡುತ್ತಿದ್ದಾನೆ. ಇತರರಿಗೆ ಸಂಬಂಧಿಸಿದಂತೆ, ಯೇಸು ತನ್ನ ಮೂಲಕ ತಂದೆಯ ಬಳಿಗೆ ಬರುವ ಎಲ್ಲರಿಗೂ “ಖಾತರಿದಾರ”(Guarantor) ನಾಗುತ್ತಾನೆ. ತಮ್ಮ ದೇಹಗಳನ್ನು “ಸಜೀವ ಯಜ್ಞ”ಗಳಾಗಿ ಅರ್ಪಿಸಿದ ಎಲ್ಲರಿಗೂ ಆತನು ಹಾಗೆಯೇ ಇರುತ್ತಾನೆ. ಆತನು ತನ್ನ ಸ್ವಂತ ಪುಣ್ಯದ (ಅರ್ಹತೆಯ / Merit) ಮೂಲಕ ಇವರನ್ನು ತನ್ನ ಸದಸ್ಯರಾಗಿ ಸ್ವೀಕರಿಸುತ್ತಾನೆ ಮತ್ತು ಪ್ರಸ್ತುತಪಡಿಸುತ್ತಾನೆ. ಹೊರಿಸುವುದು (Imputation) ಮತ್ತು ಪುಣ್ಯ ವನ್ನು(ಅರ್ಹತೆ) (Giving of the merit)

ನೀಡುವುದರ ನಡುವೆ ವ್ಯತ್ಯಾಸವಿದೆ. ನೀವು ನನ್ನಿಂದ ಸ್ವಲ್ಪ ಹಣವನ್ನು ಕೇಳಿದರೆ ಮತ್ತು ನಾನು ನಿಮಗೆ ಚೆಕ್ (Bank cheque) ಅನ್ನು ಅನುಮೋದಿಸಿದರೆ(ನೀಡಿದರೆ), ನೀವು ಆ ಚೆಕ್‌ಅನ್ನು ಬ್ಯಾಂಕಿನಲ್ಲಿ ಪ್ರಸ್ತುತಪಡಿಸಬಹುದು ಮತ್ತು ಹಣವನ್ನು ಪಡೆಯಬಹುದು. ಹಾಗಾದರೆ, ಯೇಸುವಿನ ಪುಣ್ಯಕ್ಕೆ (ಅರ್ಹತೆಗೆ/ Merit) ಸಂಬಂಧಿಸಿದಂತೆ ಹಾಗೆಯೇ ಮಾಡಲಾಗಿದೆ ಎಂದು ಹೇಳಬಹುದು. ಆತನು ತನ್ನ ಪರಿಪೂರ್ಣ ಸಾಮರ್ಥ್ಯದ ಪುಣ್ಯವನ್ನು(ಅರ್ಹತೆಗೆ/ Merit) ನಮಗೆ ಅನುಮೋದಿಸುತ್ತಾನೆ (Endorses) ಅಥವಾ ಹೊರಿಸುತ್ತಾನೆ (Imputes) ಮತ್ತು ಹೀಗೆ ನಾವು ದೇವರ ಮುಂದೆ ಪರಿಶುದ್ಧವಾಗಿಯೂ ಮತ್ತು ಸ್ವೀಕರಿಸಲು ಅರ್ಹವಾಗಿ ನಮ್ಮನ್ನು ಪ್ರಸ್ತುತಪಡಿಸಬಹುದು.

## 5.ಜೀವ-ಹಕ್ಕುಗಳು--ಜೀವಿಸುವ ಹಕ್ಕುಗಳು

**Q446:4::ಪ್ರಶ್ನೆ (1916-Z)--4--**" ಜೀವಿಸುವ ಹಕ್ಕು" ಮತ್ತು "ಜೀವನದ ಹಕ್ಕುಗಳು" ಎಂಬ ಪದಗಳ ಅರ್ಥವೇನು? ಮತ್ತು ಈ ಪದಗಳ ನಡುವೆ ಏನು ವ್ಯತ್ಯಾಸವಿದೆ?

**ಉತ್ತರ.--** ಒಬ್ಬ ವ್ಯಕ್ತಿಯು ದೇವರೊಂದಿಗೆ ಸಾಮರಸ್ಯದಿಂದ ಇದ್ದು ಜೀವಿಸುವ ಹಕ್ಕನ್ನು ಹೊಂದಬಹುದು; ಏಕೆಂದರೆ ದೇವರ ಎಲ್ಲಾ ಬುದ್ಧಿವಂತ ಜೀವಿಗಳು ದೇವರ ದೈವಿಕ ಪ್ರಮಾಣ ಮತ್ತು ಅದರ ಅವಶ್ಯಕತೆಗಳಿಗೆ ಅನುಗುಣವಾಗಿ ಬದುಕಿದರೆ ಅವರು ಜೀವಿಸುವುದನ್ನು ಮುಂದುವರಿಸಬಹುದು ಎಂದು ಆದೇಶಿಸಿದನು. ಆದ್ದರಿಂದ, ಜೀವಿಸುವ ಹಕ್ಕು ಆರಂಭದಲ್ಲಿ ತಂದೆಯಾದ ಆದಾಮನ ಸವಲತ್ತು ಆಗಿತ್ತು. ಅವನಿಗೆ ಜೀವಿಸುವ ಹಕ್ಕಿತ್ತು ಮತ್ತು ಆತನು ಪಾಪ ಮಾಡದಿದ್ದರೆ ಆ ಹಕ್ಕನ್ನು ಕಳೆದುಕೊಳ್ಳುತ್ತಿರಲಿಲ್ಲ. ಯೇಸು ಲೋಕಕ್ಕೆ ಬಂದನು, ಆದರೆ ಅವನು ಮನುಷ್ಯನಾದ ಯೇಸುವಾದ ನಂತರವೂ ಆತನಿಗೆ ಜೀವಿಸುವ ಹಕ್ಕಿತ್ತು. ಈ ಹಕ್ಕು ಇದ್ದ ಕಾರಣದಿಂದಾಗಿ ಆತನು ಆದಾಮ ಮತ್ತು ಆತನ ಸಂತತಿಯ ಪರವಾಗಿ ತನ್ನ ಜೀವವನ್ನು ಬಲಿ ಸಲ್ಲಿಸಲು ಸಾಧ್ಯವಾಗುತ್ತದೆ. ದೀಕ್ಷಾಸ್ನಾನದಲ್ಲಿ ಆತನು ತನ್ನನ್ನು ಪ್ರತಿಷ್ಠೆ ಮಾಡಿಕೊಂಡ ನಂತರ, ಆತನಿಗೆ ಇನ್ನು ಮುಂದೆ ಮನುಷ್ಯನಾಗಿ ಬದುಕುವ ಹಕ್ಕಿಲ್ಲ; ಏಕೆಂದರೆ ಆತನು ಆ ಜೀವಿಸುವ ಹಕ್ಕನ್ನು ತ್ಯಜಿಸಿದ್ದನು. ಆದರೆ ಪವಿತ್ರಾತ್ಮದಿಂದ ಭ್ರೂಣಾಂಕುರಹೊಂದಿದ(Been begotten by the Holy Spirit) ನಂತರ, ಆತನಿಗೆ ನೂತನ ಸೃಷ್ಟಿಯಾಗಿ ಜೀವಿಸುವ ಹಕ್ಕಿದೆ, ಆತ್ಮೀಕವಾಗಿ ಭ್ರೂಣಾಂಕುರಗೊಂಡು, ಆತನು ಕೆಲವು ದೈವಿಕ ನ್ಯಾಯಪ್ರಮಾಣವನ್ನು ಉಲ್ಲಂಘಿಸದೆ ಹೋದರೆ ಅಥವಾ ತನ್ನ ಸ್ವಂತ ಒಪ್ಪಂದವನ್ನು ಅಥವಾ ಒಡಂಬಡಿಕೆಯನ್ನು ಉಲ್ಲಂಘಿಸದೆ ಹೋದರೆ ಆತನಿಗೆ ನೂತನ ಸೃಷ್ಟಿಯಾಗಿ ಜೀವಿಸುವ ಹಕ್ಕಿದೆ. ಈ ಲೋಕದ ಮನುಕುಲವು ಸಾವಿರ ವರ್ಷ ಯುಗದ ನಂತರ ಜೀವಿಸುವ ಹಕ್ಕನ್ನು ಹೊಂದಿರುತ್ತಾರೆ, ಅವರು ಪರಿಪೂರ್ಣತೆಯನ್ನು ತಲುಪಿದ ನಂತರ, ತಂದೆಗೆ ಒಪ್ಪಿಸಲ್ಪಡುತ್ತಾರೆ ಮತ್ತು ತಂದೆಯು ಅವರನ್ನು ಸ್ವೀಕರಿಸುತ್ತಾರೆ. ಅವರು ಆಗ ತಂದೆ ಆದಾಮನು ಪಾಪ ಮಾಡುವ ಮೊದಲು ಹೊಂದಿದ್ದ ಅದೇ ಜೀವಿಸುವ ಹಕ್ಕನ್ನು ಹೊಂದಿರುತ್ತಾರೆ. "ಜೀವನದ ಹಕ್ಕುಗಳು" ಈ ಪದವನ್ನು ನಾವು ವಿಭಿನ್ನ ರೀತಿಯಲ್ಲಿ ಬಳಸಬಹುದು. ಉದಾಹರಣೆಗೆ, ಕರ್ತನಾದ ಯೇಸು ಕ್ರಿಸ್ತನಿಗೆ ಜೀವನದ-ಹಕ್ಕುಗಳು ಇದೆ ಎಂದು ಅನ್ವಯಿಸುವಾಗ, ಆತನು ಮನುಷ್ಯನಾಗಿ ತನ್ನ ಜೀವಿತವನ್ನು ಪ್ರತಿಷ್ಠೆ ಮಾಡಿಕೊಂಡಿದ್ದರೂ, ಆ ಜೀವವನ್ನು ಕಳೆದುಕೊಳ್ಳಲು ಆತನು ನಿಜವಾಗಿಯೂ ಯಾವ ಪಾಪವನ್ನು ಮಾಡಲಿಲ್ಲ ಎಂದು ನಾವು ಹೇಳಬಹುದು. ಅದನ್ನು ಆತನು ಅರ್ಪಿಸಲು ಒಪ್ಪಿಕೊಂಡಿದ್ದನು; ಅದು ನ್ಯಾಯಯುತವಾಗಿ ಆತನದಾಗಿತ್ತು; ಹಾಗಿಲ್ಲದಿದ್ದರೆ ಅದನ್ನು ಮತ್ತೆ ಇತರರಿಗೆ ಬಳಸುವ ಹಕ್ಕು ಆತನಿಗೆ ಇರುತ್ತಿರಲಿಲ್ಲ. ಆತನು ತನ್ನ ವೈಯಕ್ತಿಕ ನೀತಿಯಿಂದಾಗಿ ಹಕ್ಕನ್ನು ಉಳಿಸಿಕೊಂಡಿದ್ದನು. ಆದ್ದರಿಂದ ಆತನು ಇನ್ನೂ ಮನುಷ್ಯ ಜೀವನದ ಹಕ್ಕನ್ನು ಹೊಂದಿದ್ದನು, ಏಕೆಂದರೆ ಅವನು ತನ್ನ ಜೀವವನ್ನು ತೆಗೆದುಕೊಳ್ಳಲು ಅನುಮತಿಸಿದ್ದರಿಂದ ಅದನ್ನು ಕಳೆದುಕೊಂಡಿರಲಿಲ್ಲ. ಆತನಿಗೆ ಇನ್ನೂ ಮನುಷ್ಯ ಜೀವನದ ಹಕ್ಕುಗಳಿವೆ, ಆದರೂ ಆತನಿಗೆ ಈಗ ತನಗಾಗಿ ಮನುಷ್ಯ ಜೀವನದ ಅಗತ್ಯವಿಲ್ಲ ಅಥವಾ ಜೀವನ

ಹಕ್ಕುಗಳು ಬೇಕಿಲ್ಲ. ಆತನಿಗೆ ತುಂಬಾ ಉತ್ತಮವಾದದ್ದು ಇರುವುದರಿಂದ ಮತ್ತು ಆತನು ಒಂದೇ ಸಮಯದಲ್ಲಿ ಎರಡು ಜೀವಗಳನ್ನು ಬಳಸಲು ಸಾಧ್ಯವಾಗದ ಕಾರಣ ಇದಾಗಿದೆ. ಆತನಿಗೆ ದೈವಿಕ ಜೀವನ ಹಕ್ಕುಗಳಿವೆ; ಆದರೆ ಆತನಿಗೆ ಇನ್ನೂ ತನ್ನ ಮನುಷ್ಯ ಜೀವನದ ಹಕ್ಕುಗಳವೆ; ಆದರೆ ಆತನು ಇನ್ನೂ ತನ್ನ ಮನುಷ್ಯ ಜೀವನದ ಹಕ್ಕುಗಳನ್ನು ಉಳಿಸಿಕೊಂಡಿದ್ದಾನೆ; ಮತ್ತು ಇವುಗಳನ್ನು ಆತನು ಈಡುಬಲಿಯಾಗಿ, ಆದಾಮನಿಗೆ ಮತ್ತು ಆದಾಮನ ಮೂಲಕ ಕಳೆದುಕೊಂಡ ಎಲ್ಲವನ್ನೂ ಪೂರ್ಣ ಪರಿಹಾರವಾಗಿ ಮತ್ತೆ ನೀಡಲಿದ್ದಾನೆ.

## 6. ಈಡುಬಲಿ--ಎಲ್ಲಿ ಒದಗಿಸಲಾಯಿತು?

**Q 568:2:: ಪ್ರಶ್ನೆ (1916-Z)--2--**ಈಡುಬಲಿಯನ್ನು ಎಲ್ಲಿ ಒದಗಿಸಲಾಯಿತು?

**ಉತ್ತರ**—ದೈವಿಕ ಉದ್ದೇಶದಲ್ಲಿ, ಜಗತ್ತಿಗೆ ಅಸ್ತಿವಾರ ಹಾಕಿದಂದಿನಿಂದ (ಜಗದುತ್ಪತ್ತಿಗೆ ಮೊದಲೇ) ಈಡುಬಲಿಯನ್ನು ಒದಗಿಸಲಾಯಿತು; ಸತ್ಯವೇದವು ನಮಗೆ ಭರವಸೆ ನೀಡುವದೇನೆಂದರೆ, ದೈವಿಕ ಉದ್ದೇಶದ ಪ್ರಕಾರ ನಮ್ಮ ಕರ್ತನಾದ ಯೇಸು ಕ್ರಿಸ್ತು ಜಗತ್ತಿಗೆ ಅಸ್ತಿವಾರ ಹಾಕಿದಂದಿನಿಂದ (ಜಗದುತ್ಪತ್ತಿಗೆ ಮೊದಲೇ) ಈಡುಬಲಿಯನ್ನು ಒದಗಿಸಲಾಯಿತು; ಸತ್ಯವೇದವು ನಮಗೆ ಭರವಸೆ ನೀಡುವದೇನೆಂದರೆ, ದೈವಿಕ ಉದ್ದೇಶದ ಪ್ರಕಾರ ನಮ್ಮ ಕರ್ತನಾದ ಯೇಸು ಕ್ರಿಸ್ತು ಜಗತ್ತಿಗೆ ಅಸ್ತಿವಾರ ಹಾಕಿದಂದಿನಿಂದ (ಜಗದತ್ಪತ್ತಿಗೆ ಮೊದಲೇ) ದೇವರ ಕುರಿಮರಿಯಾಗಿ ವಧಿಸಲ್ಪಟ್ಟನು (ಪ್ರಕಟನೆ 13 : 8). ಎರಡನೆಯ ಅರ್ಥದಲ್ಲಿ ಹೇಳಬೇಕಾದರೆ ಯೆಹೋವ ದೇವರು ಮತ್ತು ಆತನ ಗೌರವವುಳ್ಳ ಲೋಗೋಸ್(ಯೇಸು) ಇವರ ನಡುವೆ ಒಪ್ಪಂದವನ್ನು ಮಾಡಿಕೊಂಡಾಗ ಈಡುಬಲಿಯ ಬೆಲೆಯನ್ನು ಒದಗಿಸಲಾಯಿತು. ಈ ಪದದ ಇನ್ನೊಂದು ಅರ್ಥದಲ್ಲಿ ಹೇಳಬೇಕಾದರೆ, ಲೋಗೋಸ್(ಯೇಸು) ಮಾಂಸಿಕ ಶರೀರವಾಗಿ ಮಾಡಲ್ಪಟ್ಟು 30 ವರ್ಷ ವಯಸ್ಸಿನಲ್ಲಿ ಪೂರ್ಣ ಮಾನವ ಪರಿಪೂರ್ಣತೆಯನ್ನು ತಲುಪುವವರೆಗೆ ಈಡುಬಲಿಯ ಬೆಲೆಯನ್ನು (ಕ್ರಯವನ್ನು) ಒದಗಿಸಲಾಗಿಲ್ಲ.

ಆಗ (ಅಂದರೆ 30ನೇ ವಯಸ್ಸಿನಲ್ಲಿ) ನಮ್ಮ ಕರ್ತನು ದೇವರ ಏರ್ಪಾಡಿಗೆ ಅನುಗುಣವಾಗಿ, ಈಡುಬಲಿಯ ಸೇವೆ ಸಲ್ಲಿಸಲು ಮತ್ತು ಸ್ವತಃ ಈಡುಬಲಿಯಾಗಿ ಅರ್ಪಿಸಲು ಸಾಧ್ಯವಾಯಿತು. ಆದರೆ ದೇವರೊಂದಿಗೆ ದೀಕ್ಷಾಸ್ನಾನದ ಮೂಲಕ ಒಡಂಬಡಿಕೆ ಮಾಡಿಕೊಂಡು ಮರಣದವರೆಗೆ ತನ್ನ ಜೀವನವನ್ನು ಪೂರ್ಣ ಪ್ರತಿಷ್ಠೆಯಾಗಿ ಅರ್ಪಿಸುವವರೆಗೆ ಆತನು ತನ್ನನ್ನು ತಾನು ಈ ಈಡುಬಲಿಯಾಗಿ ಕೊಡಲಿಲ್ಲ. ಆದರೂ ಅದು ಆಗ ಪೂರ್ಣಗೊಂಡ ವಿಷಯವಾಗಿರಲಿಲ್ಲ, ಏಕೆಂದರೆ ಅದರೊಂದಿಗೆ ಸಂಬಂಧಿಸಿದ ಷರತ್ತುಗಳು ಇದ್ದವು. ಅಲ್ಲಿ ಆತನ ಚಿತ್ತವನ್ನು ತ್ಯಜಿಸಲಾಗಿತ್ತು. ಮತ್ತು ತಂದೆಯಿಂದ ಗುರುತಿಸಲ್ಪಟ್ಟಿದ್ದರೂ, ಆತನ ಪೂರ್ಣ ಶರಣಾಗತಿಯನ್ನು ತೋರಿಸಲು ಪ್ರತಿ ದಿನ ಮತ್ತು ಪ್ರತಿ ಗಂಟೆಗಳು ನಿರೂಪಿಸಿ ತೋರಿಸಬೇಕಾಗಿತ್ತು. ಆತನು ಕಲ್ವಾರಿಯಲ್ಲಿ ಮರಣಹೊಂದಿದಾಗ ಆತನ ಬಲಿಯು ಪೂರ್ಣಗೊಂಡಿತು, "ತೀರಿತು!" ಎಂದು ಕೂಗುತ್ತಾ ಆತನು ಈಡುಬಲಿಯನ್ನು ಅರ್ಪಿಸುವುದನ್ನು ಮುಗಿಸಿದನು; ಅಂದರೆ, ಆತನು ಈಡುಬಲಿಯನ್ನು ಸಂಪೂರ್ಣವಾಗಿ ಒದಗಿಸಿದ್ದನು. ಆದರೂ, ಈಡುಬಲಿಯನ್ನು ಒದಗಿಸುವುದು ಮತ್ತು ನೀಡುವುದು, ಅಥವಾ ತಮ್ಮದಾಗಿಸಿಕೊಳ್ಳುವುದು ಅಥವಾ ನೀಡುವುದರ ನಡುವಿನ ವ್ಯತ್ಯಾಸವನ್ನು ನಾವು ಗುರುತಿಸಬೇಕು. ಅದು ಯೇಸು ಮರಣಹೊಂದಿದ ಸಮಯದಲ್ಲಿ ಮಾತ್ರ ಒದಗಿಸಲ್ಪಟ್ಟಿತು; ಆದರೆ ಮನುಷ್ಯನನ್ನು ಮರಣದಿಂದ ಬಿಡುಗಡೆ ಮಾಡಲು ಅನ್ವಯಿಸುವ ಅರ್ಥದಲ್ಲಿ ಇನ್ನೂ ನೀಡಲ್ಪಟ್ಟಿರಲಿಲ್ಲ.

## 7 . ಕಲ್ವಾರಿಯಲ್ಲಿ ಈಡುಬಲಿಯನ್ನು ಪಾವತಿಸುವದು (ನೀಡುವದು)

**Q 568:4 :: ಪ್ರಶ್ನೆ (1916-Z)--4--**ಕಲ್ವಾರಿಯಲ್ಲಿ ಈಡುಬಲಿಯನ್ನು ಪಾವತಿಸಲಾಗಿದೆಯೇ?

**ಉತ್ತರ**-- ಈಡುಬಲಿಯನ್ನು ಕಲ್ವಾರಿಯಲ್ಲಿ ಅರ್ಪಿಸಲಾಯಿತು, ನಂತರ ನ್ಯಾಯಾದೀಶನ (ತಂದೆಯಾದ ದೇವರ) ಕೈಲ್ಲಿ ಒಪ್ಪಿಸಲಾಯಿತು ಆದರೆ ಒಪ್ಪಂದವನ್ನು ಪೂರ್ಣಗೊಳಿಸುವ ಅರ್ಥದಲ್ಲಿ ಪಾವತಿಸಲಾಗಿಲ್ಲ(ನೀಡಲಾಗಿಲ್ಲ ), ಅದು ಭವಿಷ್ಯದ ಸಮಯಕ್ಕಾಗಿ ಕಾಯ್ದಿರಿಸಲ್ಪಟ್ಟಿದೆ ಎಂದು ತೋರಿಸುವ ಈ ಅಂಶವನ್ನು ನಾವು ಈಗಾಗಲೇ ವಿವರಿಸಿದ್ದೇವೆ. "ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ"--ನನ್ನ ಜೀವವನ್ನು...! ಎಂದು ಯೇಸು ಕೂಗಿದಾಗ ಈಡುಬಲಿಯನ್ನು ಶಿಲುಬೆಯಲ್ಲಿ ನೀಡಲಾಯಿತು! ಹೀಗೆ ಹೇಳುವುದಾದರೆ, ಯೇಸು ಈಡುಬಲಿಯನ್ನು ಖಂಡಿತವಾಗಿಯೂ ಅನ್ವಯಿಸದೆ ಠೇವಣಿಯಾಗಿ (Deposit) ಇಟ್ಟನು.

## 8 . ಈಡುಬಲಿ – ಭೂತ – ವರ್ತಮಾನ – ಭವಿಷ್ಯ ಕಾಲ.

**Q 569:1:: ಪ್ರಶ್ನೆ (1916-Z)--1--**ಈಡುಬಲಿಯನ್ನು ಇನ್ನೂ ಪಾವತಿಸಲಾಗಿದೆಯೇ?

**ಉತ್ತರ--**ಇಲ್ಲ! ಈಗಾಗಲೇ ಅದರ ಕಾರಣಗಳನ್ನು ನೀಡಲಾಗಿದೆ; ಮತ್ತು ಹೆಚ್ಚುವರಿಯಾಗಿ ನಾವು ಹೇಳುವದೇನೆಂದರೆ, ಸಭೆ ಸಂಪೂರ್ಣವಾಗಿ ಮಹಿಮೆ ಹೊಂದಿ ಕರ್ತನೊಂದಿಗೆ ಸೇರುವವರೆಗೆ ಈಡುಬಲಿಯ ಬೆಲೆಯನ್ನು ಸಂಪೂರ್ಣವಾಗಿ ಪಾವತಿಸಲಾಗುವುದಿಲ್ಲ. ನಂತರ ಅದನ್ನು ಇಡೀ ಲೋಕದ ಪರವಾಗಿ ಪಾವತಿಸಲಾಗುತ್ತದೆ, ಇಡೀ ಲೋಕವನ್ನು ಸಾವಿನಿಂದ ಬಿಡುಗಡೆ ಮಾಡಲಾಗುವುದು ಮತ್ತು ಆದಾಮನ (ಮರಣ) ದಂಡನೆಯನ್ನು ರದ್ದುಗೊಳಿಸಲಾಗುವುದು.

## 9. ಈಡುಬಲಿ--ಯೇಸುವಿನಿಂದ ವಿಲೇವಾರಿಯಾಗುತ್ತದೆ (ನೀಡಲಾಗುತ್ತದೆ).

**Q569:2:: ಪ್ರಶ್ನೆ (1916-Z)--2--**ಯೇಸು ಪರಲೋಕಕ್ಕೆ ಏರಿ ಹೋದಾಗ ಈಡುಬಲಿಯ ಬೆಲೆಯನ್ನು (ಮೌಲ್ಯವನ್ನು) ಏನು ಮಾಡಿದನು?

**ಉತ್ತರ--**ಆತನು ಅದನ್ನು ಈಗಾಗಲೇ ನ್ಯಾಯಾದೀಶನ (ತಂದೆಯಾದ ದೇವರ) ಕೈಯಲ್ಲಿ ಠೇವಣಿಯಾಗಿ (Deposit) ಇಟ್ಟಿದ್ದಾನೆ. ಮನುಷ್ಯ ಜೀವನ-ಹಕ್ಕು, ಬೆಲೆ ಇನ್ನೂ ಆತನ ಆಜ್ಞೆಯ ಅಡಿಯಲ್ಲಿದೆ. ಆತನ ಮುಂದಿನ ಹೆಜ್ಜೆ ಏನೆಂದರೆ, ಇನ್ನೂ ಅಭಿವೃದ್ದಿ ಹೊಂದದೆ ಇರುವ ಆತನ ಸಭೆಗೆ ಅದರ ಪಾಲನ್ನು ಹೊರಿಸುವ (ವಿಧಿಸುವ/ Imputing) ಮೂಲಕ ಅಡಮಾನವಿಡುತ್ತಾನೆ.

## 10 . ಈಡುಬಲಿ--ಜೀವನದ ಹಕ್ಕುಗಳ ಅರ್ಥ

**Q 574:2:: ಪ್ರಶ್ನೆ (1916)--2--**ಜೀವನದ ಹಕ್ಕುಗಳು ಎಂಬ ಪದದ ಅರ್ಥವೇನು? ಅಂದರೆ ಮನುಕುಲವು ಎಂದಾದರೂ "ಜೀವನದ ಹಕ್ಕುಗಳನ್ನು" ಎಂದಾದರೂ ಹೊಂದಿದ್ದಾರೆಯೆ?

**ಉತ್ತರ--**ವಿವಿಧ ಮನಸ್ಸುಗಳು (ಜನರು) "ಜೀವನದ ಹಕ್ಕುಗಳು" ಎಂಬ ಪದಗಳಿಗೆ ವಿಭಿನ್ನ ಮೌಲ್ಯವನ್ನು (ಅರ್ಥಗಳನ್ನು) ನೀಡಬಹುದು. ನಾವು ಒಂದು ಅರ್ಥವನ್ನು ಸಲಹೆ ನೀಡುತ್ತೇವೆ, ಅಂದರೆ, ಆದಾಮನು ದೇವರಿಗೆ ವಿಧೇಯನಾಗಿದ್ದಾಗ ಅವನಿಗೆ ಜೀವಿಸುವ ಹಕ್ಕುಗಳಿದ್ದವು, ಏಕೆಂದರೆ ಅವನು ಪರಿಪೂರ್ಣನಾಗಿದ್ದು ದೇವರೊಂದಿಗೆ ಸಾಮರಸ್ಯವನ್ನು ಕಾಯ್ದುಕೊಂಡರೆ ಅವನಿಗೆ ನಿತ್ಯಜೀವ ಸಿಗಬಹುದು ಎಂದು ದೇವರು ಆದೇಶ ನೀಡಿದ್ದನು. ಆದ್ದರಿಂದ ಅವನಿಗೆ ದೇವರ ವ್ಯವಸ್ಥೆ ಮತ್ತು ವಾಗ್ದಾನದ ಅಡಿಯಲ್ಲಿ ಜೀವಿಸುವ ಹಕ್ಕಿತ್ತು. ಮತ್ತು ಯೇಸುವಿಗೆ ಆದಾಮನ ಜೀವಿಸುವ ಹಕ್ಕುಗಳಿದ್ದವು, ಏಕೆಂದರೆ ಯೇಸು ಪರಿಶುದ್ದನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಗಿದ್ದನು ಮತ್ತು ಯಾವ ಪಾಪವನ್ನು ತಿಳಿದಿರಲಿಲ್ಲ(ಮಾಡಲಿಲ್ಲ). ಆದ್ದರಿಂದ ಯೇಸುವಿಗೆ ತಂದೆಯಾದ ಆದಾಮನ ಜೀವನ ಹಕ್ಕುಗಳನ್ನೇ ಹೊಂದಿದ್ದನು. ಮತ್ತು ಯೇಸು ತನ್ನ ಭೂಮಿಯ ಜೀವನದ ಹಕ್ಕುಗಳನ್ನು ಮರಣದವರೆಗೆ ಯಾವುದೇ ವೆಚ್ಚದಲ್ಲಿ (ಏನೇ ಕಷ್ಟ ಬಂದರೂ)

ತಂದೆಯ ಚಿತ್ತವನ್ನು ನೆರವೇರಿಸಲು ಸ್ವಯಂ ಪ್ರೇರಣೆಯಿಂದ, ಹೇಳಬೇಕೆಂದರೆ, ಬಿಟ್ಟುಬಿಡಲಿಲ್ಲ, ಬಿಟ್ಟುಕೊಡಲಿಲ್ಲ, ಆದರೆ ಅವನ ಜೀವನ ಹಕ್ಕುಗಳನ್ನು ಅತಿಕ್ರಮಿಸಲು (ಕಸಿದುಕೊಳ್ಳಲು) ಅವಕಾಶ ಮಾಡಿಕೊಟ್ಟನು. ಆ ಜೀವನ ಹಕ್ಕುಗಳನ್ನು ಅತಿಕ್ರಮಿಸುವುದು ಅವನಿಗೆ ಅಗತ್ಯವಿರಲಿಲ್ಲ. ಆತನು ತಂದೆಯ ಬಳಿ ಕೇಳಿಕೊಂಡರೆ ಅನೇಕ ದಂಡುಗಳ (Legions) ದೇವದೂತರನ್ನೂ ಕಳುಹಿಸಿ ಕಾಪಾಡುತ್ತಾನೆಂದು ಹೇಳಿದನು. ಆದರೆ ಜನರು ಯೇಸುವನ್ನು ಹಾಗೆ ಮಾಡಲು ಬಯಸಲಿಲ್ಲ. ಆದರೆ ಹಳೆಯ ಒಡಂಬಡಿಕೆಯ ಪ್ರವಾದನೆಗಳಲ್ಲಿ ಮತ್ತು ಛಾಯೆಗಳಲ್ಲಿ ಸೂಚಿಸಲಾದ ದೇವರ ಚಿತ್ತವನ್ನು ಆತನು ತಿಳಿದಿದ್ದನು ಮತ್ತು ದೇವರ ಚಿತ್ತವನ್ನು ನೆರವೇರಿಸಲು ಸಂತೋಷಪಟ್ಟನು ಮತ್ತು ಅದು ಸ್ವಯಂ ಪ್ರೇರಿತವಾಗಿ ತ್ಯಾಗ ಮಾಡುವುದು ಮತ್ತು ಮನುಷ್ಯರು ತನ್ನ ಜೀವವನ್ನು ತೆಗೆದುಕೊಳ್ಳಲು (ಕಸಿದುಕೊಳ್ಳಲು) ಅನುಮತಿಸುವುದನ್ನು ಒಳಗೊಂಡಿತ್ತು. ಅವರು ಯೇಸುವಿನ ಜೀವಿಸುವ ಹಕ್ಕುಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ, ಮತ್ತು ಅವರು ಮಾಂಸದಲ್ಲಿ ಮರಣಕ್ಕೆ ಗುರಿಪಡಿಸಿದರೂ, ತಂದೆಯು ಆತನನ್ನು ಆತ್ಮೀಕ ತಲದಲ್ಲಿ (Spirit plane) ಎಬ್ಬಿಸಿದನು ಮತ್ತು ಆ ತಲದಲ್ಲಿ (ನೆಲೆಯಲ್ಲಿ) ಜೀವಿಸುವ ಹಕ್ಕುಗಳಿವೆ, ಮತ್ತು ಆತನಿಗೆ ಇನ್ನೂ ಮಾಂಸದ (ಶರೀರದ) ಜೀವನ ಹಕ್ಕುಗಳಿವೆ. ಹೇಗೆ? ಏಕೆಂದರೆ ಅವನು ಅವುಗಳನ್ನು ಬಿಟ್ಟುಕೊಡಲಿಲ್ಲ. ಅವನು ಅವುಗಳನ್ನು ಕಾನೂನುಬಾಹಿರವಾಗಿ ತನ್ನಿಂದ ತೆಗೆದುಕೊಳ್ಳಲು ಮಾತ್ರ ಅನುಮತಿಸಿದನು. ಅವುಗಳನ್ನು ಆದಾಮ ಮತ್ತು ಆತನ ಸಂತತಿಗೆ ಅನ್ವಯಿಸಲು ಅವನು ಅವುಗಳನ್ನು ಬಿಟ್ಟುಕೊಡಲಿಲ್ಲ. ಅವು ಇನ್ನೂ ಆತನ ಜೀವಿಸುವ ಹಕ್ಕುಗಳಾಗಿದ್ದವು ಮತ್ತು ಆತನು ಸಾಯುವಾಗ, “ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ”, ನನ್ನ ಜೀವನ ಹಕ್ಕುಗಳನ್ನು ಒಪ್ಪಿಸಿಕೊಡುತ್ತೇನೆ ಎಂದು ಹೇಳಿದನು. ಅವು ಆತನು ಬಿಟ್ಟುಕೊಡುತ್ತಿದ್ದ ಲೌಕಿಕ (ಭೂಮಿಯ) ಜೀವನ ಹಕ್ಕುಗಳಾಗಿದ್ದವು ಮತ್ತು ಅವು ಇನ್ನೂ ತಂದೆಯ ಕೈಯಲ್ಲಿವೆ, ಮತ್ತು ಅವು ಸಾವಿರ ವರ್ಷಗಳಲ್ಲಿ ತಂದೆ ಆದಾಮನಿಗೆ ಮತ್ತು ಆದಾಮನ ಎಲ್ಲಾ ಸಂತತಿಗೆ ಅಂತಿಮವಾಗಿ ಬರಬೇಕಾದ ಜೀವನ ಹಕ್ಕುಗಳಾಗಿರುತ್ತದೆ.

**ಆಮೆನ್!!**

**------------------------------**

